ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೬

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೧

೧೧

ಫೆಬ್ರವರಿ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೬

MANAVIKA KARNATAKA, Kannada quarterly of the University of Mysore. Volume 6, Number 2, February 1976. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖನಗಾರರು

	ಶ್ರೀಯುತರಾದ	
1	ಬಿ. ಎಚ್. ಶ್ರೀಧರ	ಕಾರವಾರ ಜಿಲ್ಲೆಯ ಸಿದ್ದಾಪುರದ ಮಹಾತ್ಮಾಗಾಂಧಿ ಸೆಂಟೆನರಿ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರು
2	ಸಿ. ಬಿ. ರಾಮಚಂದ್ರಪ್ಪ	ಇತಿಹಾಸ ಅಧ್ಯಾಪಕರು, ಮೈಸೂರಿನ ಮಹಾರಾಜ ಕಾಲೇಜು
3	ಪಿ. ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
4	ಆರ್. ವಸಂತ	ಪ್ರಾಚೀನ ಇತಿಹಾಸ ಮತ್ತು ಪುರಾತತ್ವವಿಭಾಗದ ಸಂಶೋಧನ ವಿದ್ಯಾರ್ಥಿನಿ, ಮಾನಸಗಂಗೋತ್ರಿ
5	ಡಾ. ಟಿ. ಜಿ. ಕಲಘಟಗಿ	ಪ್ರಾಧ್ಯಾಪಕರು, ಜೈನಶಾಸ್ತ್ರ ಮತ್ತು ಪ್ರಾಕೃತವಿಭಾಗದ ಮಾನಸಗಂಗೋತ್ರಿ
6	ಒ. ಡಿ. ಹೆಗ್ಗಡೆ	ಅಧ್ಯಾಪಕ, ಅರ್ಥಶಾಸ್ತ್ರವಿಭಾಗ, ಮಾನಸಗಂಗೋತ್ರಿ
7	ತಿ. ತಾ. ಶರ್ಮ (ದಿವಂಗತ),	ಕರ್ನಾಟಕದ ಖ್ಯಾತಸಾಹಿತಿ, ಸಂಶೋಧಕ ಪತ್ರಿಕೋದ್ಯಮಿಗಳಾಗಿದ್ದವರು.
8	ಬಿ. ವಸಂತಶೆಟ್ಟಿ	ಇತಿಹಾಸದ ಅಧ್ಯಾಪಕರು, ಎಸ್. ಎಮ್. ಎಸ್. ಜೂನಿಯರ್ ಕಾಲೇಜು, ಬ್ರಹ್ಮಾವರ
9	ಎಸ್. ಎಮ್. ವೀರರಾಘವಾಚಾರ್	ರೀಡರ್, ಅರ್ಥಶಾಸ್ತ್ರವಿಭಾಗ, ಮಾನಸಗಂಗೋತ್ರಿ
10	ಕೆ. ಪದ್ಮಾವತಮ್ಮ	ಇತಿಹಾಸದ ಅಧ್ಯಾಪಕಿ, ಮಹಾರಾಣೀ ಕಾಲೇಜು ಮೈಸೂರು
11	ಡಾ. ರಾಮಕುಲಕರ್ಣಿ	ರೀಡರ್, ಶಿಕ್ಷಣಶಾಸ್ತ್ರವಿಭಾಗ, ಮಾನಸಗಂಗೋತ್ರಿ,

ಬಿ. ಎಚ್. ಶ್ರೀಧರ

ಮಾನವಿಕತೆ ಮತ್ತು ಭಾರತೀಯತೆ

Humanities ಎಂದರೆ ಮಾನವಿಕತೆ, ಅಭಿಜಾತ ವಾಙ್ಮಯದ ರಾಶಿ. ಆಭಿಜಾತ್ಯವಿರುವುದು ಸತ್ ಸಂಪ್ರದಾಯದಲ್ಲಿ. 'ಸತ್' ಎಂದು ಭಾರತೀಯ ನಂಬುವುದು ನಿತ್ಯ ಮಂಗಲಕರ ಧ್ಯೇಯ; ಆ ಆತ್ಯಂತಿಕ ಸರ್ವೋದಯ ದೃಷ್ಟಿ ಅನುಸ್ಯೂತವಾಗಿರುವ ವಿಚಾರ ಪರಂಪರೆ ಮಾನವಿಕತೆ ಎನ್ನಿಸೀತು. ಅದೇ ವಿದ್ಯೆಯಿಂದ ಬರುವ ವಿನಯ (Politeness). ರಾಜವಿದ್ಯೆಯು ವಿನಯಪ್ರಧಾನವೆನ್ನುತ್ತದೆ ಸ್ಮೃತಿ. ಹಿಂದು ನಾಗರಿಕತೆಯ ಆದರ್ಶಗಳಲ್ಲಿದು ಗಣ್ಯ.

'ಅವಿನೀತಂ ಮಗನೇ?' ಎಂದು ಕೇಳಿದ ಕವಿಗಿದು ಗೊತ್ತು. ನೀತಿಯ ಸಾಮಾನ್ಯತೆ, ವಿಶಿಷ್ಟತೆಗಳು ಪ್ರಸಿದ್ಧ. ಅವುಗಳಲ್ಲಿ ಸಮನ್ವಯ ಇರುವುದು ನಿರೀಕ್ಷಿತ. ಅಭಿಜಾತರ ಜಾತಿಯೇ ಜಾತಿ, ಮಿಕ್ಕ ಜಾತಿ 'ಜಾತಿ'ಯೇ ಅಲ್ಲ. ಇದನ್ನು ನಂಬಿದರೆ ಜಾತ್ಯತೀತತೆಗೆ ಅವಕಾಶ ಸಿಕ್ಕದು; ಅಥವಾ ಆಭಿಜಾತ್ಯದ ಜಾತಿಯೇ ಜಾತ್ಯತೀತ. ಭಾರತೀಯ ವಾಙ್ಮಯದ ಸೃಷ್ಟಿಯ ಆದಿ ಆಭಿಜಾತ್ಯವುಳ್ಳದ್ದು. ವೇದಗಳ ಮೂಲಕಲ್ಪನೆ ಅಭಿಜಾತ, ಮಾನವಿಕ.

ವೈಜ್ಞಾನಿಕತೆಯಲ್ಲಿ ಅವೈಜ್ಞಾನಿಕತೆ ಸೇರುವಂತೆ ಅಭಿಜಾತ ಸಂಪ್ರದಾಯದಲ್ಲಿ ಅನಭಿಜಾತತೆ ಸೇರಿದ್ದುಂಟು. ಆಗ ನಾಗರಿಕತೆಯಲ್ಲಿ ಪರಿವರ್ತನ ದೃಷ್ಟಿ ಮೂಡುವುದು. ಸತ್ ಸಂಪ್ರದಾಯಕ್ಕೆ ಅನುಗುಣವಾದ ಪರಿವರ್ತನೆಯು ವಿಕಾಸ, ಪ್ರಗತಿ. ತದ್ ವಿರುದ್ಧವಾದುದು ಅದರ ಆಭಾಸ, ತೋರಿಕೆ. ಭಾಸವಿದ್ದಲ್ಲಿ ಆಭಾಸವಿರುವುದು ದ್ವಂದ್ವ ನಿಯಮ. "ದ್ವಂದ್ವಃ ಸಾಮಾಸಿಕಸ್ಯ-ಚ" ಎಂದು ಗೀತೆ ಹೇಳಿರುವುದು ಇಲ್ಲಿ ಮನನೀಯವಾದ ಜಗಲ್ಲಕ್ಷಣ. ಪರಮಾತ್ಮ ಅದರ ಮೂಲ, ಅವನ ಪ್ರಕೃತಿ ಅವನ ಶಕ್ತಿ. ಜನಕ-ಜನ್ಯ ಭಾವವಿಲ್ಲದ ಕಾರಣ-ಕಾರ್ಯಯೋಜನೆಯಿಲ್ಲ.

ನಮ್ಮ ನಾಗರಿಕತೆಯಲ್ಲಿರುವ ಆಭಿಜಾತ್ಯವನ್ನು ನಮ್ಮ ಅಭಿಜಾತ ವಾಙ್ಮಯದಲ್ಲಿ ಕಂಡುಕೊಳ್ಳುವುದೇ ಪರಮಾರ್ಥಶೋಧ. "ಮನ್ಮನಾಭವ ಮದ್‌ಭಕ್ತೋ ಮದ್ಯಾಜೀ ಮಾಂ ನಮಸ್ಕುರು ಮಾಮೇವೈಷ್ಯಸಿ ಸತ್ಯಂ" ಎಂಬುದು ಭಗವದಾಶ್ವಾಸನ. ಕೃಷ್ಣಧರ್ಮವೆಂಬುದಿಲ್ಲಿ ಇಂಗಿತ. ಕೃಷ್ಣಾಚಾರವು ನಮ್ಮ ರಾಜಕೀಯ, ಆರ್ಥಿಕ, ಕಲಾತ್ಮಕ ಚಟುವಟಿಕೆಗಳಲ್ಲಿ ಹಾಸುಹೊಕ್ಕಾಗಿರಬೇಕೆಂಬುದೇ ಇಲ್ಲಿ ಉದ್ದಿಷ್ಟ. ಕೃಷ್ಣ ಹೋರಾಡಿದ್ದು ಇಂದಿನ ಭಾಷೆಯಲ್ಲಿ Social Justice ಸಾಮಾಜಿಕ ನ್ಯಾಯಕ್ಕಾಗಿ. ಅವನ ಇಡೀ ಜೀವನದಲ್ಲಿ ಅವನ ವೈಯಕ್ತಿಕವಾದ ಲೌಕಿಕ ಸಂಪಾದನೆ ಅಪ್ರಧಾನ. ಅದು ಸರ್ವಪ್ರಧಾನವಾದಾಗ ರಾಷ್ಟ್ರದ ರಾಷ್ಟ್ರತ್ವ ದುರ್ಬಲವಾಗುವುದು. ಆದುದರಿಂದಲೇ ಇಂದು 'ಸಮಾಜವಾದ' ಪ್ರಜಾಪ್ರಭುತ್ವವಾದಿಗಳಿಗೆ ಪ್ರಿಯವಾಗಿದೆ. ವೈಯಕ್ತಿಕವಾದ ಆಸ್ತಿಯ ಹಕ್ಕು ಸಮಾಜವಾದಕ್ಕೆ ವಿರುದ್ಧ ಎಂದು ಅನೇಕರ ಭಾವನೆ. ಇದು ಸುಳ್ಳು.

ಅಸ್ತಿತ್ವವೇ ನಮ್ಮ ಸರ್ವೋಚ್ಚ ಆಸ್ತಿ. ಅಸ್ತಿತ್ವ ಪೋಷಕವಾದ ಅಹಿಂಸಾದಿ ಧರ್ಮಗಳು ಎಲ್ಲ ಆಸ್ತಿಗಳ ಆಧಾರ. ನಿತ್ಯಾಸ್ತಿತ್ವದ ಎಚ್ಚರವೇ ಜೀವನ್ಮುಕ್ತಿ. ಅನಿತ್ಯವಾದ ಅಸ್ತಿತ್ವವು ಅಪ್ರಧಾನ. ವ್ಯಾವಹಾರಿಕವಾಗಿ ಕಸಿದುಕೊಳ್ಳಬಾರದೆಂದು ನಿಯಮಿಸಿದ ಆಸ್ತಿಯು ನಿತ್ಯವಾದ ಆಸ್ತಿ. ಪರರ ದೇಹ

ವನ್ನು ಕಸಿದುಕೊಳ್ಳುವುದು ಕೊಲೆ. ವ್ಯಕ್ತಿಯ ಆಸ್ತಿಯನ್ನು ಕಸಿದುಕೊಳ್ಳುವುದು ಕಳವು. ರಾಷ್ಟ್ರರಾಶಿಯಲ್ಲಿ ರಾಷ್ಟ್ರವೂ ಒಂದು ವ್ಯಕ್ತಿ. ಸರ್ವಾಧಿಕ ವ್ಯಕ್ತಿಯು ಜಗತ್, ವಿಶ್ವ, ಪ್ರಪಂಚ. ಕೃಷ್ಣನು ಅದರ ಆಧಾರ ವೆನ್ನಿಸಿದ್ದರಿಂದ ಪುರುಷೋತ್ತಮ–ತತ್ವಜ್ಞಾನದಲ್ಲಿ.

ಕನಿಷ್ಠ ಪ್ರಮಾಣದ ಅತ್ಯಾವಶ್ಯಕ ಜೀವನ ಸೌಕರ್ಯಗಳು ಪ್ರತಿ ಪ್ರಜೆಗೂ ದೊರಕಬೇಕೆಂಬ ಸಮಾಜ ವಾದದಲ್ಲಿ ಅವನಿಗೆ ದೊರಕುವುದೆಲ್ಲ ಅವನ ಆಸ್ತಿಯಾಗದೆ ಉಳಿಯುವುದೇ? ಆಸ್ತಿಯ ಕಲ್ಪನೆಯು ಪ್ರಪಂಚ ಜೀವನದಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಅಸ್ತಿತ್ವಗಳಿಗೆ ಮೂಲಾಧಾರ. ಸಮೂಹಕ್ಕೆ ವ್ಯಕ್ತಿತ್ವ ಬರುವುದು ಸಮೂಹದ ಸಾಂಸ್ಕೃತಿಕ ನಾಯಕನಿಂದಲೇ. ನಾಯಕತೆಯು ವ್ಯಕ್ತಿತ್ವದ ಕಲ್ಪನೆ ಯಿಂದ ಅವಿಚ್ಛಿನ್ನ. ಅದೇ Organiser ಸಂಘಟಕ ಶಕ್ತಿ. ಸಮಾಜಕ್ಕೆ ಸಂಘಟನೆಯೇ ಉಸಿರು.

ಅವಿಭಕ್ತತೆ–ವಿಭಕ್ತತೆಗಳ ಸಮನ್ವಯವಲ್ಲದೆ ಸಾಮರಸ್ಯವು ಅವ್ಯವಹಾರ್ಯ. ಆದುದರಿಂದ ಸಾಮಾನ್ಯ ಜೀವನದ ಮಾನ್ಯ ನಿಯಮದ ಪ್ರಕಾರ ವ್ಯಕ್ತಿತ್ವ–ಸಮಾಜತ್ವಗಳೆರಡೂ ಸತ್ಯ ಸ್ವಾತಂತ್ರ್ಯವು ಸುಖಕರವೆಂಬ ಕಲ್ಪನೆ ಇರುವ ತನಕ ವ್ಯಕ್ತಿತ್ವವಿಲ್ಲದಂತೆ ಮಾಡುವುದು ನರಕೋನ್ಮುಖ. ವ್ಯಕ್ತಿತ್ವಗಳ ಆನುಪಾತಿಕ ಸಮಾನತೆ Social Justice ಸಾಮಾಜಿಕ ನ್ಯಾಯದ ಆರ್ಥಿಕ ಮುಖ. ಆದುದ ರಿಂದಲೇ ಉಳುವವನಾದರೂ ಇಂದು 'ಒಡೆಯ'ನಾಗಬೇಕಾಯಿತು. ಸ್ವಾತಂತ್ರ್ಯದಂತೆಯೇ ಒಡೆಯ ತನವಾದರೂ ಸೀಮಿತ–ಅನುಪಾಹಿತವಲ್ಲ. ಆದರೂ 'ಒಡೆಯತನ' ನಿರ್ಮೂಲನವಾಗದು. ಸಮಷ್ಟಿಯು ಒಡೆಯತನ ಎಂದು ಹೇಳಿಕೊಂಡಾಗಲೂ ಆಳುವ ಯಜಮಾನ (ಅಧಿಕಾರಿ) ಒಬ್ಬನೇ ಮೇಲ್ತುದಿಯಲ್ಲಿ.

"ದೊಣ್ಣೆ ಯಾರದೋ ಎಮ್ಮೆ ಅವನದು" ಎಂಬುದನ್ನು ತಪ್ಪಿಸಲು ಹೊರಟ ಪ್ರಜಾಪ್ರಭುತ್ವ ಗಳಲ್ಲಿಯೂ ದೊಣ್ಣೆ ಅಧ್ಯಕ್ಷನ ಕೈಯಲ್ಲೋ ಪ್ರಧಾನಿಯ ಕೈಯಲ್ಲೋ ಇರುವುದು ಅನಿವಾರ್ಯ ವಾಯ್ತು. ಅವರು ಆಯ್ಕೆ ಹೊಂದುವುದಕ್ಕೂ ಆಯ್ಕೆ ಮಾಡಿಸಿಕೊಳ್ಳುವುದಕ್ಕೂ ಅಂತರ ಕಡಿಮೆ ಯಾಗುತ್ತ ಹೋದುದು ಸ್ಪಷ್ಟ. ಆದುದರಿಂದ ಪದ್ಧತಿಗಳಲ್ಲಿಯ ಲೋಪದೋಷಗಳಿಗಿಂತ ಮನುಷ್ಯನ ಲೋಪದೋಷಗಳೇ ಪ್ರಬಲ ಎಂಬುದು ಸ್ಪಷ್ಟವಾಗುತ್ತದೆ.

ಐತಿಹಾಸಿಕವಾಗಿ ಪದ್ಧತಿಗಳಿಗೆ ಬಾಲ್ಯ, ಯೌವನ, ವಾರ್ಧಕ್ಯ. ಮರಣಗಳಿರುವುದು ಕಂಡು ಬರುತ್ತದೆ. ಇದಕ್ಕೆ ಮಾನವನೇ ಉದ್ದಕ್ಕೂ ಕಾರಣ. ಆದಮನಿಗೆ ಜೀವನದ ನಿತ್ಯತೆ ಬೇಸರ ಬಂದು ಅನಿತ್ಯತೆಯನ್ನು ಬೇಡಿ ಪಡೆದುಕೊಂಡನೆಂಬ ಕಥೆಯ ಹಾಗೆ ಇನ್ನಾವ ಕಾರಣವೂ ಇರದೆ ಹೋದರೂ 'ಬೇಸರ' ಎಂಬ ಮಾನಸಿಕ ರೋಗದ ದೆಸೆಯಿಂದ ಪದ್ಧತಿಗಳು ಅಳಿದು ಹೋಗುವುವು. ಬೇಸರದ ಕಾರಣ ಸಮತ್ವರಾಹಿತ್ಯ.

ಸಮತ್ವವನ್ನು ಗೀತೆ ಯೋಗವೆಂದಿದೆ. ಯಾವುದರ ಸಮತ್ವ? ದ್ವಂದ್ವಗಳ ಬೆಲೆಯನ್ನು ಸಮನಾಗಿ ನೋಡುವುದು ಸಮತ್ವ. ಅಂಥ ಮನಃಸ್ಥಿತಿ ಸುಲಭ ಸಾಧ್ಯವೇ? ಅದಕ್ಕೇನು ಬೇಕು? ತಕ್ಕ ವಿದ್ಯಾಭ್ಯಾಸ ಬೇಕು. ಕೆಲವರು ತಾಮಸರಾಗಿಯೂ ಕೆಲವರು ರಾಜಸರಾಗಿಯೂ ಹುಟ್ಟಿ ಬೆಳೆಯುತ್ತಾರೆ. ಸಾತ್ವಿಕರಾಗಿ ಹುಟ್ಟಿ ಬೆಳೆಯುವವರು ವಿರಳ. ಅಂಥ ದೇವ ಸಂಸ್ಕಾರ ಕೊಡುವ ವಿದ್ಯೆಯೇ ಸದ್‌ವಿದ್ಯೆ. ಮಾನವಿಕತೆ ಯಲ್ಲಡಗಿದ 'ಮಾನವೀಯತೆ' ಅದರಿಂದ ಮಾತ್ರ ಹುಟ್ಟೀತು.

Modern Indian Education is dominated by the aim of passing examinations with high honours ; This aim was practically non-existant in Ancient India –ಆಧುನಿಕ ಭಾರತದಲ್ಲಿ ಪರೀಕ್ಷೆ ಪಾಸು ಮಾಡಿಬಿಟ್ಟರೆ ಆಗಿ ಹೋಯ್ತು; ಅದರಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರೆ ಮುಗಿಯಿತು. ಈ ಗುರಿ ಪ್ರಾಚೀನ ಭಾರತೀಯ ವಿದ್ಯಾಭ್ಯಾಸದಲ್ಲಿ ವ್ಯಾವಹಾರಿಕವಾಗಿ ಇರಲಿಲ್ಲ" ಎಂದು ಡಾ. ಎ. ಎಸ್. ಅಳ್ತೇಕರರು ಹೇಳಿದ್ದಾರೆ, ವ್ಯಾವಹಾರಿಕ ಪರಿಣಾಮದ ದೃಷ್ಟಿಯಿಂದ, ಪರೀಕ್ಷೆ ಇಲ್ಲದ ವಿದ್ಯಾಭ್ಯಾಸಕ್ಕೆ ಅರ್ಥವಿಲ್ಲ; ಆದರೆ ಪರೀಕ್ಷೆ ಪಾಸಾದ ಬಳಿಕ ಕಲಿತದ್ದೆಲ್ಲವನ್ನೂ ಮರೆತರೂ ಒಬ್ಬ ವಿದ್ಯಾವಂತನೆನ್ನಿಸಿ ಕೊಳ್ಳುವ ಸಾಮಾಜಿಕ ಆವರಣವು ಕೇಡಿಗೆ ಕಾರಣ. "ಸ್ಮೃತಿಭ್ರಂಶಾದ್ ಬುದ್ಧಿನಾಶಃ" ಎಂದು ಗೀತೆ

ಹೇಳಿದ್ದು ಇಂಥ ಪರಿಣಾಮವನ್ನು ಊಹಿಸಿಯೇ. ವಿದ್ಯೆ ಮರೆತು ಹೋದರೆ ಅವಿದ್ಯೆ ಚಿಗುರುತ್ತದೆ. ಅವಿದ್ಯೆಯೇ ಅಪಮಾನವೀಯತೆಗೆ ಬೀಜ. ಮರೆಯದಂತೆ ಬದುಕುವ ವಿದ್ಯೆ ಚಿಕ್ಕಂದಿನಿಂದ ರೂಢವಾಗಿರಬೇಕು. ಈಗ ರೂಢವಾಗುತ್ತಿಲ್ಲ. ಆತ್ಮದ ವ್ಯಾಪಕತ್ವ ಮರೆಯದೆ ಇರಬೇಕಾದ ಧರ್ಮ. ಇಲ್ಲಿ ವ್ಯಷ್ಟಿತ್ವವು ಸಮಷ್ಟಿಯನ್ನು ಗರ್ಭೀಕರಿಸಿಕೊಂಡಿರುತ್ತದೆ. ನಿತ್ಯತೆ–ಪೂರ್ಣತೆಗಳಿಲ್ಲದ ಆತ್ಮವು ಆತ್ಮವಲ್ಲ.

ಆಧ್ಯಾತ್ಮಿಕತೆಗೂ ಅಹಂಕಾರಿಕತೆಗೂ ಅಜಗಜಾಂತರವಿದೆ. **Ego-centric** ಅಹಂನಿಷ್ಠ ವ್ಯಕ್ತಿತ್ವವನ್ನು ಸರ್ವಪ್ರಧಾನವೆಂದು ಭಾರತ ಹಿಂದೆ ನಂಬಿರಲಿಲ್ಲ. ೧೭ನೆಯ ಶತಮಾನದಲ್ಲಿ ವೈಯಕ್ತಿಕತೆಯ ಆತ್ಯಂತಿಕ ನಿತ್ಯತೆಯ ವಾದ ಬೆಳೆಯಿತು. ಅಲ್ಲಿಂದ ಭಾರತದ ಸಾಂಸ್ಕೃತಿಕ ಅವನತಿ ಸ್ಪಷ್ಟವಾಗಿ ಆರಂಭವಾಯ್ತು; ಬ್ರಿಟಿಷ್ ಚಕ್ರಾಧಿಪತ್ಯ ಸ್ಥಾಪಿತವಾದಾಗ ಅದು ಪರಾಕಾಷ್ಠೆಯನ್ನು ಮುಟ್ಟಿತು; ಎಂಬುದು ಇಡೀ ಭಾರತವನ್ನು ವೈನತೇಯ ದೃಷ್ಟಿಯಿಂದ ನೋಡಿದರೆ ಗೊತ್ತಾಗುತ್ತದೆ. ಈಗ ಆತ್ಮವು ಅಹಮ್ಮಿಗಿಂತ ಭಿನ್ನವಾಗಿಲ್ಲ–ಅನೇಕ ನೇತಾರರಿಗೆ. ಅಂಥವರ ಸಮಾಜವಾದವು 'ಸಮಜ'ವಾದವಾಗಿ ಪರಿಣಮಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಪರದೇಶಗಳಲ್ಲಿ ಕೆಲವು ಅಹಮಾತ್ಮರು ಸಮಾಜವಾದೀಯ ಸಮಾಜವನ್ನು ಸ್ಥಾಪಿಸಿಲ್ಲವೇ? ಎಂದು ಕೇಳಬಹುದು. ಆದರೆ ಅದರ ಸ್ವರೂಪ ಪರದೇಶೀಯರಿಗೆ ಕೆಲ ಕಾಲ ಚೆಂದವೆನ್ನಿಸೀತು; ನಮಗಲ್ಲ. ಜೀವನದ ಭಾರತೀಯ ಅಭ್ಯಾಸಗಳು ಅಭಿರುಚಿ ನಿರ್ಮಾಪಕವಾಗಿರುವುದರಿಂದ ಪಾಶ್ಚಾತ್ಯ ಗ್ರಂಥಗಳ ಮೂಲಕ ಪರಿಚಿತವಾದ ಸಮಾಜವಾದವು ಅಭಾರತೀಯ; ಅಪಥ್ಯ. ಭಾರತೀಯ ಸಮಾಜವಾದವು ಗ ಂಥ್ಯುಕ್ತ. ಅದಕ್ಕೆ ದಿ. ಜೆ. ಸಿ. ಕುಮಾರಪ್ಪನವರು ಬರೆದ ವ್ಯಾಖ್ಯೆ ಅಗತ್ಯ; ಗುರುಕುಲ ವಿದ್ಯಾಭ್ಯಾಸದ ಪೂರ್ಣ ಸ್ವರೂಪವು ಜಾರಿಗೆ ಬರುವುದು ಅನಿವಾರ್ಯ. ಗುರುಪರಾಧೀನತೆ ಸದ್ಗುರುವರಣಕ್ಕೆ ಉತ್ತರಕಾಲೀನ. ಗುರು ಲಘುವಾಗಿರುವುದು ಇಂದಿನ ವಿದ್ಯಾಭ್ಯಾಸದಲ್ಲಿರುವ ಸರ್ವದೋಷಹೇತು.

"ಜಡಾನಾಮವಿವೇಕಾನಾಂ
ಅಶೂರಾಣಾಮಪಿ ಪ್ರಭೋ।
ಭಾಗ್ಯಭೋಗ್ಯಾನಿ ರಾಜ್ಯಾನಿ
ಸಂತ್ಯನೀತಿಮತಾಮಪಿ॥"

ಎಂಬ ಪರಿಸ್ಥಿತಿಯಿಂದ ಪ್ರಜಾಪ್ರಭುತ್ವ–ಸಮಾಜವಾದಗಳು ನಷ್ಟಪ್ರಾಯವಾಗುವುವು, ನಾಮಮಾತ್ರದವುಗಳೆನ್ನಿಸುವುವು. ಜಡರನ್ನು ಅಜಡರೆಂದೂ ಅವಿವೇಕಿಗಳನ್ನು ವಿವೇಕಿಗಳೆಂದೂ, ಹೇಡಿಗಳನ್ನು ಶೂರರೆಂದೂ ಯೇನಕೇನ ಪ್ರಕಾರೇಣ ಪ್ರಸಿದ್ಧರಾಗುವವರು ಭಾಗ್ಯವಂತರೆಂದೂ ಗ್ರಹಿಸಬೇಕೆಂದು ಒತ್ತಾಯಿಸುವ ಆಗ್ರಹದ ಸಂನಿವೇಶವು ನಾಮಮಾತ್ರ ಸತ್‌ಪ್ರಭುತ್ವಗಳಲ್ಲಿ ಸಹಜ; ನಾಮಮಾತ್ರ ಸ್ವಾತಂತ್ರ್ಯಕ್ಕೆ ಗುರುತು. ಜಗತ್ತಿನಲ್ಲಿ ರೂಪವಿಲ್ಲದ ನಾಮಕ್ಕೆ ಅರ್ಥವೆಷ್ಟು? ನಾಮರೂಪಾತೀತವಾದ ಆತ್ಮದ ಆನುಭಾವಿಕತೆ ಶ್ರದ್ಧಾಮೂಲವಾಗಿರದಾಗ ಲೋಕಾಚಾರಗಳು ಗಣಾಚಾರಗಳಲ್ಲದೆ ಶಿವಾಚಾರಗಳಾಗಲಾರವು. ನಿಃಶಸ್ತ್ರೀಕರಣದ ಪರಿಷತ್ತುಗಳು ಬರಿಗುಲ್ಲು ನಿದ್ದೆಗೇಡೆನ್ನಿಸದಿರವು.

"ಇಂದು ಯಾವುದೇ ಕಾಲೇಜು, ವಿಶ್ವವಿದ್ಯಾಲಯ, ಸಂಶೋಧನ ಸಂಸ್ಥೆಗಳಿಗೆ ಹೋಗಿ ನೋಡಿದರೆ ಹೆಚ್ಚಿನ ಸಂಶೋಧಕರು ಹತ್ತು ರೂಪಾಯಿ ಡಿ.ಎ. ಹೇಗೆ ಗಿಟ್ಟಿಸಬೇಕೆಂಬ ವಿಚಾರದಲ್ಲಿರುತ್ತಾರೆಯೇ ಹೊರತು, ತನ್ನ ಕ್ಷೇತ್ರದಲ್ಲಿ ತನ್ನ ಕೊಡುಗೆ ಏನು? ಅದು ಹೇಗಿರಬೇಕು? ಎನ್ನುವುದರ ಕಡೆಗೆ ಲಕ್ಷ್ಯ ಕೊಡುವುದು ತೀರ ಕಡಿಮೆ" ಎಂದದ್ದು ಶ್ರೀ ಕೃಷ್ಣಾನಂದ ಕಾಮತ್; ಇದಕ್ಕೆ ಯಾರು ಹೊಣೆ?

"ಉಪಾಧ್ಯಾಯಾಶ್ಚ ವೈದ್ಯಾಶ್ಚ ಕಾರ್ಯಾಂತೇ ಅಪ್ರಯೋಜಕಾಃ" ಎಂಬ ಧೋರಣೆಯನ್ನು ತಾಳಿದೆ ಉಪಾಧ್ಯಾಯ ನಿಯಾಮಕ ಸಂಸ್ಥೆಗಳು. ನಿಯುಕ್ತ ಉಪಾಧ್ಯಾಯತ್ವದಲ್ಲಿಂದು ಗುರುತ್ವ ಕಡಿಮೆಯಾಗಿ ಹೋಗಿದೆ. ಅನಿಯುಕ್ತರ ಗುರುತ್ವ ಸುದುರ್ಲಭ ಮತ್ತು ಅನಪೇಕ್ಷಿತ. ಆದುದರಿಂದ ಗುರುಗಳು ಸತ್ಪ್ರಜಾ ನಿರ್ಮಾಪಕರಾಗುವುದು ಅಸಂಭವ. ಕಾರ್ಯಕಾಲೇಪಿ ಅಪ್ರಯೋಜಕಾಃ ಎನ್ನಿಸುವ ಗುರುಪರಂಪರೆ ಈಗ ಕಾಲಿಟ್ಟಿದೆ! ಕಾಲ ಕೆಟ್ಟು ಹೋಗುವುದೂ ಮಾನವಿಕತೆ ಅಮಾನವಿಕತೆಯಾಗುವುದೂ ಹೀಗೆ!

We see to-day that in the strict sense there are no exact sciences ಖಚಿತಾರ್ಥದಲ್ಲಿ ಇಂದು ಖಚಿತ ವಿಜ್ಞಾನಗಳೆಂಬಂಥವುಗಳಿಲ್ಲ ಎಂದದ್ದು ಜೆ. ಬ್ರೋನೋವ್‌ಸ್ಕಿ. ವಸ್ತುಸತ್ಯ ಪ್ರಧಾನರಲ್ಲಿ ಇದನ್ನು ತಿಳಿದವರಿಂದು ಬಹಳ ಕಡಿಮೆ. ಆದುದರಿಂದ 'ಟ್ರೇನಿಂಗಿನಿಂದ' ಯಾರನ್ನಾದರೂ ಯಾರಾದರೂ ಎಂಥವರನ್ನಾಗಿ ಬೇಕಾದರೂ ಬದಲಾಯಿಸಬಹುದು- ಎಂಬ ಅವಿವೇಕ (Lack of Commonsense) ತಲೆದೋರಿದೆ. ಪ್ರಜಾಪ್ರಭುತ್ವದ ಎಷ್ಟೋ ಮುಖಂಡರು ಕುಂಬಾರನಿಂದ ನಿರ್ಮಿತರಾದವರಂತೆಯೋ ಶೂರ್ಪಣಖಿಯಿಂದ ನಿರ್ಮಿತರಾದವರಂತೆಯೋ ಕಂಡು ಬರಲು ಗುರು–ಲಘುಗಳನ್ನು ವಿಂಗಡಿಸಿ ಗುರುತಿಸಲಾರದ ಅವಿದ್ಯೆಯೇ ಕಾರಣ. ವೇದಯುಗದ ನಮ್ಮ ನಾಗರಿಕತೆಯಲ್ಲಿ ಇಂಥ ಅವಿದ್ಯೆ ವಿರಳವಾಗಿತ್ತಂತೆ.

ವಿಜ್ಞಾನ (ಶಾಸ್ತ್ರ) ಎಂಬುದು ಮನಸ್ಸು ಬಳಸುವ ಒಂದು ಭಾಷೆ; ಮನಸ್ಸು ತೊಡುವ ಒಂದು ಅಂಗಿ: ಅದಕ್ಕೆ ಜ್ಞಾನದ ಸಮನ್ವಯದ ಹೊಲಿಗೆ ಅಗತ್ಯ. ಅದಿಲ್ಲವಾದುದರಿಂದ Socia! Sciences· ಸಾಮುದಾಯಿಕ ಜೀವನದ ಸಾಮಾಜಿಕತೆಯ ವಿವಿಧ ಚಟುವಟಿಕೆಗಳನ್ನು ಕುರಿತು ಬರೆದ ಶಾಸ್ತ್ರಗಳನ್ನು Humanities ಮಾನವಿಕಶಾಸ್ತ್ರಗಳು ಎಂದು ಕರೆಯುವುದುಂಟು. ನಾಮದಂತೆ ರೂಪವಿಲ್ಲ, ರೂಪದಂತೆ ನಾಮವಿಲ್ಲ! Truth rests on an act of free human judgement ಸತ್ಯವು ಮುಕ್ತಮಾನವನ ನಿರ್ಣಯವನ್ನಾಧರಿಸಿದೆ (Commonsense of Science, ಪುಟ ೧೩೧) ಎಂಬುದರ ಅರ್ಥ ಅನನುಭವಿಗಳಿಗೆ ಅರಿಯದು. ಮುಕ್ತಿಯ ಅನುಭವ ಉಳ್ಳವರಿಂದು ಅಶ್ರದ್ಧೇಯರು, ಅಸ್ಪೃಶ್ಯರು. ಷಡ್ರಿಪುಮುಕ್ತತೆಯೇ ನಿಜವಾದ ಮುಕ್ತಿಯಲ್ಲವೇ? ಷಡ್ರಿಪುದಾಸರು ಮಾನವರಲ್ಲ, ದಾನವರು. ದಾನವರ ನಾಮರೂಪಗಳ ಪರಸ್ಪರ ಪೋಷಕತೆ ಪುರಾಣೋಕ್ತ. ಆದುದರಿಂದ De humanisation ಅಮಾನವೀಕರಣದ ಮೂಲಕ ಮಾನವಿಕ ಶಾಸ್ತ್ರಗಳು ನಿರುಪಯುಕ್ತ ಅಥವಾ ದುರುಪಯುಕ್ತ ಎನ್ನಿಸುವುದುಂಟು. ಸತ್ಯವು ಎಲ್ಲ ಬೆಲೆಗಳಿಗೂ ಆಧಾರ ರೂಪವಾಗಿರುವ ಬೆಲೆ ಎಂಬುದನ್ನು ಚಿಕ್ಕಂದಿನಿಂದ ಅರಿತು ಅರಗಿಸಿಕೊಳ್ಳದಿದ್ದಲ್ಲಿ intellectual Honesty ಬೌದ್ಧಿಕ ಪ್ರಾಮಾಣಿಕತೆಯನು, ಹುಡುಕಿದರೆ ಸಿಕ್ಕೀತೇ? ಸಂಶೋಧನದ ಹೆಸರಿನಲ್ಲಿ ನಮ್ಮ ದೇಶದಲ್ಲಿಂದು ಕಾಲದ ವ್ಯರ್ಥ ವ್ಯಯವಾಗುವುದು ಇತರ ಧ್ಯೇಯಗಳ ಹೆಸರಿನಲ್ಲಾಗುವಂತೆಯೇ ಸಾಮಾನ್ಯವಾಗಿ ಹೋಗಿದೆ. ಜೈನ, ವೈಷ್ಣವ, ವೀರಶೈವಾದಿ ವಿವಿಧ ಜ್ಞಾನಪೀಠಗಳ ನಿರ್ಮಾಣವೂ ಜಾತಿನಿರ್ಮೂಲನೋಪದೇಶವೂ ಮಾತ್ರ ಸ್ಪಷ್ಟ ದೇವತೆಗಳಂತಾಗಿರುವುದು ಇದಕ್ಕೆ ಉದಾಹರಣೆ. Indology ಯೂ ಒಂದು ಶಾಸ್ತ್ರ! Libidinousness ಎಂಬುದು ಕಲಾಶಾಸ್ತ್ರದ ಅಂಗ! ಸಿನೆಮಗಳನ್ನು ನೋಡಿರಿ–ಗೊತ್ತಾಗುತ್ತದೆ. ಪವಾಡಗಳನ್ನಷ್ಟೇ Trick ಮಾಯಾಜಾಲವೆನ್ನಬೇಕೇ? ಮನುಷ್ಯ ಮಾಯಾವಿಯಾದಾಗ ಅವನು ಹೇಳುವುದೂ, ಮಾಡುವುದೂ, ಸ್ವತಃ ಅವನೂ ಮಾಯೆಗಳೇ ಅಲ್ಲವೇ? ಮಾನವಿಕತೆಯ ಸಾಮಾಜಿಕತೆಯ ವಾಸ್ತವಿಕತೆ ಮಾಯಾವಿತನವನ್ನು ಸಮಾಜದಿಂದ ದೂರವಿರಿಸಿದ ಮೇಲೆ ಮಾತ್ರ ಲಭ್ಯ.

ವ್ಯವಹಾರ ಪ್ರಪಂಚದಲ್ಲಿ ಪರಂಪರಾಸತ್ಯವು ಮಾನವಿಕತೆಗೆ ಆಧಾರ. ಅಸತ್ ಪರಂಪರೆಯನ್ನು ಸತ್ ಪರಂಪರೆಯೆಂದು ಭಾವಿಸಿದಾಗ ಅಮಾನವಿಕತೆಯು (ಅದಕ್ಕೆ ಯಾವ ಅರ್ಥವಿದ್ದರೂ ಸರಿಯೆ) ಮಾನವಿಕತೆಯೆಂಬಂತೆ ತೋರುತ್ತದೆ. ಅದು Trick ಮಾಯೆ! ಸಮಾಜವೊಂದು ಜಾತಿಯೆಂಬುದನ್ನು ಅರಿಯದವರಿಗಿಂದು ಜಾತಿಗಳನ್ನು ಸಮಾಜ ಎಂದು ಕರೆಯುವ ಇತ್ತೀಚಿನ ರೂಢಿ ಬುದ್ಧಿಗಲಿಸುತ್ತಿದೆ. ಹಿಂದುಳಿದ ಜಾತಿಗಳು ಹಿಂದುಳಿದ ಸಮಾಜಗಳಾಗಿವೆ! ಹಿಂದುಳಿಯುವಿಕೆಯೊಂದು ರಾಜಕೀಯ ಮಾಯೆಯಾಗಿ ಪರಿಣಮಿಸುತ್ತಿದೆ. ಪ್ರಚಾರವೆಂಬ ಮಾದಕಪೇಯವನ್ನು ಸಮಾಜ ಶಿಕ್ಷಣ ಎಂಬುದು ಮಾಯೆಯಲ್ಲವೆ? ಅದರಲ್ಲೂ ಅಸತ್‌ಪ್ರಚಾರದ ಅವಾಸ್ತವಿಕತೆಯ ಇಂದ್ರಜಾಲದಿಂದ ಜನಮನವನ್ನು ಮರುಳ್ಗೊಳಿಸುವುದರಿಂದ ಸಮಾಜವಾದೀಯ ಸಮಾಜ ನಿರ್ಮಾಣ ಸಾಧ್ಯವೇ?

ಒಂದು ದೇಶದ ಭೌಗೋಲಿಕ–ಚಾರಿತ್ರಿಕ ಧರ್ಮಗಳನ್ನು ಕಡೆಗಣಿಸಿ ಹೊಸ ಜೀವನ ಪದ್ಧತಿಯೆಂದು ಭಿನ್ನ ದೇಶಗಳ ಭೌಗೋಲಿಕ–ಚಾರಿತ್ರಿಕ ಆವರಣಗಳಿಗೆ ತಕ್ಕವಾದಂಥವುಗಳನ್ನು ಅನುಕರಿಸು

ವೃಮ ಮನೋವಶೀಕರಣದ ಮಾಯೆ. ಮಾಯಾನಿರ್ಮಿತ ನಾನಾಕಾರಗಳು ಅಚಿರಂಜೀವಿ, ಅಸ್ಥಾಯಿ. ಮನಃಪರಾಧೀನತೆಯು ಸ್ವಾತಂತ್ರ್ಯದ ಲಕ್ಷಣವಲ್ಲ. ಭಾರತೀಯ ಸಮಾಜವಾದದ ದಾರ್ಶನಿಕ ಗಾಂಧೀಜಿ. ಅದಾರ್ಶನಿಕರ ಧ್ಯೇಯವಾದಗಳು ಯಾವ ದೇಶವನ್ನೂ ಪುನಾರಚಿಸಲಾರವು. Indian Interpretation of History ಚರಿತ್ರೆಯ ಭಾರತೀಯ ಭಾಷ್ಯವನ್ನು ಗಾಂಧೀಜಿ ಬರೆದರು. ಅರವಿಂದರು ಬರೆದರು. ಮಿಕ್ಕವರು ಅದರ ಆಭಾಸವನ್ನು ಬರೆದರು–ಭಾಸವನ್ನಲ್ಲ. ನಮ್ಮ ಮಾನವಿಕ ಶಾಸ್ತ್ರಜ್ಞಾನಿಗಳಿತ್ತ ಗಮನಿಸಬಹುದೇ? ಗಮನಿಸದುದರಿಂದಲೇ ಕೂಲಿಕಾರ-ಸಾವಕಾರರ ಪರ–ವಿರುದ್ಧವಾದಗಳಲ್ಲಿ ಬಳಕೆಗಾರನ ವಾದ ತಲೆಯೆತ್ತಲೇ ಇಲ್ಲ. ಒಂದು–ಮುಂದುಳಿದವರ ವಾದಗಳಿಂದ ಬಡವರು ಬಡವರಾಗಿಯೇ ಉಳಿದರು. ಬಡವರಿಗೆ ಮಾತ್ರ ಕುಟುಂಬ ಸದಸ್ಯರ ಸಂಖ್ಯೆಯನ್ನು ಪರಿಮಿತಗೊಳಿಸಬೇಕಾದ ಸಮಾಜವಾದೋಪದೇಶ ಶುರುವಾಯ್ತು. ಈ ಸಾಮಾಜಿಕ ನ್ಯಾಯಗಳ ಪಟ್ಟಿಗೆ ಸೇರಬಹುದಾದ ಇತರ ಅನೇಕ ಅಂಶಗಳನ್ನು ಇಂದಿನ ಎಷ್ಟೋ ವಿಧಿಗಳು ಹಡೆಯುತ್ತಿವೆ.

Theory ವಾದಕ್ಕಿಂತ ವೇದ (ಜ್ಞಾನ) ಮುಖ್ಯ ಎಂಬುದೇ ಇಂದು ನಿಜವಾದ ಮಾನವಿಕತೆ. ವಾದಯುದ್ಧವೂ ರಾಜಕೀಯ ಪಕ್ಷಗಳ ಅಸಂಖ್ಯಾಕತೆಯಿಂದಾದ ವಿರೋಧಗಳೂ ಒಂದೇ ದೋಣಿಯಲ್ಲಿ ಯಾನ ಮಾಡುವಂಥವು. Quality ಗುಣವನ್ನು ಮರೆತ Quantity ಪರಿಮಾಣವಾದವು ಅಮಾನವಿಕ, ಅಸನ್ಮಾನವಿಕ. ತ್ರಿಕರಣಶುದ್ಧಿಯನ್ನು ಆಚರಣೆಗೆ ತರಲು ವಿಘ್ನಕಾರಿಗಳಾದ ಎಲ್ಲ ಬದಲಾವಣೆಯ ಪ್ರಯೋಗಗಳೂ ವ್ಯವಹಾರ ಪದ್ಧತಿಗಳೂ ನಿಯೋಜನನಿಯಮಗಳೂ ಪ್ರಶಾಸನ ತಂತ್ರಗಳೂ ವಿಧಿವಿಧಾನಗಳೂ ಅವನತಿಕರಗಳೆಂಬುದನ್ನು ಅರಿತದ್ದೇ ಇಂದು ೨೦ ಅಂಶದ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂಬ ಧ್ಯೇಯ ತಲೆಯೆತ್ತಲು ಕಾರಣ. ಅತಿಯಾದ ವಾದಮಗ್ನತೆಗೂ ಅತಿಯಾದ ವಿಚಾರ ವಿಮುಖತೆಗೂ ದುಷ್ಪರಿಣಾಮಕತೆಯೊಂದೇ ಫಲ. ನಮ್ಮ ರಾಷ್ಟ್ರವಿಂದು ಈ ಅತಿಯಿಂದ ಮುಕ್ತವಾಗಬೇಕಾಗಿದೆ. ಮಾನವಿಕ ಶಾಸ್ತ್ರಜ್ಞರಲ್ಲಿ Fundamental Thinking ಆಧಾರ ಸತ್ಯಗಳ ವಿವೇಚನೆಗೆ ನಿಲ್ಲಬೇಕು. ಪರಭೂಮಿಯ, ಪರಚರಿತ್ರೆಯ ಆಧಾರ ಕಲ್ಪನೆಗಳು ಆರೋಗ್ಯಕರವಾದ ಭಾರತೀಯ ಅನನ್ಯತೆಯನ್ನು ಹೊಳೆಯಿಸಲಾರವು. ಡಾ. ಬೆಟ್ಟಿಹಾಮನ್ ಮತ್ತು ಸರ್ ಜಾನ್‌ವುಡ್ರೋಫ್ ಎಂಬ ವಿದ್ವಾಂಸರು ಎಂದೋ ಈ ಮಾತನ್ನು ಹೇಳಿದ್ದರು. ಭಾರತೀಯ ತತ್ವಜ್ಞಾನವು ಇನ್ನೊಂದು ದೇಶದಲ್ಲಿ ಹುಟ್ಟಲಿಲ್ಲ. ಇನ್ನೊಂದು ದೇಶದ ತತ್ವಜ್ಞಾನವು ಭಾರತೀಯವಾಗಲಿಲ್ಲ–ಎಂಬುದನ್ನು ರಾಷ್ಟ್ರೀಯ ಮಾನವಿಕರು ಗಮನಿಸುವುದು ಅಗತ್ಯವಲ್ಲವೇ?

ಇಂದು ಭಾರತದಲ್ಲಿ ಕಂಡುಬರುತ್ತಿರುವ ಉದ್ರಿಕ್ತ ಮನಸ್ಥಿತಿ ಕಾಲ ಮತ್ತು ಪರಿಸ್ಥಿತಿಗಳ ಒಂದು ಚಿಹ್ನೆ ಅಷ್ಟೆ. ಭಾರತದ ಭವಿಷ್ಯವನ್ನು ರೂಪಿಸುತ್ತಿರುವ ಚಾರಿತ್ರಿಕ ಶಕ್ತಿಗಳು ಶಿಕ್ಷಣದಲ್ಲಿ ಸಮಾಜದಲ್ಲಿ ಅಧಿಕಾರಿಕ ತಳಹದಿಯನ್ನು ಪ್ರತಿಭಟಿಸುತ್ತಿವೆ. ಬೌದ್ಧಿಕ ಸ್ವಾತಂತ್ರ್ಯದ ಮೊದಲ ಪ್ರವಾಹ ಎಲ್ಲ ಕ್ಷೇತ್ರಗಳಲ್ಲಿಯೂ ಅತಿರೇಕಗಳಿಗೆ ದಾರಿಮಾಡುತ್ತದೆ. ಪ್ರತಿಕ್ರಿಯೆಗಳೂ ಅಷ್ಟೇ ಉದ್ರಿಕ್ತವಾಗಿ ಅತಿರೇಕಗಳ ನಡುವೆ ಹೊಯ್ದಾಡುತ್ತಿವೆ. ಇಂದಿಗೂ ತಡೆಯಿಲ್ಲದೆ.........

ಸಾಮಾಜಿಕ ಆಚಾರಗಳು ಬದಲಾಗುತ್ತಿವೆ. ಆದರೆ ಸಾಮಾಜಿಕ ಶ್ರದ್ಧೆಗಳು ಹೆಚ್ಚು ಕಡಮೆ ಬದಲಾಗದೆಯೇ ಉಳಿದಿವೆ. ವಿಮರ್ಶನ ಮನೋಭಾವ ಮತ್ತು ಬುದ್ಧಿಪೂರ್ವಕ ಪರಿಶೀಲನೆ ಇನ್ನೂ ವ್ಯಾಪಕವಾಗಿದೆಯೇ ಹೊರತು ಆಳವಾಗಿಲ್ಲ. ವಿಚಿತ್ರವೆಂದರೆ, ಆಧುನಿಕ ಭಾವನೆಗಳು ಅಕಾಲಿಕ ಭಾವನೆಗಳೊಡನೆ ಮಿಳಿತವಾಗುತ್ತಿವೆ. ಇಂದಿನ ಭಾರತೀಯರು ಒಂದೇಸಲ ಹಲವು ಮಟ್ಟಗಳಲ್ಲಿ ಆಲೋಚಿಸುತ್ತಾರೆ. ಅನುಭವಿಸುತ್ತಾರೆ. ವ್ಯವಹರಿಸುತ್ತಾರೆ. ಭೂತ ವರ್ತಮಾನ ಮತ್ತು ಭವಿಷ್ಯತ್ತುಗಳು ಒಂದಕ್ಕೊಂದು ಸಮೀಪಗತವಾಗುತ್ತಿವೆ-ತಿಳಿವು ತತ್ತರಿಸುವಂತೆ. ವಿವೇಚನೆ ದಿಗ್ಭ್ರಮೆಗೊಳ್ಳುವಂತೆ!

ಹುಮಾಯೂನ್ ಕಬೀರರ
ಭಾರತೀಯ ಸಂಸ್ಕೃತಿ ಪರಂಪರೆಯಿಂದ

ಸಿ. ಬಿ. ರಾಮಚಂದ್ರಪ್ಪ

ಸೊರಟೂರಿನ ಕದನ (ಕ್ರಿ. ಶ. ೧೧೯೧-೧೧೯೨)

ಕ್ರಿ.ಶ. ಹನ್ನೆರಡನೆಯ ಶತಮಾನದಂತ್ಯದಲ್ಲಿ ದಕ್ಷಿಣ ಭಾರತದಲ್ಲಿ ತಮ್ಮ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಿದ ಎರಡು ರಾಜವಂಶಗಳ ನಡುವಣ ಹೋರಾಟವೇ ಸೊರಟೂರಿನ ಕದನ. ದ್ವಾರಸಮುದ್ರದ ಹೊಯ್ಸಳರು ಮತ್ತು ದೇವಗಿರಿಯ ಸೇವುಣರೇ ಆ ರಾಜವಂಶಗಳಿಗೆ ಸೇರಿದವರು. ತಾವು ಉತ್ತರ ಭಾರತದ ಯಾದವರ ಸಂತತಿಗೆ ಸೇರಿದವರೆಂದು ಹೇಳಿಕೊಂಡಿರುವ ಅವರು ಪ್ರಾರಂಭದಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದರು. ಕ್ರಮೇಣ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು ಸ್ವತಂತ್ರರಾಗಲು ಹವಣಿಸಿ ಸಫಲರಾದರು. ಚಾಲುಕ್ಯರ ಅವನತಿಯ ಕಾಲದಲ್ಲಿ ಕುಂತಳದೇಶವನ್ನು ವಶಪಡಿಸಿಕೊಳ್ಳುವ ಪ್ರಯತ್ನವು ಹೊಯ್ಸಳ–ಸೇವುಣರ ಸಂಘರ್ಷಕ್ಕೆಡೆಮಾಡಿಕೊಟ್ಟಿತು.

ಸ್ವಪ್ರಯತ್ನದಿಂದ ರಾಜ್ಯಕಟ್ಟಿದ ಹೊಯ್ಸಳರಿಗೆ ಜಾಜ್ವಲ್ಯಮಾನವಾದ ಪರಂಪರೆ ಇದೆ. ಅವರ ಬಹುಮುಖಿ ಸಾಧನೆಯ ಪರಿಣಾಮವಾಗಿ ಕನ್ನಡನಾಡು ವೈಭವ. ಶಾಂತಿ. ಸುಭಿಕ್ಷಗಳ ಪರಮೋನ್ನತಿಯನ್ನು ಸಾಧಿಸಿತು. ಆರ್ಥಿಕ ಕ್ಷೇತ್ರದಲ್ಲಾಗಲಿ. ಸಾಹಿತ್ಯ ಅಥವಾ ಕಲಾಕ್ಷೇತ್ರದಲ್ಲಾಗಲಿ ಹೊಯ್ಸಳರ ಸಾಧನೆ ಎಷ್ಟು ಮಹತ್ತರವಾದುದೋ. ರಾಜಕೀಯದಲ್ಲಿಯೂ ಅವರ ಸಾಧನೆ ಅಷ್ಟೇ ಮಹತ್ವದ್ದು. ರಾಜಕೀಯ ಕ್ಷೇತ್ರದಲ್ಲಿ ಅವರ ಸಾಧನೆ ಸಿದ್ಧಿಗಳನ್ನು ಸಿಂಹಾವಲೋಕಿಸಿದಾಗ ತಲಕಾಡಿನ ಕದನ (ಕ್ರಿ.ಶ. ೧೧೧೬). ಕಣ್ಣೇಗಾಲದ ಕದನ (ಕ್ರಿ.ಶ. ೧೧೧೮), ಸೊರಟೂರಿನ ಕದನ (ಕ್ರಿ.ಶ. ೧೧೯೧–೧೧೯೨) ಮತ್ತು ಕಣ್ಣಾನೂರಿನ ಕದನ (ಕ್ರಿ.ಶ. ೧೩೪೨)–ಹೊಯ್ಸಳ ರಾಜವಂಶದ ಉದಯ, ಉಚ್ಛ್ರಾಯ ಹಾಗೂ ಅವನತಿಯ ಹಂತಗಳನ್ನು ಸೂಚಿಸುವಂತೆ ಕಂಡುಬರುತ್ತದೆ. ಕ್ರಿ.ಶ. ಸುಮಾರು ೧೧೦೮ ರಿಂದ ೧೧೪೨ರ ವರೆಗೂ ರಾಜ್ಯವಾಳಿದ ಹೊಯ್ಸಳ ವಿಷ್ಣುವರ್ಧನ ತಲಕಾಡಿನ ಕದನದಲ್ಲಿ ಚೋಳರನ್ನು ಸೋಲಿಸಿ ಕನ್ನಡನಾಡಿನಲ್ಲಿ ಅವರ ಆಳ್ವಿಕೆಯನ್ನು ಕೊನೆಗಾಣಿಸಿದನು. ಆತನ ಕಾಲದಲ್ಲಿಯೇ ನಡೆದ ಕಣ್ಣೇಗಾಲದ ಕದನದಲ್ಲಿ ಕಲ್ಯಾಣದ ಚಾಲುಕ್ಯರಾಜ ಆರನೇ ವಿಕ್ರಮಾದಿತ್ಯನ ಸೈನ್ಯವು ಸೋಲನ್ನು ಅನುಭವಿಸಿ, ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ಸ್ವತಂತ್ರರಾದರು. ಕ್ರಿ. ಶ. ಸುಮಾರು ೧೧೭೩ರಿಂದ ೧೨೨೦ರ ವರೆಗೂ ರಾಜ್ಯವಾಳಿದ, ವಿಷ್ಣುವರ್ಧನನ ಮೊಮ್ಮಗ ಇಮ್ಮಡಿ ಬಲ್ಲಾಳನು ಸೊರಟೂರಿನ ಕದನದಲ್ಲಿ ಸೇವುಣರಾಜ ಐದನೇ ಭಿಲ್ಲಮನನ್ನು ಸೋಲಿಸಿದನು. ಅಂದಿನಿಂದ ಕೆಲಕಾಲ ಹೊಯ್ಸಳರ ಮುನ್ನಡೆಗೆ ಅಡ್ಡಿಯನ್ನುಂಟುಮಾಡುವ ಪ್ರತಿಸ್ಪರ್ಧಿ ದಕ್ಷಿಣದಲ್ಲಿರಲಿಲ್ಲ. ಆದರೆ ಮುಂದೆ ಕಣ್ಣಾನೂರಿನ ಕದನದಲ್ಲಿ ಮಧುರೆಯ ಸುಲ್ತಾನನಾಗಿದ್ದ ಘಿಯಾಸುದ್ದೀನನು ಕುತಂತ್ರದಿಂದ ಹೊಯ್ಸಳ ಮುಮ್ಮಡಿ ಬಲ್ಲಾಳ (ಕ್ರಿ. ಶ. ೧೨೯೨–೧೩೪೩)ನ ಸೈನ್ಯವನ್ನು ಸೋಲಿಸಿದನು. ಹೊಯ್ಸಳ ಆಳ್ವಿಕೆಯು ಕೊನೆಗೊಂಡಿತು.

ಸನ್ನಿವೇಶ

ಸೊರಟೂರಿನ ಕದನಕ್ಕೆ ಕಾರಣವಾದ ಸನ್ನಿವೇಶವನ್ನು ಪರಿಶೀಲಿಸಿದಾಗ ಕಂಡುಬರುವ ಅಂಶವೆಂದರೆ, ಹೊಯ್ಸಳ ಇಮ್ಮಡಿ ಬಲ್ಲಾಳ ಮತ್ತು ಸೇವುಣ ಐದನೇ ಭಿಲ್ಲಮ–ಇವರ ರಾಜ್ಯ ವಿಸ್ತರಣೆಯ ಹಾಗೂ

ಕುಂತಳದೇಶದ ಮೇಲೆ ತಮ್ಮ ಒಡೆತನವನ್ನು ಸ್ಥಾಪಿಸುವ ಉತ್ಕಟಾಕಾಂಕ್ಷೆ. ಕ್ರಿ.ಶ. ೧೧೭೩ರಲ್ಲಿ ಸಿಂಹಾಸನವನ್ನೇರಿದ ಇಮ್ಮಡಿ ಬಲ್ಲಾಳನು ಕೊಡಗು ಜಿಲ್ಲೆಯಲ್ಲಿ ನೆಲಸಿದ್ದ ಕೊಂಗಾಳ್ವರನ್ನೂ, ಮೈಸೂರು ಜಿಲ್ಲೆಯ ಪೂರ್ವ ಭಾಗದಲ್ಲಿ ನೆಲಸಿದ್ದ ಚಂಗಾಳ್ವರನ್ನೂ ಸೋಲಿಸಿದುದಾಗಿ ತಿಳಿದು ಬರುತ್ತದೆ.[1] ಅನಂತರ ಹಂಜೇರುವಿನ ಚೋಳರನ್ನೂ, ಬನವಾಸಿಯ ಕದಂಬರನ್ನೂ, ಸಾಂತರರನ್ನೂ, ಗುತ್ತರನ್ನೂ, ದಕ್ಷಿಣ ಕನ್ನಡ ಜಿಲ್ಲೆಯ ಆಳುಪರನ್ನೂ ಸೋಲಿಸಿ ಪಾಂಡ್ಯರ ವಿರುದ್ಧ ದಂಡೆತ್ತಿ ಹೋದನು. ದುರ್ಗಮ ಉಚ್ಚಂಗಿದುರ್ಗವು ಹೊಯ್ಸಳರ ವಶವಾಯಿತು. ಪಾಂಡ್ಯರಾಜ ಕಾಮದೇವನು ಇಮ್ಮಡಿ ಬಲ್ಲಾಳನಿಗೆ ಶರಣಾಗತನಾದನು. ಆದರೆ ಪುನಃ ಕ್ರಿ.ಶ. ೧೧೮೭ರಲ್ಲಿ ನಡೆದ ಕದನದ ಪರಿಣಾಮವಾಗಿ ಪಾಂಡ್ಯರಾಜ್ಯವು ಹೊಯ್ಸಳರಾಜ್ಯದ ಒಂದು ಭಾಗವಾಯಿತು. ವಿಜಯೀ ಹೊಯ್ಸಳ ಸೈನ್ಯವು ಕಳಚುರಿ ನೃಪಾಲ ಸಂಕಮದೇವನನ್ನು ಸೋಲಿಸಿ, ಅವನ ಮನೆತನದ ಅವನತಿಗೆ ದಾರಿಮಾಡಿಕೊಟ್ಟಿತು. ರಾಜನೀತಿ ನಿಪುಣ ಬಲ್ಲಾಳನು ಅನಂತರ ಕಲ್ಯಾಣದ ಚಾಲುಕ್ಯ ಆಳ್ವಿಕೆಯ ಪುನರ್‌ಸ್ಥಾಪಕ ನಾಲ್ವಡಿ ಸೋಮೇಶ್ವರನು ಬಲಹೀನನಾಗಿದ್ದಂತಹ ಸಂದರ್ಭದಲ್ಲಿ, ಚಾಲುಕ್ಯರನ್ನೂ ಸೋಲಿಸಿ, ಅವರ ಆಳ್ವಿಕೆಯ ಅಂತ್ಯಕ್ಕೆ ಕಾರಣನಾದನು. ಕ್ರಿ. ಶ. ೧೧೮೯ರಲ್ಲಿ ಚಾಲುಕ್ಯ ದಂಡನಾಯಕ ಬ್ರಹ್ಮನನ್ನು ಸೋಲಿಸಿದ ಬಲ್ಲಾಳನು ಕೆಲವು ಸಾಮಂತರನ್ನು ಸಹಾಯ ಪಡೆದು ಸೇವುಣ ಅಧಿಕಾರಿ ಎಂದು ಹೇಳಲಾದ ಮುರಾರಿ ಕೇಶವ ನರಸಿಂಗ ವಿಬುಧನನ್ನು ಸೋಲಿಸಿದನೆಂದು ತಿಳಿದುಬರುತ್ತದೆ.[2] ಆ ವೇಳೆಗೆ ಸೇವುಣರಾಜ ಭಿಲ್ಲಮನು ಕುಂತಳದ ಉತ್ತರ ಭಾಗ ಮತ್ತು ಕರ್ನಾಟಕದ ಇತರ ಕೆಲವು ಭಾಗಗಳನ್ನು (ಅಣ್ಣಿಗೆರೆ ಮತ್ತು ಗದಗ್) ವಶಪಡಿಸಿಕೊಂಡಿದ್ದ. ಕರ್ನಾಟಕ ರಾಜ್ಯಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರನಾದವನೆಂಬ ಬಿರುದನ್ನು ಧರಿಸಿದ್ದ ಆತನು ಕಲ್ಯಾಣವನ್ನು ಪುನಃ ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದನು. ಭಿಲ್ಲಮನು ಜೈತುಗಿ ವಿಬುಧನನ್ನು ದಂಡನಾಯಕನನ್ನಾಗಿ ನೇಮಿಸಿಕೊಂಡು ಅಪಾರ ಸೈನ್ಯದೊಂದಿಗೆ ಕ್ರಿ.ಶ. ೧೧೯೧ರ ಜೂನ್ ತಿಂಗಳಲ್ಲಿ ಗದಗಿನಿಂದ ಮುವತ್ತು ಮೈಲಿ ಈಶಾನ್ಯಕ್ಕಿರುವ ಹೆರೂರು ಎಂಬಲ್ಲಿ ಬಂದಿಳಿದನು. ಪರಿಸ್ಥಿತಿಯ ತೀವ್ರತೆಯನ್ನರಿತ ಬಲ್ಲಾಳನು ಕ್ರಿ.ಶ. ೧೧೯೨ರಲ್ಲಿ ತನ್ನ ಸೈನ್ಯದೊಂದಿಗೆ ನಿರ್ಣಾಯಕ ಹೋರಾಟಕ್ಕೆ ಸನ್ನದ್ಧನಾದನು.

ಕಾಲನಿರ್ಣಯ

ಸೊರಟೂರಿನ ಕದನವು ನಡೆದ ಕಾಲದ ಬಗ್ಗೆ ಇತಿಹಾಸಕಾರರಲ್ಲಿ ಸಾಕಷ್ಟು ಜಿಜ್ಞಾಸೆಯಿದೆ. ಡಾ. ಜೆ. ಎಫ್. ಫ್ಲೀಟ್‌ರವರು ಕ್ರಿ.ಶ. ೧೨೦೨ರ ಅಣ್ಣಿಗೆರೆ ಶಾಸನದ ಆಧಾರದ ಮೇಲೆ ಸೊರಟೂರಿನ ಕದನವು ಕಿ.ಶ. ೧೧೯೧ ನೇ ಜೂನ್ ತಿಂಗಳ ನಂತರ ನಡೆಯಿತೆಂದು ಅಭಿಪ್ರಾಯ ಪಡುತ್ತಾರೆ.[3] ಡಾ. ಎ. ವೆಂಕಟಸುಬ್ಬಯ್ಯನವರು ಕ್ರಿ.ಶ. ೧೧೯೦ರ ಅನೇಕೆರೆ ಶಾಸನದ ಆಧಾರದ ಮೇಲೆ ಕದನವು ಕ್ರಿ.ಶ. ೧೧೯೦ನೇ ಡಿಸೆಂಬರ್ ೨೪ಕ್ಕೆ ಮುಂಚಿತವಾಗಿ ನಡೆಯಿತೆಂದು ತಿಳಿಸಿ ಫ್ಲೀಟ್‌ರವರ ವಾದವನ್ನು ಅಲ್ಲಗಳೆದಿದ್ದಾರೆ.[4] ೧೧೮೯ರ ಡಿಸೆಂಬರ್ ನಂತರ ಮತ್ತು ೧೧೯೦ರ ಡಿಸೆಂಬರ್ ನೊಳಗೆ ಈ ಕದನ ಸಂಭವಿಸಿರಬೇಕೆಂದು ಡಾ. ರಿತ್ತಿ ಅಭಿಪ್ರಾಯಪಡುತ್ತಾರೆ.[5] ಅನೇಕೆರೆ ಶಾಸನದಲ್ಲಿ[6] ಕದನವು ನಡೆದ ಕಾಲವನ್ನು ಸ್ಪಷ್ಟವಾಗಿ ಶಕ ಸಂವತ್ಸರ ೧೧೧೨ (ಕ್ರಿ. ಶ. ೧೧೯೦–೯೧) ಎಂದು ಹೇಳಿದೆ ಎಂದೂ. ಈ ಶಾಸನದ

[1] J. D. M. Derrett: *Hoysalas*, p. 13.

[2] *Ibid.*, p. 88.

[3] *Dynasties of Kanarese Districts*, p. 521.

[4] *Indian Historical Quarterly*, IV (1928) p. 144 The Battle of Soratur.

[5] S. H. Ritti: *The Seunas*, p. 84.

[6] *E.C.*, V, Cn 179.

ಕರ್ತ ಕವಿಚಕ್ರವರ್ತಿ ಜನ್ನನೇ ಆದುದರಿಂದ. ಅದರ ಔಚಿತ್ಯವನ್ನು ಪ್ರಶ್ನಿಸುವಂತಿಲ್ಲವೆಂದೂ, ಅಲ್ಲದೆ ಶಾಸನದಲ್ಲಿ 'ಸಮಸ್ತಭುವನಾಶ್ರಯ' ಇತ್ಯಾದಿ ಬಿರುದುಗಳನ್ನು ಧರಿಸಿದ ಇಮ್ಮಡಿ ಬಲ್ಲಾಳನ ಸಹಿ ಇರುವುದರಿಂದ ಶಾಸನದ ಹೇಳಿಕೆಯನ್ನು ನಿರಾಕರಿಸುವಂತಿಲ್ಲವೆಂದು ವೆಂಕಟಸುಬ್ಬಯ್ಯನವರು ವಾದಿಸಿದ್ದಾರೆ.

ವಾದ ವಿವಾದಗಳೇನೇ ಇದ್ದರೂ ಬಲ್ಲಾಳ ಮತ್ತು ಭಿಲ್ಲಮರಿಬ್ಬರೂ ಗದಗಿನ ಸಮೀಪದ ಒಂದೇ ದೇವಾಲಯಕ್ಕೆ ದತ್ತಿ ನೀಡಿ ಅದೇ ದೇವಾಲಯದ ಆಚಾರ್ಯನನ್ನು ಸನ್ಮಾನಿಸಿ ಆಶೀರ್ವಾದ ಪಡೆದುದು ಪರಿಶೀಲನಾರ್ಹ ಅಂಶ. ಭಿಲ್ಲಮನು ಸ್ವಯಂಭು–ತ್ರಿಕೂಟೇಶ್ವರ ದೇವಾಲಯಕ್ಕೆ 'ಹಿರಿಯ ಹಂದಿಗೋಳ' ಎಂಬ ಗ್ರಾಮವನ್ನು ದತ್ತಿ ನೀಡಿ ಕಾಳಾಮುಖಾಚಾರ್ಯ ಚಂದ್ರಭೂಷಣ ಪಂಡಿತನನ್ನು ಕ್ರಿ.ಶ. ೧೧೯೧ನೇ ಜೂನ್ ತಿಂಗಳಲ್ಲಿ ಸನ್ಮಾನಿಸಿದನೆಂದು ಅವನ ಗದಗಿನ ಶಾಸನವು[7] ಸಾರುತ್ತದೆ. ಅದರಂತೆಯೇ ಬಲ್ಲಾಳನೂ 'ಹೊಂಬೊಳಲು' ಎಂಬ ಗ್ರಾಮವನ್ನು ಕ್ರಿ.ಶ. ೧೧೯೨ನೇ ನವಂಬರ್ ೨೧ರಂದು ದತ್ತಿ ನೀಡಿ ಅದೇ ಆಚಾರ್ಯನನ್ನು ಪೂಜ್ಯಭಾವದಿಂದ ಸನ್ಮಾನಿಸಿದನೆಂದು ಆತನ ಗದಗಿನ ಶಾಸನವು[8] ತಿಳಿಸುವುದು. ಇದರ ಆಧಾರದ ಮೇಲೆ ಭಿಲ್ಲಮನು ಕದನಕ್ಕಿಂತ ಮುಂಚಿತವಾಗಿಯೂ, ಬಲ್ಲಾಳನು ಕದನದ ನಂತರವೂ ಆ ದೇವಾಲಯಕ್ಕೆ ದತ್ತಿ ನೀಡಿ ಆಚಾರ್ಯನನ್ನು ಸನ್ಮಾನಿಸಿದರೆಂದು ಖಚಿತವಾಗಿ ಹೇಳಬಹುದು. ಆದ್ದರಿಂದ ಇವರೀರ್ವರ ನಡುವಣ ನಿರ್ಣಾಯಕ ಭೀಕರ ಕದನವು ಕ್ರಿ.ಶ. ೧೧೯೧ನೇ ಜೂನ್ ಮತ್ತು ಕ್ರಿ.ಶ. ೧೧೯೨ನೇ ನವಂಬರ್ ತಿಂಗಳ ಅವಧಿಯಲ್ಲಿ ನಡೆಯಿತೆಂಬುದು ಸ್ಪಷ್ಟಪಡುತ್ತದೆ. ಬಲ್ಲಾಳನ ಗದಗಿನ ಶಾಸನದ ಒಂದು ಭಾಗ ಈ ಕೆಳಕಂಡಂತಿದೆ:[9]

> "ತಸ್ಯ ಭಾಗವತಶ್ಚರಾಚರಗುರೋಃ
> ಶ್ರೀ ಸ್ವಯಂಭುತ್ರಿಕುಟೇಶ್ವರದೇವಸ್ಯಾಂಗರಂಗಭೋಗಕಂ.........
> ೧೧೧೪ ವರ್ತ್ತಮಾನ ಪರಿಧಾವಿಸಂವತ್ಸರಾಂತರ್ಗತ
> ಮಾರ್ಗಶೀರ್ಷ ಪೌರ್ಣಮಾಸ್ಯಾಂ.........
> ಕಾಳಾಮುಖಾಚಾರ್ಯ ಸೋಮೇಶ್ವರದೇವಪ್ರಶಿಷ್ಯಸ್ಯ
> ವಿದ್ಯಾಭರಣದೇವಶಿಷ್ಯಸ್ಯ ಸತ್ಯವಾಕ್ಯಾಪರನಾಮಧೇಯಸ್ಯ.........
> ಪಾದಪ್ರಕ್ಷಾಳನಂಗೈದು.........

ಮುಖ್ಯ ಘಟನೆಗಳು

ಸೊರಟೂರಿನ ಕದನ ಮತ್ತು ಅದರ ಪರಿಣಾಮಗಳ ಬಗ್ಗೆ ಅನೇಕ ಶಾಸನಗಳು ದೀರ್ಘ ವಿವರಣೆ ನೀಡುವುದಲ್ಲದೆ, ಸಮಕಾಲೀನ ಬರೆಹಕಾರರೂ, ಇತಿಹಾಸಕಾರರೂ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಇಮ್ಮಡಿ ಬಲ್ಲಾಳನ ಮಗನಾದ ಇಮ್ಮಡಿ ನರಸಿಂಹನ ಕಾಲದ ದಾವಣಗೆರೆ ತಾಲ್ಲೂಕಿನ ಹರಿಹರದ ಹರಿಹರೇಶ್ವರ ದೇವಾಲಯದಲ್ಲಿರುವ ಶಾಸನವು[10] ಬಲ್ಲಾಳನು ಸೇವುಣ ಭಿಲ್ಲಮನೊಂದಿಗೆ ಹೋರಾಡಿದ ವಿವರಗಳನ್ನೊದಗಿಸುತ್ತದೆ. ಸೇವುಣ ಸೈನ್ಯದ ನಾಯಕತ್ವವನ್ನು ಜೈತುಗಿ ಎಂಬುವನು ವಹಿಸಿದ್ದನು. ಸೊರಟೂರಿನಲ್ಲಿ ನಡೆದ ಕದನದಲ್ಲಿ ಸೇವುಣ ಸೈನ್ಯವು ಅಪಾರ ಸಾವುನೋವಿನಿಂದ ಕಂಗೆಟ್ಟು ಲೊಕ್ಕಿಗುಂಡಿಯ ಕೋಟೆಯ ಕಡೆಗೆ ಓಡಿಹೋಯಿತು. ಇನ್ನೂರು ಸಾವಿರ ಕಾಲಾಳುಗಳನ್ನೂ, ಹನ್ನೆರಡು ಸಾವಿರ ಅಶ್ವಾರೂಢರನ್ನೂ ಹೊಂದಿದ್ದ ಸೇವುಣ ಸೈನ್ಯವನ್ನು ಬಲ್ಲಾಳನು ತನ್ನ ಒಂದೇ ಆನೆಯ ಸಹಾಯದಿಂದ ಸೊರಟೂರಿನಿಂದ ಕೃಷ್ಣವೇಣೀ ನದಿಯ ದಂಡೆಯ ವರೆಗೂ ಬೆನ್ನಟ್ಟಿದನೆಂದು ಶಾಸನದಲ್ಲಿ

---

7 *E. I.*, III, p. 219.

8 *Ibid.*, VI, p. 94.

9 *Ibid.*

10 *E. C.*, XI, Dg 25,

ಉತ್ಪ್ರೇಕ್ಷಿಸಿದೆ. ಸೇವುಣ ಸೈನ್ಯದ ಐದು ಭಾಗಗಳು ನೀರಿನಲ್ಲಿ ಮುಳುಗಿದವೆಂದೂ, ಆರು ಭಾಗಗಳು ರಣರಂಗದಿಂದ ಹೆದರಿ ಓಡಿಹೋದುವೆಂದೂ, ನಾಲ್ಕು ಭಾಗಗಳು ನಾಶಗೀಡಾದವೆಂದೂ, ಮತ್ತೆ ನಾಲ್ಕು ಭಾಗಗಳು ಹಿಂತಿರುಗಿ ಪಲಾಯನ ಮಾಡಿತೆಂದೂ ಭಿಲ್ಲಮನು ಮಿಕ್ಕ ಆರುನೂರು ಸೈನಿಕರೊಡನೆ ಓಡಿ ಹೋದನೆಂದೂ ರಾಜಾದಿತ್ಯನು ತನ್ನ ವ್ಯವಹಾರ ಗಣಿತ[11]ದಲ್ಲಿ ವಿವರಿಸಿದ್ದಾನೆ. ಹರಿಹರದ ಶಾಸನದಲ್ಲಿ ಉಕ್ತವಾಗಿರುವಂತೆ ಬಲ್ಲಾಳನು ತನ್ನ ಒಂದಾನೆಯ ಸಹಾಯದಿಂದ ಸೇವುಣರನ್ನು ಸದೆಬಡಿದನೆಂಬ ಅಂಶವು ಅತಿಶಯೋಕ್ತಿಯಾದರೂ, ಅವನು ಜಯಗಳಿಸಿದನೆಂಬುದು ಸ್ಪಷ್ಟ. ಭಿಲ್ಲಮನು ಸೊರಟೂರಿನ ಕದನದಲ್ಲಿ ಮಡಿಯಲಿಲ್ಲವೆಂಬುದು ಇನ್ನೊಂದು ಅಂಶ. ಬದಲಾಗಿ ಅವನು ಲೊಕ್ಕಿಗುಂಡಿಯ ಕೋಟೆಯಲ್ಲಿ ಆಶ್ರಯವನ್ನು ಪಡೆದು ಕೆಲವು ಸಾಮಂತರ ಸಹಾಯ ಪಡೆದು, ಮತ್ತೆ ಯುದ್ಧ ಸನ್ನದ್ಧನಾದನು.

ಲೊಕ್ಕಿಗುಂಡಿಯ ಪತನ

ಲೊಕ್ಕಿಗುಂಡಿಯ ಕೋಟೆಯು ಈಗಿನ ಗದಗಿನಿಂದ ಏಳು ಮೈಲಿ ದೂರದಲ್ಲಿದೆ. ಲೊಕ್ಕಿಗುಂಡಿಯ ಕೆಲವು ಅವಶೇಷಗಳು ಇಂದು ಐತಿಹಾಸಿಕ ಘಟನೆಗಳನ್ನು ನೆನಪಿಗೆ ತರುತ್ತವೆ. ಕೋಟೆಯು ಹಾಳು ಬಿದ್ದಿದ್ದರೂ ಅನೇಕ ವಿಗ್ರಹಗಳನ್ನೊಳಗೊಂಡ ದೇವಾಲಯಗಳೂ, ಶಿವಾಲಯಗಳೂ ಆ ಐತಿಹಾಸಿಕ ಸ್ಥಳಕ್ಕೆ ಜೀವಕಳೆ ತುಂಬಿ ತಲೆಯೆತ್ತಿ ನಿಂತಿವೆ. ಪ್ರಸಿದ್ಧ ಉಚ್ಚಂಗಿ ದುರ್ಗದಂತೆ, ಲೊಕ್ಕಿಗುಂಡಿಯ ಕೋಟೆಯೂ ಅಭೇದ್ಯವಾಗಿತ್ತು. ಬಲ್ಲಾಳನು ಮತ್ತೊಮ್ಮೆ ಹೋರಾಟ ಕೋಟೆಯನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ತಾನೇ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡು ಕೋಟೆಯನ್ನು ಮುತ್ತಿದನು. ಪುನಃ ಘೋರ ಕದನವು ನಡೆಯಿತು. ಸೇವುಣ ದಂಡನಾಯಕನಾದ ಜೈತುಗಿಯೂ, ಅಪಾರ ಸೈನಿಕರೂ ಮರಣ ಹೊಂದಿದರು. ಭಾರೀ ಸೋಲನ್ನನುಭವಿಸಿದ ಸೇವುಣರಾಜ ಭಿಲ್ಲಮನು ಅಲ್ಲಿಂದ ಪ್ರಾಣ ರಕ್ಷಣೆಗಾಗಿ ತಲೆತಪ್ಪಿಸಿಕೊಂಡು ಓಡಿಹೋದನು. ಬಲ್ಲಾಳನು ಅತನನ್ನು ಬೆನ್ನಟ್ಟಿ ಕೊಂದುಹಾಕಿದನೆಂದು ತಿಳಿದುಬರುತ್ತದೆ. ಬಲ್ಲಾಳನ ಪರಾಕ್ರಮವನ್ನು ವರ್ಣಿಸುವ ಶಾಸನವೊಂದು ಬೇಲೂರು ತಾಲ್ಲೂಕಿನಲ್ಲಿ ದೊರೆತಿದೆ. ಕ್ರಿ.ಶ. ೧೧೯೨ರಲ್ಲಿ ಬರೆದ ಆ ಶಾಸನದ ಭಾಗವು ಈ ಕೆಳಕಂಡಂತಿದೆ.[12]

> ಆ ಸುಪ್ರಿತು ಪಾಂಡ್ಯನೃಪಾಳ ರಕ್ತಜಳದಿಂ ಸೇವುಣ ಸುಜ್ಞೋಚಿತಂ ಮಸೆದಂ
> ಭಿಲ್ಲಮ ಮಸ್ತಕಾಗ್ರತಳದೊಳು ಘೋರೆಂಚಿತಂ ಜೈತುಗೀಪ್ರಸ್ತಕಾಸ್ತ್ರಾಂಬುಜ
> ಕೋಪದೊಳ್ಕಿಡಿಪ್ಪುದಂ ಘಳ್ಳೆಂಬಿನಂ ಕುಂಪ್ಪರ್ಗ ವಳಿನೆ ಬಲ್ಲಾಳನೃಪಾಳಕಂ ನಿಜ
> ಭುಜಪ್ರೌಢಪ್ರತಾಪಾಸಿಯಂ॥

ಬಲ್ಲಾಳನು ತನ್ನ ಖಡ್ಗವನ್ನು ಪಾಂಡ್ಯರಾಜನ ರಕ್ತದಲ್ಲಿ ಅದ್ದಿ, ಭಿಲ್ಲಮನ ತಲೆಗೆ ಮಸೆದು, ಜೈತುಗಿಯ ಬಾಯಿಯಲ್ಲಿ ತುರುಕಿದನೆಂದು ಮೇಲಿನ ಸಾಲುಗಳಿಂದ ತಿಳಿದು ಬರುತ್ತದೆ.

ಸೇವುಣ ಭಿಲ್ಲಮನ ಮರಣದ ಕಾಲವು ವಿವಾದಾಸ್ಪದವಾಗಿದೆ. ಡಾ. ಜೆ. ಎಫ್ ಫ್ಲೀಟ್‌ರವರು ಭಿಲ್ಲಮನು ಸೊರಟೂರಿನ ಕದನದಲ್ಲಿ ಮಡಿದನೆಂದು ಅಭಿಪ್ರಾಯಪಟ್ಟಿದ್ದಾರೆ.[13] ಆದರೆ ರಾಜಾದಿತ್ಯನ ವ್ಯವಹಾರ ಗಣಿತ, ಹರಿಹರ ಮತ್ತು ಬೇಲೂರು ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳು ಫ್ಲೀಟ್‌ರವರ ಅಭಿಪ್ರಾಯವನ್ನು ಸುಳ್ಳಾಗಿಸುವುದಲ್ಲದೆ, ಭಿಲ್ಲಮನ ಮರಣದ ಕಾಲವನ್ನು ಮುಂದೂಡಿದೆ. ಕ್ರಿ.ಶ. ೧೧೯೧ರ ನಂತರದ ಯಾವುದೇ ಶಾಸನಗಳು ಭಿಲ್ಲಮನ ಹೆಸರನ್ನು ಸೂಚಿಸಿಲ್ಲವೆಂದೂ, ಆದುದರಿಂದ

---

[11] Kannada manuscript No KA 14. of the Institute of Kannada Studies, Mysore. p 42, 43 & 56.

[12] *E.C.*, V Bl 77.

[13] *Op. cit.*, p 504.

ಭಿಲ್ಲಮನು ಸೊರಟೂರಿನ ಕದನದಲ್ಲಿ ಅಲ್ಲದಿದ್ದರೂ ಅನಂತರದ ಹೋರಾಟದಲ್ಲಿ ಮಡಿದಿರಬೇಕೆಂದು ಡಾ. ಡಿ. ಎಮ್. ಡೆರೆಟ್ ಅಭಿಪ್ರಾಯಪಟ್ಟಿದ್ದಾರೆ.[14] ಭಿಲ್ಲಮನ ಆಸ್ಥಾನ ಕವಿಯೆಂದು ಹೇಳಲಾದ ಹೇಮಾದ್ರಿಯೂ ಸೇರಿದಂತೆ ಇನ್ನೂ ಕೆಲವು ಇತಿಹಾಸಕಾರರು ಬಲ್ಲಾಳನೇ ಭಿಲ್ಲಮನಿಂದ ನಿರ್ಜೀವ ಗೊಳಿಸಲ್ಪಟ್ಟನೆಂದು ತಿಳಿಸುತ್ತಾರೆ. ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ' ಪ್ರಶಸ್ತಿಯಲ್ಲಿ ಕಂಡು ಬರುವ 'ನಿರ್ಧೇಯೋ ಹೊಯ್ಸಳೇಶವ್ಯಸಂ' ಎಂಬ ಮಾತು ಅವರ ಅಭಿಪ್ರಾಯಕ್ಕೆ ಪುಷ್ಟಿ ನೀಡಿವೆ. ಅಲ್ಲದೆ, ಕ್ರಿ.ಶ. ೧೧೯೨ರಲ್ಲಿ ಬರೆದ ಬಲ್ಲಾಳನ ಗದಗಿನ ಶಾಸನದಲ್ಲಿ ಆತನು ಸೋಲಿಸಿದ ಪಾಂಡ್ಯ ನೃಪಾಲ ಕಾಮದೇವ ಮತ್ತು ಸೇವುಣ ದಂಡನಾಯಕ ಜೈತುಗಿಯರ ಹೆಸರಿರಲು, ಭಿಲ್ಲಮನ ಮರಣದ ಉಲ್ಲೇಖವಿಲ್ಲದಿರುವುದು. ಮತ್ತು ಬೇಲೂರು ತಾಲ್ಲೂಕಿನಲ್ಲಿ ದೊರೆತ ಕ್ರಿ. ಶ. ೧೧೯೭ರ ಶಾಸನದಲ್ಲಿ ಸ್ಪಷ್ಟ ಉಲ್ಲೇಖವಿದ್ದರೂ ವಿಜಯೀ ಹೊಯ್ಸಳ ವೀರಬಲ್ಲಾಳನು ತನ್ನ ಶತ್ರುವಿನ ಮರಣವನ್ನು ಘೋಷಿಸುವುದಕ್ಕೆ ಅಷ್ಟು ಸಾವಕಾಶವಾದುದು ಅವರ ವಾದಕ್ಕೆ ಮುಖ್ಯ ಕಾರಣಗಳು. ಭಿಲ್ಲಮನು ಕ್ರಿ.ಶ. ೧೧೯೨ಕ್ಕೆ ಮುಂಚಿತವಾಗಿಯೇ ಮಡಿದನೆಂದೂ, ಆತನು ಲೊಕ್ಕಿಗುಂಡಿಯ ಕದನದಲ್ಲಿ ಬಲ್ಲಾಳ ನಿಂದಲೇ ಸಂಹರಿಸಲ್ಪಟ್ಟನೆಂದೂ ನಿಸ್ಸಂದೇಹವಾಗಿ ಹೇಳಬಹುದು. ಭಿಲ್ಲಮನ ಮರಣವನ್ನು ಸಾರುವ ಅಧಿಕೃತ ದಾಖಲೆಯೆಂದರೆ ನವಲಗುಂದ ತಾಲ್ಲೂಕಿನ ಅಣ್ಣಿಗೆರೆಯಲ್ಲಿ ದೊರೆತಿರುವ ಶಾಸನ.[15] ಅಲ್ಲಿನ ಅಮೃತೇಶ್ವರ ದೇವಾಲಯದ ಕಲ್ಲಿನಲ್ಲಿ ಕ್ರಿ.ಶ. ೧೨೦೨ರಲ್ಲಿ ಬರೆಸಲಾದ ಆ ಶಾಸನದ ಒಂದು ಭಾಗವು ಈ ಕೆಳಕಂಡಂತಿದೆ.

ಕರಿಸೈನ್ಯೋತ್ಕರವುಂಟು ವಾಜಿ ಬಳವುಂಟಾಳುಂಟು ತಳ್ತಂನೋಳಾ
ದ್ದುರ್ಧರದೊಳ್ ಕಾದುಪುವನೆಂದು ಭಿಲ್ಲಮ ನೃಪಂ ಬಂದಾಂತೊಡೊರ್ದೊಂದೆ ಸಿಂ
ಧುರಮಂ ನೂಂಕಿದನೊಕ್ಕಲಿಕ್ಕಿ ತುಳಿವಂ ಬೆನ್ನಟ್ಟಿ ಕೊಂದಿಕ್ಕಿದಂ
ಸೊರಟೂರಿಂದವೆ ಲೊಕ್ಕಿಗುಂಡಿವರೆಗಂ ಬಲ್ಲಾಳ ಭೂಪಾಳಕಂ

ಅಲ್ಲದೆ ಇಮ್ಮಡಿ ನರಸಿಂಹನ ಶಾಸನವೊಂದು[16] ಸೇವುಣರ ಮೇಲೆ ಬಲ್ಲಾಳ ಸಾಧಿಸಿದ ವಿಜಯವನ್ನು ಹೀಗೆ ಸಾರುತ್ತದೆ:

ಎರಪುಂ ಲಕ್ಕಂಬರಂ ಸುತ್ಥಣಯುರಶನಿಸನ್ನಾಹದಿಂ ಪನ್ನೆರಳ್ಸಾ
ಸಿರವಶ್ವಶ್ರೇಣಿಮೇಲಂ ಕವಣೆಯ ಮಣಿಪರ್ಯಾಣದಿಂ ತೋರ್ಕೆವೆತ್ತ
ಯ್ತುರೆ ತನ್ನೊಂದಾನೆಯಿಂ ಸೇವುಣನೃಪಬಲಮಂ ನೂಂಕಿ ಬೆನ್ನಟ್ಟಿ ಕೊಂದಂ
ಸೊರಟೂರಿಂ ಕೃಷ್ಣವೇಣಿನದಿಯ ತಡಿವರಂ ವೀರಬಲ್ಲಾಳರಾಯಂ॥

ಮೇಲಿನ ವರ್ಣನೆಗಳಲ್ಲಿ ಮೊದಲನೆಯದರಿಂದ ಭಿಲ್ಲಮನನ್ನು ಲೊಕ್ಕಿಗುಂಡಿಯ ವರೆಗೆ ಬಲ್ಲಾಳನು ಓಡಿಸಿದನೆಂದು ತಿಳಿದುಬರುತ್ತದೆ. ಎರಡನೆಯ ಪದ್ಯದಲ್ಲಿ ಈ ವಿಜಯವನ್ನು ಉತ್ಪ್ರೇಕ್ಷಿಸಲಾಗಿದೆ. ಈ ಯುದ್ಧದ ನಂತರವೂ ಕೃಷ್ಣಾನದಿಯಿಂದೀಚೆಗೆ ಆತನ ಆಳ್ವಿಕೆ ಮುಂದುವರಿಯಿತೆಂಬುದು ಶಾಸನ ದಿಂದ ಸ್ಪಷ್ಟಪಡುತ್ತದೆ. ಅಲ್ಲದೆ ಭಿಲ್ಲಮನ ಮಗನಾದ ಜೈತುಗಿಯು ತನ್ನ ಆಳ್ವಿಕೆಯನ್ನು ಕ್ರಿ.ಶ. ೧೧೯೧–೯೨ನೇ ವರ್ಷದಿಂದ ಆರಂಭಿಸಿದನೆಂದು ತಿಳಿದುಬರುತ್ತದೆ. ದಂಡನಾಯಕ ಜೈತುಗಿ ಕೂಡ ಕದನದಲ್ಲಿ ಮಡಿದುದರಿಂದ ಆತನೇ ಸಿಂಹಾಸನವನ್ನೇರಿರಲು ಸಾಧ್ಯವಿಲ್ಲ.

ಸೊರಟೂರು ಮತ್ತು ಲೊಕ್ಕಿಗುಂಡಿಗಳಲ್ಲಿ ವಿಜಯ ಪತಾಕೆಯನ್ನು ಹಾರಿಸಿದ ಬಲ್ಲಾಳನು, ಸೊರಟೂರಿನಿಂದ ಬೆಳ್ವೊಲದವರೆಗಿನ ಪ್ರದೇಶಗಳನ್ನು ಗೆದ್ದು ಹೊಯ್ಸಳರ ಆಧಿಪತ್ಯವನ್ನು ಪುನರ್ ಸ್ಥಾಪಿಸಿದನು. ಬಲ್ಲಾಳನ ಸೇನೆಯ ಕಾರ್ಯಾಚರಣೆಯನ್ನು ಚನ್ನರಾಯಪಟ್ಟಣದ ಆನೇಕೆರೆ ಶಾಸನದಲ್ಲಿ

---

14 D.M. Derrett *op. cit.*, p. 95.

15 *S. I. I., XV* No. 216.

16 *E. C., XI* Dg 25.

ವಿವರಿಸಲಾಗಿದೆ.[17] ಅಸಂಖ್ಯಾತ ಸೇವುಣ ಸೈನಿಕರ ಹೆಣಗಳ ರಸಗೊಬ್ಬರದಿಂದ ಕೃಷಿಗೆ ಯೋಗ್ಯವಾದ ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ ಬಲ್ಲಾಳನು ತಾನು ಗೆದ್ದ ಪ್ರದೇಶಗಳಲ್ಲಿ ಹೊಯ್ಸಳರ ಅಧಿಕಾರ ಬೀಜವನ್ನು ಬಿತ್ತಿದನು. ಲೊಕ್ಕಿಗುಂಡಿಯನ್ನು ಕೇಂದ್ರ ಕಾರ್ಯಸ್ಥಾನವಾಗಿ ಬಳಸಿಕೊಂಡ ಹೊಯ್ಸಳ ಚಕ್ರವರ್ತಿ ಬೆಳ್ವೊಲ, ಹೊಂಬಾಳ, ಬಾಲಗನೂರು, ಎರಂಬರ್ಗೆ, ಬೆಳವಟ್ಟಿಗೆ, ಮುದಗನೂರು, ಅಣ್ಣಿಗೆರೆ, ಸೌಂದತ್ತಿ, ಬಳ್ಳಾರಿ, ದೊರೆವಾಡಿ, ಉದ್ಧರೆ, ಕುರುಗೋಡು, ಹಾಲುವೆ ಮತ್ತು ಮಾನುವೆ- ಇವುಗಳನ್ನು ಗೆದ್ದುಕೊಂಡನೆಂದು ಅದೇ ಶಾಸನದಲ್ಲಿ ವಿವರಿಸಿದೆ.

ಅರಿಗಿರಿದುರ್ಗ್ಗಮಲ್ಲನೃಪನೆತ್ತಿದ ಬೇಗದೆ ಕೊಂಡದುರ್ಗ್ಗವೊಂ
ದೆರಡೆ ವಿರಾಟರಾಜ ನಗರಂ ಕುಱುಗೋಡುಮತಂಗಭೂದರಂ
ಧೊರೆವಡಿಗುತ್ತಿಗುತ್ತವೊಲಲುದ್ಧರೆ ಕಾಲಡಿ ಬಂದಣ್ಕೆ ಬ
ಳ್ಳರೆ ಸೊಱಟೂರೆರಮ್ಬರಗೆ ಹಾಲುವೆ ಮಾನುವೆ ಲೊಕ್ಕಿಗುಂಡಿಗಳು॥

ಕೃಷ್ಣಾನದಿಯ ದಂಡೆಯ ವರೆಗೂ ಹೊಯ್ಸಳ ರಾಜ್ಯದ ಗಡಿಯನ್ನು ವಿಸ್ತರಿಸಿದ ಬಲ್ಲಾಳನು ಕುಮ್ಮಟ ಎಂಬಲ್ಲಿದ್ದಾಗ ತನ್ನ ತಂದೆ ಒಂದನೇ ನರಸಿಂಹನ ಹೆಸರಿನಲ್ಲಿ ಒಂದು ವಿಗ್ರಹವನ್ನು ಪ್ರತಿಷ್ಠೆ ಮಾಡಿಸಿದನೆಂದು ತಿಳಿದುಬರುತ್ತದೆ.[18] ಬಹುಶಃ 'ಬಲ್ಲಾಳ ಶಕೆ'ಯು ಆರಂಭವಾದುದು ಬಲ್ಲಾಳನ ಈ ಮಹೋನ್ನತ ವಿಜಯದ ನಂತರವೇ. 'ಬಲ್ಲಾಳ ಶಕೆ'ಯ ಆರಂಭದ ಬಗ್ಗೆಯೂ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಸುಮಾರು ೨೩ ಶಾಸನಗಳು ಈ ಶಕೆಯು ಕ್ರಿ.ಶ. ೧೧೯೦ರಿಂದಲೂ, ೩ ಶಾಸನಗಳು ಕ್ರಿ.ಶ. ೧೧೯೧ರಿಂದಲೂ ಆರಂಭವಾಯಿತೆಂದು ತಿಳಿಸುತ್ತವೆ.[19] ಬಲ್ಲಾಳನು ತನ್ನ ಶಕೆಯನ್ನು ಕ್ರಿ.ಶ.೧೧೯೧ರಿಂದಲೇ ಆರಂಭಿಸಿದನೆಂದು ಕೆಲವು ವಿದ್ವಾಂಸರು ಖಚಿತಪಡಿಸಿದ್ದಾರೆ.[20] ಸೇವುಣರಾಜ ಭಿಲ್ಲಮನ ಸೋಲಿನಿಂದಾಗಿ ಅವನ ಸಾಮಂತರ ಪ್ರಾಬಲ್ಯಕ್ಕೆ ಕೊಡಲಿ ಪೆಟ್ಟು ಬಿದ್ದಂತಾಯಿತು.

ಒಟ್ಟಿನಲ್ಲಿ ಸೊರಟೂರು ಮತ್ತು ಲೊಕ್ಕಿಗುಂಡಿಯ ಕದನದ ನಂತರ ಹೊಯ್ಸಳರ ರಾಜಧಾನಿ ದ್ವಾರಸಮುದ್ರವು ಕರ್ಣಾಟಕದ ರಾಜಧಾನಿಯಾಗಿ ಉಳಿಯದೆ, ದಕ್ಷಿಣ ಭಾರತದ ರಾಜಕೀಯದ ಗುರುತ್ವ ಕೇಂದ್ರವಾಯಿತು. ಸೇವುಣ ಭಿಲ್ಲಮನ ಸೋಲಿನಿಂದ ದಕ್ಷಿಣದ ರಾಜಕೀಯದಲ್ಲಿ ಪ್ರಭಾವಶಾಲಿಯಾಗಿದ್ದ ಇಮ್ಮಡಿ ಬಲ್ಲಾಳನ ಸಾಧನೆಯು ಶ್ಲಾಘನೀಯವಾದುದು. ದಕ್ಷಿಣ ಭಾರತದ ಮೇಲೆ ತಮ್ಮ ಸಾರ್ವಭೌಮಾಧಿಕಾರವನ್ನು ಸ್ಥಾಪಿಸುವ ನಿರ್ಧಾರದಿಂದ ಹಲವು ವರ್ಷಗಳಿಂದ ಹೋರಾಡುತ್ತಿದ್ದ ಹೊಯ್ಸಳರಾಜರ ಆಸೆಯು ಈಡೇರಿತು. ಕದಂಬರ, ಪಾಂಡ್ಯರ, ಕಳಚುರಿಗಳ, ಸೇವುಣರ ವಿರುದ್ಧ ಕೈಗೊಂಡ ಬಲ್ಲಾಳನ ಸೈನಿಕ ಕಾರ್ಯಾಚರಣೆಗಳು, ಸಾಧನೆಗಳು ಹಲವು ಕವಿಗಳಿಗೆ ಉತ್ತಮ ಕಾವ್ಯವಸ್ತುವಾದರೆ, ಆತನ ವ್ಯಕ್ತಿತ್ವವು ಶತ್ರುಗಳಿಗೆ ಭಯಭೀತಿಯ ಅಭೂತವಸ್ತುವಾಯಿತು. ಹೊಯ್ಸಳ–ಸೇವುಣರ ಸಂಬಂಧದ ಇತಿಹಾಸದಲ್ಲಿ ಈ ಕದನವು ಒಂದು ಮೈಲಿಗಲ್ಲು. ಭಿಲ್ಲಮನ ಉತ್ಕಟಾಕಾಂಕ್ಷೆಯ ಆಕಾಶದಲ್ಲಿ ಕಾಣಿಸಿಕೊಂಡ ಧೂಮಕೇತು. ಬಲ್ಲಾಳನು ಆಕ್ರಮಿತ ಪ್ರದೇಶಗಳಲ್ಲಿಯೂ ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹ ನೀಡಿ ಜನತೆಯ ಮೆಚ್ಚುಗೆಗೆ ಪಾತ್ರನಾದನು. ಹೊಯ್ಸಳ ರಾಜನ ಪರಿಶ್ರಮದ ಜೊತೆಗೆ ದಂಡನಾಯಕ–ಮಂತ್ರಿಗಳಾದ ಮಾಚಿರಾಜ, ಎರೆಯಣ್ಣ, ಕಾಮೆಯ, ಕೇಶವದೇವ, ಚಂದ್ರಮೌಳಿ, ಅಮಿತ್ತಯ್ಯ ಮೊದಲಾದವರ ಸ್ವಾಮಿನಿಷ್ಠೆ, ಕರ್ತವ್ಯಶ್ರದ್ಧೆಯೂ ಆತನ ಯಶಸ್ಸಿಗೆ ಕಾರಣವಾಯಿತು. ಸೊರಟೂರು ಕದನವು ಕನ್ನಡನಾಡಿನ ಹಾಗೂ ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಘಟನೆ. ಸೇವುಣರ ಮೇಲಿನ ವಿಜಯದ ನಂತರ ಇಮ್ಮಡಿ ವೀರಬಲ್ಲಾಳನು 'ಹೊಯ್ಸಳ

---

[17] *Ibid.*, V, Cn 179,

[18] Derrett: *op, cit.*, p. 96.

[19] Kielhorn: *List of Inscriptions of Southern India.*

[20] Derrett: *op. eit.*

ಚಕ್ರವರ್ತಿ', 'ದಕ್ಷಿಣ ಚಕ್ರವರ್ತಿ','ಸಮಸ್ತಭುವನಾಶ್ರಯ', 'ಪೃಥ್ವೀವಲ್ಲಭ', 'ಸೇವುಣಬಡಬಾನಲ ವಾರಿಧಿ', 'ಸೇವುಣ ಕಟಕಸೂರೆಕಾರ', ಇತ್ಯಾದಿ ಬಿರುದುಗಳನ್ನು ಧರಿಸಿದನು. ಈ ವಿಜಯದ ನಂತರ ಹೊಯ್ಸಳರ ಪ್ರಾಬಲ್ಯವು ಇಡೀ ದಕ್ಷಿಣ ಭಾರತದಲ್ಲೆಲ್ಲಾ ವ್ಯಾಪಿಸಿತ್ತಲ್ಲದೆ, ಕೆಲವು ವರ್ಷಗಳ ಕಾಲ ಸಾರ್ವಭೌಮ ರಾಜ್ಯವಾಗಿ ಮುಂದುವರಿಯಿತು[21].

---

21 ರಾಜಾದಿತ್ಯನ 'ವ್ಯವಹಾರಗಣಿತ'ದ ಕಾಲವನ್ನು ಸುಮಾರು ಕ್ರಿ.ಶ. ೧೧೯೦ ಎಂದು ಸೂಚಿಸಲಾಗಿದೆ, ಲೇಖಕರು ಸೊರಟೂರು ಕದನ ೧೧೯೧ರ ಜೂನ್ ನಂತರ ನಡೆಯಿತೆಂದು ಹೇಳುವುದನ್ನು ಒಪ್ಪಿ, ವ್ಯವಹಾರಗಣಿತದಲ್ಲಿ ಬರುವ ಉಲ್ಲೇಖ ಇದೇ ಕದನಕ್ಕೆ ಸಂಬಂಧಿಸಿದುದೆನ್ನಬಹುದಾದರೆ ವ್ಯವಹಾರಗಣಿತ ಅನಂತರ, ಸುಮಾರು ೧೨೦೦ರ ವೇಳೆಗೆ ರಚಿಸಲ್ಪಟ್ಟಿರಬೇಕು. ಸೇಉಣ ಭಿಲ್ಲಮ ೧೧೯೨ರ ವರೆಗೂ ಬದುಕಿದ್ದನೆಂದು ಹೇಳಲು ಆಧಾರಗಳಿವೆಯಾದ್ದರಿಂದ ಭಿಲ್ಲಮನು ಈ ಯುದ್ಧದಲ್ಲಿ ಮಡಿದನೆಂದು ಹೇಳಲಾಗದು ಎಂಬ ಅಭಿಪ್ರಾಯವೂ ಇದೆ. ಈ ವಿಷಯದಲ್ಲಿ ಇನ್ನಷ್ಟು ಸಂಶೋಧನೆ ಅವಶ್ಯಕವೆನಿಸುತ್ತದೆ. (ಬಾ.ರಾ.ಗೋ.)

ಪುನರಪಿ ಸೂತ್ರ॥

ಮದನಾರಾತಿ ನೃಪಾಲಕಂ ಭಯದಿ ಬೆಂಗೊಟ್ಟೋಡುತಿಪ್ಪಲ್ಲಿ ತಾ ನದಿಯೊಳ್ಬಿದ್ದವು ಪಂಚಭಾಗೆ ಹಯ ಷಡ್ಭಾಗೆ ದಿಶಾಪಟ್ಟವಾದವು ಕದರ್ಚಿಪೋಡಿದವು ಚೌಕುಭಾಗೆ ಲಾಯಕ್ಕೆ ಸಂದವು ಮಿಕ್ಕರು ನೂಱು ವಾಜಿ ಸಹಿತಂ ಕೆಟ್ಟೋಡಿದಂ ಭಿಲ್ಲಮಂ ॥

ನದಿಯೊಳು ಬಿದ್ದುದು ಅದಱಿಕೆೞಲೊಂದು ಭಾಗೆ ಕೆ(ಂ)ಟ್ಟೋಡಿದವು ಮೂಱಿಕೆೞಲೊಂದು ಭಾಗೆ ಕಾದಿ ಸತ್ತವು ಆ ಮಿಕ್ಕದಱಿಕೆೞಗೆ ನಾಲ್ಕಱಿಕೆೞಗೊಂದು ಭಾಗೆ ಓಡಿದವು ಮಿಕ್ಕುಹೋದ ಕುದುರೆ ೬೦೦ ಆದರೆ ಮೊದಲು ಬಂದ ಕುದುರೆಯೆಷ್ಟೆಂದರೆ ಕುದುರೆ ೧೮೦೦ ಬಿದಕ್ಕೆ ಟೀಕಿನ ವಿವರ ಕಡೆಯ ೬೦೦ಲ್ಲಿ ಮೂಱಿಕೆೞಲೊಂದು ಭಾಗೆಯ ಬಂದ ೨೦೦ ಕೂಡಿದರೆ ೮೦೦ ಆ ಯೆಂಟು ನೂರಯ್ಯೆರಡು ಭಾಗೆಯ ಮಾಡಿದೊಂದು ಭಾಗೆಯ ೪೦೦ ಕೂಡಿದರೆ ೧೨೦೦ ಅಯಿದು ಭಾಗೆಯ ಮಾಡಿದೊಂದು ಭಾಗೆಯ ೨೪೦ನೂ ಕೂಡಿದರೆ ೧೪೪೦ನೂ ನಾಲ್ಕು ಭಾಗೆಯ ಮಾಡಿದರೆ ೩೬೦ನೂ ಕೂಡಿದರೆ ೧೮೦೦ ತಪ್ಪದು ॥ ಸೂತ್ರ ೧೦೦ ॥

ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ರಾಜಾದಿತ್ಯನ 'ವ್ಯವಹಾರ ಗಣಿತ'ದ ಹಸ್ತಪ್ರತಿ (KA ೧೪) ಪುಟ ೪೩ ರಿಂದ ಉದ್ಧೃತ.



ಚಾಮುಂಡೇಶ್ವರಿ (ಗಂಧದ ಕೃತಿ)
ವೆಂಕಪ್ಪನವರ ಕೊನೆಯ ದಿನಗಳ ರಚನೆ



ಗಂಡಸಿ ಎಚ್. ವೆಂಕಪ್ಪ

ಪಿ. ಆರ್. ತಿಪ್ಪೇಸ್ವಾಮಿ

ಖ್ಯಾತ ದಂತಶಿಲ್ಪಿ ಎಚ್. ವೆಂಕಪ್ಪ

ನಿರ್ಜೀವ ದಂತದಲ್ಲಿ ಜೀವಕಳೆಯನ್ನು ತುಂಬುವ ಅಪೂರ್ವ ಶಿಲ್ಪಿ ದಿ. ಎಚ್. ವೆಂಕಪ್ಪನವರು ಕರ್ನಾಟಕಕ್ಕೆ ಕೀರ್ತಿ ತಂದುಕೊಟ್ಟವರು. ಶ್ರೀಯುತರು ರಾಧಾಕೃಷ್ಣರ ವಿವಿಧಭಂಗಿಯ ಕೃತಿಗಳನ್ನು ಮನಮೋಹಕವಾಗಿ ದಂತದಲ್ಲಿ ನಿರ್ಮಿಸಿದ್ದಾರೆ. ಒಮ್ಮೆ ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ಯುವರಾಜರ ರಜತ ಪಾತ್ರೆ ಇವರ 'ರಾಧಾಕೃಷ್ಣ' ದಂತಕೃತಿಗೆ ದೊರೆಯಿತು. ಶ್ರೀಕೃಷ್ಣನ ಕೊಳಲ ನಿನಾದವನ್ನಾಲಿಸಿ ಲತೆಯಂತೆ ಬಳುಕಿ ಬಂದ ರಾಧಾರಮಣಿ ಮಧುರ ಮೋಹನರೂಪಿಯ ಸ್ವಾಗತಕ್ಕೆ ಮೈಮರೆತಿರುವ ದೃಶ್ಯ ಅತ್ಯುಚ್ಚ ರೀತಿಯಲ್ಲಿ ಕಲಾಪೂರ್ಣವಾಗಿ ಕೊರೆಯಲ್ಪಟ್ಟಿದೆ. ಮುಖದಲ್ಲಿ ಹಾವಭಾವ ಭಂಗಿಗಳನ್ನು ಶರೀರದ ನಿಲುವು ಒಲವುಗಳನ್ನೂ ಭಾವಪೂರ್ಣತೆಯಿಂದ ಕಡೆದಿದ್ದಾರೆ. ಇವರ ಕಲೆಯ ಬೆಲೆಯನ್ನು ಅಳೆಯಲು ಇದೊಂದು ಕೃತಿಯೇ ಸಾಕು.

ಆದರೆ ಈ ಕೃತಿಯನ್ನು ಕೊಂಡ ವ್ಯಾಪಾರಿ ಮನೋಭಾವದ ವ್ಯಕ್ತಿಗಳು ಅದರ ಸಾವಿರಾರು ಪ್ರತಿಗಳನ್ನು ಫೋಟೋ ತೆಗೆಸಿ ಮಾರಾಟದ ಉದ್ಯಮಕ್ಕೆ ಎಡೆಕೊಟ್ಟರು. ಇದರ ಪರಿಣಾಮವಾಗಿ ಎಲ್ಲೆಲ್ಲೂ ಈ ಕೃತಿಯ ಪ್ರತಿಗಳು ಎಲ್ಲರ ಕಣ್ಣಮುಂದೆ ಸುಳಿಯುತ್ತಿರುವುದು ಸಂತಸದ ಸಂಗತಿಯಾದರೂ ಅದನ್ನು ರಚಿಸಿದ ವೆಂಕಪ್ಪನವರ ಹೆಸರು ಅಜ್ಞಾತವಾಗಿಯೇ ಉಳಿದು ಅವರಿಗೆ ತುಂಬಾ ಅನ್ಯಾಯವಾದಂತಾಗಿದೆ. ಈಗಲೂ ಅನೇಕರು (ಮೂಲಕೃತಿಯನ್ನು) ನಕಲು ಮಾಡಿ ಜೀವಿಸುವುದನ್ನು ಕಾಣಬಹುದಾಗಿದೆ.

ದಂತಕೃತಿ ರಚನೆಯಲ್ಲಿ ಖ್ಯಾತಿ ಪಡೆದಿದ್ದ ವ್ಯಕ್ತಿ ವೆಂಕಪ್ಪ. ಇವರ ಮತ್ತೊಂದು ಕೃತಿ 'ರಾಧಾಕೃಷ್ಣ' ಅಪೂರ್ವವೆನಿಸಿದೆ, ಇದನ್ನು ಕೊಂಡ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಗೀತೆಯೊಂದನ್ನು ರಚಿಸಿದ್ದಾರೆ. ರಾಧಾಕೃಷ್ಣರು ಒಂದು ಕಡೆ ಸೇರಿದ್ದಾರೆ. ಅವರ ಸರಸಸಲ್ಲಾಪಗಳು ಪ್ರೇಮಪೂರ್ಣ ನೋಟಗಳನ್ನು ನೋಡಿದವರು ಬೆರಗಾಗಬೇಕು. ರಾಧೆಯ ಜಡೆಯನ್ನು ಎಳೆದು ವಿನೋದ ಮಾಡುವಾಗ ಅವಳು ನಸುನಾಚಿದವಳಂತೆ ಪಕ್ಕಕ್ಕೆ ತಿರುಗಿದ್ದಾಳೆ. ಇವರೀರ್ವರ ಪ್ರೇಮಸಲ್ಲಾಪಗಳನ್ನು ಈಕ್ಷಿಸಿ ಅಚ್ಚರಿಗೊಂಡಂತೆ ಇನ್ನೆರಡು ನವಿಲು ಜೋಡಿ ಪ್ರೇಮಿಗಳು ಅವರ ಪಾದದ ಬಳಿಯೇ ನಿಂತಿವೆ. ಈ ಅಪೂರ್ವ ಕೃತಿ ರಚಿಸಿದ ವೆಂಕಪ್ಪನವರ ಕಲಾಚಾತುರ್ಯ ಮೆಚ್ಚುವಂತಹದು.

ಇನ್ನೊಂದು ಕೃತಿಯಲ್ಲಿ ರಾಜಭೋಗಗಳನ್ನು ತ್ಯಾಗಮಾಡಿ ಬಂದ ವಿಶ್ವಾಮಿತ್ರನನ್ನು ಪ್ರೇಮದ ಬಲೆಗೆಳೆಯುತ್ತಿದ್ದಾಳೆ ಮೇನಕೆ. ಮೋಹಪಾಶಕ್ಕೆ ಬಲಿಯಾದ ವಿಶ್ವಾಮಿತ್ರ ಓರೆಗಣ್ಣಿನಿಂದ ಆ ಮೋಹನಾಂಗಿಯ ನರ್ತನವನ್ನವಲೋಕಿಸುವ ಸುಂದರ ದೃಶ್ಯ ನೋಟಕರನ್ನು ಮೂಕಗೊಳಿಸುವಂತಿದೆ. ಆಳಿದ ಶ್ರೀ ಕೃಷ್ಣರಾಜ ಒಡೆಯರು ಸ್ವತಃ ವಿಷಯವನ್ನು ಸೂಚಿಸಿ ವೆಂಕಪ್ಪನವರಿಂದ ದಂತದಲ್ಲಿ ಕೆತ್ತಿಸಿದ ಕೈಲಾಸ ಪರ್ವತದ ಪ್ಯಾನಲ್ ಈಗ ಚಿನ್ನದ ಕಟ್ಟಿನೊಂದಿಗೆ ಮೆರೆಯುತ್ತಿದೆ. ಇಂಥ ನೂರಾರು ಕೃತಿಗಳು ನಾಡಿನಲ್ಲೂ ವಿದೇಶಗಳಲ್ಲೂ ಮೆರೆಯುತ್ತಿವೆ. ಇವರು ರಚಿಸಿದ ಚಂದ್ರತಾರ, ನಟರಾಜ, ಸರಸ್ವತಿ, ಚತುರ್ಮುಖ ಬ್ರಹ್ಮ ಮುಂತಾದ ಸುಂದರ ಕೃತಿಗಳು ರಾಜಮಹಾರಾಜರ ಅರಮನೆಗಳ ಅಲಂಕಾರದ ಸಾಧನಗಳಾಗಿವೆ. ಅನೇಕ ನಗರಗಳ ಆಗರ್ಭ ಶ್ರೀಮಂತರ ಹೆಮ್ಮೆಯ ವಸ್ತುಗಳಾಗಿವೆ.

ಬಾಪೂಜಿಯವರ ಪ್ರೀತಿಗೆ ಪಾತ್ರರಾದ ಈ ಶಿಲ್ಪಿಗಳು ಧನ್ಯರು. ೧೯೩೬ರಲ್ಲಿ ಲಕ್ನೋವಿನಲ್ಲಿ ನಡೆದ ಪ್ರದರ್ಶನದ ಆರಂಭೋತ್ಸವವನ್ನು ಬಾಪೂಜಿಯವರೇ ನಡೆಸಿದರು. ಆಗ ಮೈಸೂರಿನ ಈ ಶಿಲ್ಪಿಗಳ ದಂತಕೃತಿಗಳನ್ನು ನೋಡಿ ತುಂಬ ಮೆಚ್ಚಿಕೊಂಡದಲ್ಲದೆ ವೆಂಕಪ್ಪನವರು ಹೇಗೆ ಕೆತ್ತಬಲ್ಲರು ಎಂಬುದನ್ನು ಅವಲೋಕಿಸಿ ಶ್ರೀಯುತರ ಕೈಚಳಕವನ್ನು ಕಂಡು ಮನಸಾರೆ ಕೊಂಡಾಡಿದ್ದರು. ಇದರ ಫಲವಾಗಿಯೇ ಬಾಪೂಜಿಯವರ ಇಚ್ಛೆಯಂತೆ ಅವರ ಮೊಮ್ಮಕ್ಕಳಾದ ಶ್ರೀ ನವೀನಚಂದ್ರ ಗಾಂಧಿಯವರು ವೆಂಕಪ್ಪನವರಲ್ಲಿದ್ದುಕೊಂಡು ದಂತಶಿಲ್ಪ ಕಲಾಭ್ಯಾಸ ಮಾಡಿದರು.

ಇವರ ಕೃತಿಗಳ ಸೌಂದರ್ಯಕ್ಕೆ ಮಾಟಕ್ಕೆ ಮಾರುಹೋದವರು ಬಹುಮಂದಿ. ಯುವರಾಣಿಯವರು ಇವರಿಂದ ದಂತದಲ್ಲಿ ಚಾಮುಂಡೇಶ್ವರಿ ವಿಗ್ರಹವನ್ನು ಮಾಡಿಸಿ ತಮ್ಮ ಪೂಜೆಗೆ ಇರಿಸಿಕೊಂಡಿದ್ದರು. ವಿಖ್ಯಾತ ಕವಿ ಕಾರ್ನ್‌ವಾಯುಲ್‌ರು ವೆಂಕಪ್ಪನವರ ಕಲೆಗೆ ಮಾರುಹೋಗಿದ್ದರು. ತಮ್ಮ ಜೊತೆಯಲ್ಲಿ ವೆಂಕಪ್ಪನವರನ್ನು ಕರೆದುಕೊಂಡು ಬಿಡ್ಡ ಮುಂತಾದ ಸ್ಥಳಗಳಿಗೆ ಭೇಟಿ ಮಾಡಿಸಿದರು. ತಮ್ಮ ಪತ್ನಿಗೆ ವೆಂಕಪ್ಪನವರಿಂದ ದಂತದ ಗುಲಾಬಿ ಹೂಗಳ ಮಾಲೆಯನ್ನು ಕೊರೆಸಿದ್ದರು.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಇವರ ಹುಟ್ಟೂರು. ತಂದೆ ರವಳನಾಥಪ್ಪ. ತಾಯಿ ನಾಗಮ್ಮ. ಅಜ್ಜ ಕೃಷ್ಣಪ್ಪ. ವೆಂಕಪ್ಪನವರ ತಾಯಿ ತಮ್ಮ ಐವತ್ತನೆ ವಯಸ್ಸಿನಲ್ಲಿ ತೀರಿಕೊಂಡರು. ವೆಂಕಪ್ಪ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗುತ್ತಾರೆ. ಇವರ ತಂದೆಗೆ ಸಾಕಷ್ಟು ಜಮೀನೂ ಮನೆಯೂ ಇದ್ದಿತು. ಬಾಲಕ ವೆಂಕಪ್ಪನನ್ನು ಕಾರವಾರದಲ್ಲಿ ವ್ಯಾಸಂಗ ಮಾಡಲು ಬಿಡಲಾಯಿತು. ಶಾಲೆಯಲ್ಲಿ ಬಾಲಕ ಓದಿನ ಬದಲು ಬರೀ ಚಿತ್ರ ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದ. ಇದನ್ನು ಗಮನಿಸಿದ ಉಪಾಧ್ಯಾಯರು ಹುಡುಗನ ಮನೆಯಲ್ಲಿ ದೂರು ಹೇಳಿದರು. ಶಾಲೆ ಬಿಡುವಂತಾಯಿತು.

ಕಲಾರಾಧಕರ ಸಂತತಿಗೆ ಸೇರಿದ ಬಾಲಕ ವೆಂಕಪ್ಪನ ತಾತಂದಿರಾದ ಕೀರ್ತಿಶೇಷ ಕೃಷ್ಣಪ್ಪನವರೂ ದಂತ-ಗಂಧದ ಕೆತ್ತನೆಯಲ್ಲಿ ಕೀರ್ತಿಯ ಶಿಖರವನ್ನೇರಿದ್ದರು. ೧೯೧೬ರಲ್ಲಿ ಕೃಷ್ಣಪ್ಪನವರು ರಚಿಸಿದ ಶ್ರೀಕೃಷ್ಣಾರ್ಜುನರನ್ನು ಹೊತ್ತ ದಂತದ ಸುಂದರವಾದ ಮೂರಡಿ ರಥವು ವಿಶ್ವದಲ್ಲೇ ಪ್ರಖ್ಯಾತವಾದ ಕಲಾಕೃತಿ ಎನಿಸಿದೆ. ಇದು ಲಂಡನ್ ಮ್ಯೂಜಿಯಂನಲ್ಲಿ ಶೋಭಿಸುತ್ತಿದೆ. ಇದಕ್ಕೆ ದಿ. ಕೃಷ್ಣಪ್ಪನವರಿಗೆ ಸುವರ್ಣ ಪದಕ ದೊರೆತುದು ಕನ್ನಡ ಕಲೆಗೆ ಒಂದು ವಿಶೇಷ ಗೌರವವೇ ಸರಿ. ಬಾಲಕ ವೆಂಕಪ್ಪನ ಕಲಾಸಕ್ತಿಗೂ ಕಲಾಪ್ರೌಢಿಮೆಗೂ ವಂಶಪಾರಂಪರ್ಯವಾಗಿ ಬಂದ ಕಲೆಯೇ ಕಾರಣ.

ವೆಂಕಪ್ಪನವರ ತಾಯಿಯ ತೌರುಮನೆ ಕುಮಟಾದಲ್ಲಿತ್ತು. ಅಲ್ಲಿ ಇವರ ಸೋದರಮಾವ ವಾಮನಪ್ಪ ಖ್ಯಾತ ಶಿಲ್ಪಿ ಎನಿಸಿದ್ದರು. ಹೊನ್ನಾವರ ಕುಮಟಾಕ್ಕೆ ತಿರುಗಾಡಿಕೊಂಡಿದ್ದ ವೆಂಕಪ್ಪ ತನ್ನ ಸೋದರಮಾವ ರಚಿಸುತ್ತಿದ್ದ ಗಂಧದ ಕೃತಿಗಳ ಪ್ರಭಾವ ಈತನ ಮೇಲೆ ಬಿದ್ದಿತು. ವೆಂಕಪ್ಪನ ತಂಗಿ ಗಿರಿಜಾಬಾಯಿ ಸಾಗರಕ್ಕೆ ಲಗ್ನವಾಗಿದ್ದರು. ಕೆತ್ತನೆ ಕಲೆಗೆ ಕೇಂದ್ರವಾದ ಸಾಗರಕ್ಕೂ ವೆಂಕಪ್ಪನವರಿಗೆ ಆಗಾಗ ಹೋಗಿಬರುವ ಸದವಕಾಶವು ದೊರೆತಿತ್ತು. ಇಷ್ಟೇ ಅಲ್ಲದೆ ಶಿಲ್ಪ ಕಲಾಕೇಂದ್ರಗಳಾಗಿದ್ದ ಬನವಾಸಿ, ಜಡೆ, ಹುಲೇಕಲ್ಲುಗಳಲ್ಲಿದ್ದ ವೆಂಕಪ್ಪನ ಅಕ್ಕಂದಿರ ಮನೆಗಳಿಗೂ ಬಂದು ಹೋಗುವ ಹವ್ಯಾಸ ಇವರಿಗಿದ್ದಿತು. ಇದರಿಂದಾಗಿ ವೆಂಕಪ್ಪನವರ ಕಲಾದೃಷ್ಟಿ ಮತ್ತೂ ವಿಶಾಲವಾಯಿತು. ಪಕ್ವವಾಯಿತು. ಇವರು ಕಲೆಯಲ್ಲಿ ನಯ-ನಾಜೂಕನ್ನು ಬೆಳೆಸಿಕೊಂಡು ಬಂದರು.

ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡ ಈ ಹುಡುಗ ತನ್ನ ಹದಿನೈದು ವರ್ಷಗಳ ತನಕ ತನ್ನ ಅಕ್ಕಂದಿರ ಮನೆಗಳ ಓಡಾಟದಲ್ಲಿ ಕಾಲಕಳೆದುಬಿಟ್ಟಿದ್ದರು. ಆದರೂ ತಮ್ಮ ೨೦ನೇ ವರ್ಷದ ವೇಳೆಗೆ ಗಂಧದಲ್ಲಿ ಮೂರ್ತಿಗಳನ್ನು ರಚಿಸುವುದರಲ್ಲಿ ಒಂದು ಸ್ಥಿತಿಗೆ ಮುಟ್ಟಿದ್ದರು. ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲೆನೆಂಬ ಧೈರ್ಯವೂ ಇವರಿಗೆ ಬಂದಿತು.

ಸಾಗರದಲ್ಲಿದ್ದಾಗ ವೆಂಕಪ್ಪ ಗಂಧದಲ್ಲಿ ಉತ್ತಮ ಕೃತಿ ರಚಿಸಿ ತೋರಿದ್ದರು. ಇದನ್ನು ಗಮನಿಸಿದ ಅಧಿಕಾರಿಯೊಬ್ಬರಿಂದಾಗಿ ಬೆಂಗಳೂರಿನ ಸರ್ಕಾರಿ ಕೈಗಾರಿಕಾ ವರ್ಕ್‌ಷಾಪಿಗೆ ಸೇರುವಂತಾಯಿತು. ಈ ವೇಳೆಗೆ ಇವರು ತಂದೆಯವರನ್ನು ಕಳೆದುಕೊಂಡು ಹದಿನೈದು ವರ್ಷಗಳಾಗಿದ್ದುವು. ಶಿರಸಿಗೆ

ಸಮೀಪದ ಮಲ್ಲೇಶ್ವರದಲ್ಲಿ ತಮ್ಮ ಅಕ್ಕನ ಮನೆಗೆ ಆಗಾಗ ಹೋಗಿ ಬರುತ್ತಿದ್ದರು. ಅಕ್ಕನ ಅಕ್ಕರೆಯ ಆದರ ವಿಶ್ವಾಸ ಇವರಿಗೆ ದೊರಕುತ್ತಿತ್ತು. ಅಕ್ಕನ ಮನೆಯ ಪಕ್ಕದಲ್ಲೇ ವಾಸವಾಗಿದ್ದ ಶೇಷಗಿರಿಯಪ್ಪನವರ ಪುತ್ರಿ ಪದ್ಮಾವತಿಯ ಸೌಂದರ್ಯಕ್ಕೆ ಇವರು ಮಾರುಹೋದರು. ಲಗ್ನವಾಗುವುದಾಗಿ ಹಠ ಹಿಡಿದರು. ಇದರಿಂದಾಗಿ ಸೋದರ ಮಾವನ ಮಗಳೊಂದಿಗೆ ಆಗಬೇಕಾಗಿದ್ದ ಲಗ್ನ ತಪ್ಪಿಹೋಯಿತು. ವೆಂಕಪ್ಪ ತಾವೇ ಸಂಪಾದಿಸಿ ತಂದ ಹಣದಿಂದ ತಮ್ಮ ಲಗ್ನವನ್ನು ತುಸು ವೈಭವದಿಂದಲೇ ಮಾಡಿಕೊಂಡರು. ಲಗ್ನವಾಗಿ ನಂತರ ಹುಟ್ಟೂರಾದ ಹೊನ್ನಾವರದ ಸ್ವಂತ ಮನೆಯಲ್ಲಿ ಎರಡು ವರ್ಷಗಳು ಕಾಲ ಕಳೆದರು. ಅನಂತರ ನೇರವಾಗಿ ಮೈಸೂರಿಗೆ ಬಂದರು. ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಇವರಿಗೆ ಬಿಡುವಿನ ವೇಳೆಯ ಉದ್ಯೋಗವೊಂದು ದೊರೆಯಿತು. ಇವರಿಗೆ ಅಲ್ಲಿ ಗಳಿಕೆಗೂ ಅವಕಾಶವಾಯಿತು.

ವೆಂಕಪ್ಪನವರ ಪುಟ್ಟ ಸಂಸಾರ ಮೈಸೂರಿನ ಶಿವರಾಮಪೇಟೆಯ ಮನೆಯೊಂದರಲ್ಲಿ ಸಾಗಿತು. ಇವರಿಗೆ ಬಾಡಿಗೆ ಮನೆ ಕೊಟ್ಟಿದ್ದ ಒಕ್ಕಲು ಮನೆತನದ ಪುಟ್ಟಮ್ಮಜ್ಜಿ ಬಹು ವಿಶ್ವಾಸದಿಂದ ಕಾಣುತ್ತಿದ್ದರು. ಮಕ್ಕಳೀರ್ವರನ್ನು ಕಳೆದುಕೊಂಡಿದ್ದ ಈ ಅಜ್ಜಿ ತನ್ನ ಮಕ್ಕಳ ಸ್ಥಾನದಲ್ಲಿ ವೆಂಕಪ್ಪ ಬಂದನೆಂದು ಬಹಳ ಆಸ್ಥೆಯಿಂದ ನೋಡಿಕೊಳ್ಳುತ್ತಿದ್ದರು. ತಾಯಿ ಇಲ್ಲದೆ ಬೆಳೆದ ವೆಂಕಪ್ಪನವರಿಗೆ ಅಜ್ಜಿಯ ವಾತ್ಸಲ್ಯದಿಂದ ತಮ್ಮ ಸಂಸಾರದ ಹೊರೆ ಹಗುರವಾಯಿತು. ೧೯೩೩ರಲ್ಲಿ ಚಾಮರಾಜೇಂದ್ರ ಶಾಲೆಯಲ್ಲಿ ಗಂಧ, ದಂತದ ಕೆತ್ತನೆ ವಿಭಾಗದ ಶಿಕ್ಷಕರಾಗುವ ಅವಕಾಶವೂ ಇವರಿಗೆ ಲಭ್ಯವಾಯಿತು. ಇಲ್ಲಿ ಕೆಲಸಕ್ಕೆ ಸೇರುವ ಮುನ್ನ ಒಂದು ಸ್ಪರ್ಧೆಗೆ ನಿಲ್ಲಬೇಕಾಯಿತು. ಈ ಕೆಲಸಕ್ಕೆ ಅರ್ಜಿ ಸಲ್ಲಿಸಿದ ಇಬ್ಬರಿಗೆ ಒಂದು ಸ್ಪರ್ಧೆಯನ್ನು ಆ ಶಾಲೆಯ ಮುಖ್ಯಸ್ಥರಾಗಿದ್ದ ಎಸ್. ರಾಮಸ್ವಾಮಿ ಅಯ್ಯಂಗಾರ್ಯರು ಏರ್ಪಡಿಸಿದ್ದರು. ಕೈಗಾರಿಕಾ ಇಲಾಖೆಯ ಡೈರೆಕ್ಟರಾಗಿದ್ದ ಜನಾಬ್ ನಬೀಖಾನ್‌ರ ರೂಪಚಿತ್ರವನ್ನು ದಂತದಲ್ಲಿ ರಚಿಸಬೇಕಾಯಿತು. ವೆಂಕಪ್ಪನವರು ರಚಿಸಿದ ಮೂರ್ತಿ ಬಹಳ ಸ್ವಾಭಾವಿಕತೆಯಿಂದ ಕೂಡಿತ್ತು. ನಬೀಖಾನ್ ಸಾಹೇಬರೇ ಈ ಕೃತಿಯನ್ನು ವೀಕ್ಷಿಸಿ ಮೆಚ್ಚಿಗೆ ಸೂಚಿಸಿದರು. ಇವರ ಕಲಾಪ್ರೌಢಿಮೆಯಿಂದಾಗಿ ಇವರ ಕೆಲಸ ಖಾಯಂ ಆಯಿತು. ಇವರಿಗೆ ದೊರೆತ ಸ್ಥಾನದಲ್ಲಿ ಖ್ಯಾತ ಶಿಲ್ಪಿ ಸಾಗರದ ಗಣಪತಪ್ಪ ಎಂಬುವರು ಇದ್ದು ನಿವೃತ್ತರಾಗಿದ್ದರು. ಆ ಸ್ಥಾನಕ್ಕೆ ವೆಂಕಪ್ಪನವರು ತಕ್ಕವರೆಂದು ಎಲ್ಲರಿಗೂ ತೃಪ್ತಿತಂದಿತು.

ವೆಂಕಪ್ಪನವರು ಚಾಮರಾಜೇಂದ್ರ ಶಾಲೆಯಲ್ಲಿ ಖ್ಯಾತ ಶಿಲ್ಪಿ ಎನಿಸುತ್ತಾ ಬಂದರು. ಆಗ ಮೈಸೂರು ಸೀಮೆಗೆ ಹೊರರಾಷ್ಟ್ರದಿಂದ ಯಾರಾದರೂ ಗಣ್ಯ ಅತಿಥಿಗಳು ಭೇಟಿ ನೀಡಿದರೆ ಅವರಿಗೆ ನಮ್ಮ ರಾಜ್ಯದ ಪರವಾಗಿ ಒಂದು ಕಾಣಿಕೆ ಸೇರುತ್ತಿತ್ತು. ಅದು ವೆಂಕಪ್ಪನವರ ದಂತ ಇಲ್ಲವೆ ಗಂಧದ ಕಲಾಕೃತಿಯಾಗುತ್ತಿತ್ತು. ಬೆಂಗಳೂರು ನಗರಸಭೆ ರಷ್ಯದ ಪ್ರಧಾನ ಕಾರ್ಯದರ್ಶಿ ಕ್ರುಶ್ಚೇವ್‌ರವರನ್ನು ಸನ್ಮಾನಿಸಿದಾಗ ಮೇಯರ್ ದೀನದಯಾಳು ನಾಯಿಡು ಅವರು ವೆಂಕಪ್ಪನವರು ರಚಿಸಿದ ದಂತಕೃತಿಯನ್ನು ಇತ್ತು ಸನ್ಮಾನಿಸಿದ್ದರು. ಇವರೇ ರಚಿಸಿದ ಮತ್ತೊಂದು ಭಂಗಿಯ ರಾಧಾಕೃಷ್ಣಮೂರ್ತಿಯನ್ನು ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು ಅಮೆರಿಕದ ಉಪಾಧ್ಯಕ್ಷ ರಿಚರ್ಡ್ ನಿಕ್ಸನ್‌ರಿಗೆ ಅರ್ಪಿಸಿದ್ದರು.

ರಾಧಾಕೃಷ್ಣನ ಕೃತಿಯನ್ನು ಮೊಟ್ಟಮೊದಲು ರಚಿಸಿದ್ದು ಶಿವರಾಮಪೇಟೆಯ ಪುಟ್ಟಮ್ಮಜ್ಜಿಯ ಮನೆಯಲ್ಲಿ. ಆ ಕೃತಿಗೆ ತಕ್ಕಂತೆ ಬಂಗಾರದ ಒಡವೆಗಳನ್ನೇ ಮಾಡಿಸಿ ಧರಿಸಿ ನೋಡಿ ಆನಂದಪಡುತ್ತಿದ್ದರಂತೆ. ಆ ಮೊದಲ ಕೃತಿ ಗುಜರಾತ್ ಕಡೆಯ ಕಪೂರ್ತಲದ ಆಗರ್ಭ ಶ್ರೀಮಂತ ಅಗರವಾಲರು ಕೊಂಡು ಹೋದರು. ೧೯೪೫ರಲ್ಲಿ ಆ ಕೃತಿಗೆ ದಸರಾ ವಸ್ತುಪ್ರದರ್ಶನದಲ್ಲಿ ರಜತಪಾತ್ರೆ ದೊರೆತಿತ್ತು. ರಾಧಾಕೃಷ್ಣರ ವಿವಿಧ ಭಂಗಿಯ ಇವರ ಕೃತಿಗಳು ಸಾಕಷ್ಟು ಮೊತ್ತವನ್ನು ತಂದುಕೊಟ್ಟವು.

ವೆಂಕಪ್ಪನವರದು ಸರಳ ಸುಂದರವಾದ ಜೀವನ. ಬೆಳಗಿನಲ್ಲಿ ಅರಮನೆಯ ಆವರಣದಲ್ಲಿರುವ ತ್ರಿಣೇಶ್ವರನ ದರ್ಶನ ಪಡೆದು ಬರುತ್ತಿದ್ದರು. ಸ್ನಾನಮಾಡಿ ಮುಗಿಸಿ ಬಹಳ ಭಕ್ತಿಭಾವದಿಂದ ಕೆಲಸಕ್ಕೆ ತೊಡಗುತ್ತಿದ್ದರು. ಚೀಣಗಳಿಗೆ ವಂದಿಸಿ ಕೃತಿ ರಚನೆಗೆ ಕೈಹಾಕುತ್ತಿದ್ದರು. ಭರತಪುರದ

ರಾಜರಿಗೆ ಒಮ್ಮೆ ಗೋಪಾಲಕೃಷ್ಣ ವಿಗ್ರಹ ರಚಿಸಿಕೊಡಲು ಒಪ್ಪಿದರು. ರಾತ್ರಿ ಎಲ್ಲಾ ನಿದ್ರೆಕೆಟ್ಟು ಮೂರು ದಿನಗಳಲ್ಲಿ ಸೃಜಿಸಿಕೊಟ್ಟರು. ಅಪರೂಪದ ಕೃತಿ ಬಹುಜನರನ್ನು ಆಕರ್ಷಿಸಿತು. ಕೀರ್ತಿ ತಂದಿತು.

ವೆಂಕಪ್ಪನವರದು ತುಂಬಿದ ಸಂಸಾರ. ಸಾಹಸಮಯ ಕಲಾಜೀವನವಾಗಿತ್ತು ಇವರದು. ಸದಾ ಶಾಂತಚಿತ್ತರೂ ಹಸನ್ಮುಖಿಗಳೂ ಆಗಿರುತ್ತಿದ್ದರು. ನೋವುಗಳ ಪರಂಪರೆಯನ್ನು ಬಾಳಿನಲ್ಲಿ ನುಂಗಿಕೊಂಡು ಬಂದ ಬಿರುಜೀವನ ಇವರದಾಗಿತ್ತು. ದುಂಡನೆಯ ಮಟ್ಟಸದ ಕುಳ್ಳನೆಯ ವೆಂಕಪ್ಪನವರು ಮೈಸೂರು ಪೇಟೆಗೆ ಹೊರಟರೆಂದರೆ ಅವರ ಸುತ್ತಲೂ ಒಂದು ಪರಿವಾರವೇ ಇರಬೇಕಿತ್ತು. ವೆಂಕಪ್ಪನವರು ತಮ್ಮ ಕೃತಿ ಮಾರಾಟದಿಂದ ಬಂದ ಹಣಕ್ಕೆ ಅನೇಕಬಾರಿ ಚಿನ್ನದ ಸರವನ್ನೋ ಇನ್ನೇನನ್ನೋ ಪೇಟೆಯಿಂದ ಕೊಂಡು ತರುವುದು ವಾಡಿಕೆಯಾಗಿತ್ತು. ಕಣ್ಣಿಗೆ ಕಂಡ ಬಟ್ಟೆಯನ್ನು ಮನೆಗೆ ತಂದು ಮಡದಿ ಮಕ್ಕಳನ್ನು ತೃಪ್ತಿಪಡಿಸುತ್ತಿದ್ದರು. ಪತ್ನಿಗೆ ಮಾತು ಕೊಟ್ಟರೆಂದರೆ ಅದು ಆಗಲೇಬೇಕು ಎಂಬ ಛಲ ಇವರದಾಗಿತ್ತು. ಪತ್ನಿ ಜೊತೆ ಮಾತಾಡುತ್ತ ಕಾರು ತರ್ತೀನಿ. ಜೊತೆಯಲ್ಲಿ ಕೂತು ಓಡಾಡೋಣ ಎಂದು ಆಗಾಗ ತಮಾಷೆ ಮಾಡುತ್ತಿದ್ದರಂತೆ. ಒಮ್ಮೆ ಬೆಂಗಳೂರಿಗೆ ಹೋಗಿ ಬಂದವರು 'ಕಾರು ತಂದಿದ್ದೀನಿ' ಎಂದು ತಿಳಿಸಿದರು ತಮ್ಮ ಪತ್ನಿಗೆ. ಏನೋ ಪುಟ್ಟಕಾರು ತಂದಿರಬಹುದೆಂದು ತಿಳಿದ ಪದ್ಮಾವತಮ್ಮ ನಿಜವಾದ ಕಾರನ್ನು ನೋಡಿ ಆನಂದಬಾಷ್ಪ ಸುರಿಸಿದರಂತೆ.

ರಾಧಾಕೃಷ್ಣ ಮೂರ್ತಿಗಳ ಬೇಡಿಕೆ ವಿಪರೀತವಾಯಿತು. ಹಣವೂ ಕೈಸೇರಿತು. ಎರಡು ಟ್ಯಾಕ್ಸಿಗಳನ್ನು ತಂದು ಬಾಡಿಗೆ ದುಡಿಯಲು ಬಿಟ್ಟರು. ಒಂಟಿಕೊಪ್ಪಲಿನಲ್ಲಿ ತಮ್ಮದೇ ಆದ ಒಂದು ಮನೆಯಲ್ಲಿ ವಾಸಮಾಡುವಂತಾಯಿತು. ಇವರ ಕೀರ್ತಿ ಇನ್ನೂ ಹಿರಿದಾಯಿತು. ಮತ್ತೊಂದು ಮನೆಯೂ ಸಿದ್ಧವಾಯಿತು. ವೆಂಕಪ್ಪನವರ ಸಂಸಾರ ದೊಡ್ಡದಾಯಿತು. ಐದು ಜನ ಹೆಣ್ಣು ಮಕ್ಕಳು. ನಾಲ್ಕು ಜನ ಗಂಡು ಮಕ್ಕಳು ಇವರಿಗೆ. ಹೆಣ್ಣು ಮಕ್ಕಳೆಲ್ಲಾ ಹಿರಿಯರಾಗಿದ್ದು ಅವರ ಲಗ್ನಗಳ ಭರಾಟೆಯಲ್ಲಿ ಒಂದು ಮನೆ ಕೈಬಿಟ್ಟಿತು. ೧೯೫೫ರಲ್ಲಿ ಇವರಿಗೆ ಸಾಗರದ ವೃತ್ತಿಶಿಕ್ಷಣ ಶಾಲೆಗೆ ಮೈಸೂರಿನಿಂದ ವರ್ಗವಾಯಿತು. ಮೈಸೂರಿನಲ್ಲಿ ಮಕ್ಕಳನ್ನು ಬಿಟ್ಟು ತಾವು ಪತ್ನೀಸಮೇತ ಸಾಗರಕ್ಕೆ ಬಂದರು. ವೆಂಕಪ್ಪನವರ ಕೃತಿಯೊಂದನ್ನು ಸಾಗರದ ಅಂಗಡಿಯೊಂದರಲ್ಲಿ ನೋಡಿದ ಗೌರ್ನರ್ ಮಂಗಳದಾಸ ಪಕ್ವಾಸ್ ವೆಂಕಪ್ಪನವರ ಮನೆಗೇ ಭೇಟಿ ನೀಡಿದರು. ಈ ಸುದ್ದಿ ದೊಡ್ಡದೇ ಆಯಿತು. ವೆಂಕಪ್ಪನವರು ರಾತ್ರಿಯ ವೇಳೆ ವಿದ್ಯುತ್ ಬೆಳಕಿನಲ್ಲಿ ಕೃತಿ ರಚಿಸುತ್ತಿದ್ದರಿಂದಲೋ ಏನೋ ಅವರ ಬಲದ ಕಣ್ಣು ನಂದಿಹೋಯಿತು. ಅವರೂ ಒಂದೇ ಕಣ್ಣಿನಿಂದ ಕೆಲಸವನ್ನು ಮಾಡುತ್ತಾ ಬಂದರು. ೧೯೬೫ರಲ್ಲಿ ಸರ್ಕಾರಿ ಕೆಲಸದಿಂದ ನಿವೃತ್ತರಾದರು. ಕೂಡಲೇ ಮೈಸೂರಿಗೆ ಬಂದು ನೆಲಸಿದರು. ರಕ್ತದ ಒತ್ತಡ ಕಾಣಿಸಿಕೊಂಡಿತು. ಉಳಿದ ಹೆಣ್ಣುಮಕ್ಕಳ ಲಗ್ನದ ಸಲುವಾಗಿ ಮನೆಯ ಮೇಲೆ ಸಾಲ ತೆಗೆದರು. ಅವರ ನಿವೃತ್ತಿ ಹಣ ಆ ಒಂದು ಮನೆ ಸಾಲವನ್ನು ತೀರಿಸಿತು. ಇರಲು ಒಂದು ಮನೆ ಉಳಿಯಿತು. ರಕ್ತದ ಒತ್ತಡಕ್ಕೆ ತುತ್ತಾಗಿ ಇವರು ತಮ್ಮ ಮನೆಯಲ್ಲಿ ನರಳುತ್ತಿದ್ದರು. ನಾನು ವೆಂಕಪ್ಪನವರನ್ನು ಆಗಾಗ ಭೇಟಿ ಮಾಡುವುದು ರೂಢಿಯಾಗಿತ್ತು. ನಾನು ಯಾವ ಚಿತ್ರವನ್ನು ರಚಿಸಿದರೂ ಮೊದಲು ವೆಂಕಪ್ಪನವರಿಗೆ ತೋರಿಸುತ್ತಿದ್ದೆ. ಅವರು ಸಹೃದಯದಿಂದ ತಮ್ಮ ಮೆಚ್ಚಿಗೆಯನ್ನು ಸೂಚಿಸುತ್ತಿದ್ದರು. ಹುರಿದುಂಬಿಸುತ್ತಿದ್ದರು. ಒಳ್ಳೆಯ ಕಲೆಯನ್ನೂ ಕಲಾವಿದರನ್ನೂ ಮೆಚ್ಚುವ ಧಾರಾಳ ಗುಣ ಇವರದಾಗಿತ್ತು. ವೆಂಕಪ್ಪನವರು ಅಮೃತಶಿಲೆಯಲ್ಲೂ ಕೃತಿರಚನೆಮಾಡಿದ್ದಾರೆ. ಇವರು ಕಡೆದ ಯುವರಾಜ, ಚಾಮುಂಡೇಶ್ವರಿ ವಿಗ್ರಹಗಳು ಇದಕ್ಕೆ ಸಾಕ್ಷಿಯಾಗಿವೆ. ಆಳೆತ್ತರದ ಕೃತಿಗಳನ್ನು ಅಮೃತಶಿಲೆಯಲ್ಲಿ ಕಡೆಯಬೇಕೆಂಬ ಇವರ ಹೆಬ್ಬಯಕೆ ಅನಾರೋಗ್ಯದಿಂದಾಗಿ ಕೈಗೂಡಲಿಲ್ಲ. ನಾವು ಕೆಲವು ಮಿತ್ರರು ದೆಹಲಿಯ ಕಲಾಪ್ರದರ್ಶನದ ಸಲುವಾಗಿ ಹೊರಟಿದ್ದೆವು. ಹೋಗುವ ಮುನ್ನ ವೆಂಕಪ್ಪನವರನ್ನು ಭೇಟಿಯಾಗಿದ್ದೆ. ಹಾಸಿಗೆ ಹಿಡಿದ ಅವರು 'ಹೋಗ್ತೀರಾ. ನನ್ನ ಕೈಬಿಟ್ಟಿರಾ?' ಎಂದು ಅವರು ಆಡಿದ ಮಾತುಗಳು ಈಗಲೂ ನೆನೆದರೆ ಕಣ್ಣು ಮಂಜಾಗುತದೆ. ೨೩-೧೨-೭೭ರ ಶುಕ್ರವಾರ ರಾತ್ರಿ ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ ನಿಧನರಾದ ವಾರ್ತೆ ದೆಹಲಿಯಲ್ಲಿದ್ದ ನಮಗೆ ಮುಟ್ಟಿದಾಗ ನಮಗೆ ದಿಗ್ಭ್ರಮೆಯಾಯಿತು. ಅಪ್ರತಿಮ ಶಿಲ್ಪಿ, ಕನ್ನಡ ನಾಡಿನಿಂದ ಮರೆಯಾಗಿ ಕನ್ನಡ ಶಿಲ್ಪ ಕೀರ್ತಿ ಕುಂದಿತಲ್ಲಾ ಎಂದು ನೊಂದುಕೊಂಡೆವು.



ಅಮೃತ ಶಿಲೆಯಲ್ಲಿ ಯುವರಾಜರ ಕೃತಿ



ಲಕ್ನೋವಿನ ವಸ್ತುಪ್ರದರ್ಶನದಲ್ಲಿ ಗಾಂಧೀಜಿ ಅವರಿಗೆ ಶ್ರೀ ವೆಂಕಟಪ್ಪನವರು ತಮ್ಮ ಕೃತಿಗಳನ್ನು ತೋರಿಸುತ್ತಿರುವುದು.



ರಾಧಾಕೃಷ್ಣ (ನಂತರ ಕೃತಿಗಳು)



ಈ ಕೃತಿ ಡಾ. ಮರುಳಯ್ಯನವರ
ಸಂಗ್ರಹದಲ್ಲಿದೆ

ವೆಂಕಪ್ಪನವರ ಕಲಾಕೀರ್ತಿಯನ್ನು ಉಳಿಸಬಲ್ಲ ಇವರ ಪುತ್ರ ಮನೋಹರ, ಜಗದೀಶ. ಸ್ವಯಂ ಪ್ರತಿಭೆಯನ್ನೂ ಗಂಧದ ಕೃತಿರಚನೆಯಲ್ಲಿ ತೋರುತ್ತಾ ಬಂದಿದ್ದಾರೆ. ಇವರ ಪುತ್ರಿ ಎಚ್. ವಿ. ಸರೋಜಮ್ಮ ಗುರುನಾಥ್ ಕಲಾವಿದೆಯಾಗಿ ಕಲಾಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವೆಂಕಪ್ಪನವರ ಕಲೆಗಾರಿಕೆಗೆ ಎಂದೋ ಪ್ರಶಸ್ತಿ ಗೌರವ ಸಲ್ಲಬೇಕಿತ್ತು. ಆದರೆ ಸಲ್ಲಲಿಲ್ಲ ಎಂಬ ವ್ಯಥೆ ಮಾತ್ರ ನಮ್ಮನ್ನು ಕಾಡುತ್ತಿದೆ. ಅವರ ಕೃತಿಗಳು ಎಂದೆಂದೂ ನಮ್ಮ ಮುಂದಿವೆ. ಅವರ ವಿಸ್ಮಯಕಾರಿ ಕಲೆಗಾರಿಕೆಗೆ ನಾವು ಎಂದೆಂದೂ ಮಣಿಯಬೇಕಾಗಿದೆ, ಸ್ಮರಿಸಬೇಕಾಗಿದೆ.

ರಾಧಾಕೃಷ್ಣ

ಹೇ ಕೃಷ್ಣ, ಶ್ರೀ ಕೃಷ್ಣ, ನನ್ನೆದೆಯ ರಂಗದಲಿ
ಯಾವ ಆಟವ ಹೂಡಿ. ರಾಧಾಮನೋಹರ.
ಈ ಬಾಳ ಮರುಳು ಮಾಡುತಲಿಹೆ? ಹೃಷೀಕೇಶ,
ಜೀವೇಶ, ಇದು ಯಾವ ಗಾರುಡಿಯ ಮೋಹರ
ಮನವ ಮುಸುಕಿತು? ಕರುಳ ನುಲಿಸಿ ಭಾವವನೆಲ್ಲ
ಸೆರೆಹಿಡಿದು ನಿಲಿಸಿ ತನ್ನೊಂದಿಂದ್ರಜಾಲದಲಿ
ಇಹುದಾವುದಿಲ್ಲವಾವುದು ಎಂಬರಿವ ಕಲಕಿ,
ತನ್ನಿಚ್ಛೆಯಲಿ ಕುಣಿಸುತಿದೆ ಚಿತ್ರತಾಲದಲಿ?
ಓ ಕೃಷ್ಣ, ಶ್ರೀ ಕೃಷ್ಣ, ರಾಧಾಮನೋಹರ
ಜೀವೇಶ, ಇದು ಯಾವ ಗಾರುಡಿಯ ಮೋಹರ?

ಶ್ರೀನಿವಾಸ ರ
'ಸಂಕ್ರಾಂತಿ' ಕವನ ಸಂಕಲನದಿಂದ

ಆರ್. ವಸಂತ

ಶಿಲ್ಪಗಳಲ್ಲಿ ಹಸ್ತಮುದ್ರೆ

ಮುದ್ರೆ ಎಂದರೇನು? ಶಬ್ದ ತರಂಗಗಳ ಉಪಯೋಗವಿಲ್ಲದೆಯೇ ಒಂದು ಅಭಿಪ್ರಾಯವನ್ನು ಸೂಚಿಸುವ ಭಾವಕ್ಕೆ ಮುದ್ರೆ ಎಂದು ಹೆಸರು. ಮುದ್ರಾಭಿನಯವು ಒಂದು ದೇಶದ ನಾಗರಿಕತೆಯ ವಿಕಾಸದಲ್ಲಿ ಅತಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅಭಿನಯಭಾಷೆಯು ಅನಾದಿ ಕಾಲದಿಂದಲೂ ಮನುಷ್ಯನಿಂದ ಬಳಸಲ್ಪಟ್ಟಿದೆಯೆಂಬುದು ಸುಸ್ಪಷ್ಟ. ಇಂತಹ ಮುದ್ರಾಭಿನಯದ ಬೆಳವಣಿಗೆಯ ಕೊನೆಯ ಹಂತವೇ ಭಾರತದ ನಾಟ್ಯಶಾಸ್ತ್ರದ ಹುಟ್ಟುವಿಕೆ. ನಾಟ್ಯಶಾಸ್ತ್ರದಲ್ಲಿ ಈ ಮುದ್ರೆಗಳು ಮತ್ತು ಅಭಿನಯಗಳು ಬಹಳ ಖಚಿತವಾದ ಹಾಗೂ ಸ್ಪಷ್ಟವಾದ ರೂಪವನ್ನು ಹೊಂದಿವೆ.

नृत्तं चित्रपरं मतम्[1] ಚಿತ್ರ (ಅಥವಾ ಶಿಲ್ಪ) ನಾಟ್ಯದ ಇನ್ನೊಂದು ಸ್ವರೂಪ. ಶಿಲ್ಪ ಮತ್ತು ನಾಟ್ಯ, ಕಲೆಯ ಎರಡು ಮುಖಗಳು ಮಾತ್ರ. ಶಿಲ್ಪ ಮತ್ತು ನಾಟ್ಯಶಾಸ್ತ್ರಗಳಾದರೋ ಎರಡು ಬೇರೆ ಬೇರೆ ಶಾಸ್ತ್ರಗಳೆಂದು ವಿಂಗಡಿಸಲಾಗದಷ್ಟು ಅನ್ಯೋನ್ಯಾಶ್ರಯಗಳಾಗಿವೆ. ವಿಲಾಸದಿಂದ ಕೂಡಿರುವ ಕೆಲವು ಶಿಲ್ಪಗಳ ಭಾವಭಂಗಿಗಳನ್ನು ನೋಡಿದರೆ ಇವು ನಾಟ್ಯಶಾಸ್ತ್ರದ ಹಿನ್ನೆಲೆಯಿಂದಲೇ ಮೂಡಿಬಂದಿವೆಯೋ ಎಂದು ಭಾಸವಾಗುತ್ತದೆ. ನಿಜ. ಶಿಲ್ಪ ಕಲೆಯಲ್ಲಿನ ಅನೇಕ ಮುದ್ರೆಗಳು ಮತ್ತು ಅಭಿನಯಗಳು ನಾಟ್ಯಕಲೆಯ ಅನುಕರಣೆ ಮಾತ್ರ. ಭೋಜನ ಸಮರಾಂಗಣ ಸೂತ್ರಧಾರ[2]ವು ಕೂಡ, ಶಿಲ್ಪದ ಮುದ್ರಾಭಿನಯಕ್ಕೂ, ನಾಟ್ಯದ ಮುದ್ರಾಭಿನಯಕ್ಕೂ ಇರುವ ಅನ್ಯೋನ್ಯತೆಯನ್ನು ಹೇಳುತ್ತದೆ. ಆದರೆ, ಭಾರತೀಯ ಶಿಲ್ಪಶಾಸ್ತ್ರಕ್ಕೇ ಆಗಲಿ ಅಥವಾ ನಾಟ್ಯಶಾಸ್ತ್ರಕ್ಕೇ ಆಗಲಿ ಧಾರ್ಮಿಕ ಹಿನ್ನೆಲೆಯಿದೆಯೆಂಬುದನ್ನು ನೆನಪಿನಲ್ಲಿಡಬೇಕು. ಭರತನೇ ನಾಟ್ಯಶಾಸ್ತ್ರದಲ್ಲಿ ಹೇಳಿರುವಂತೆ–

नाटयशास्त्रं प्रवक्ष्यामि ब्रह्मणा यदुदाहृतम् ।
नाटयं संदर्शयामोत्र त्रिनेत्राय महात्मने ॥
ततस्तण्डुं समाहूय प्रोक्तवान् सुरसत्तमः ।
प्रयोगमङ्गदाराणामाचक्ष्व भरताय वे ॥

ಮುದ್ರೆಗಳು

ಡಾ. ಶುಕ್ಲ ಅವರು ಹೇಳಿರುವಂತೆ ಮುದ್ರೆಗಳನ್ನು ಹಸ್ತಮುದ್ರೆಗಳು, ಪಾದಮುದ್ರೆಗಳು ಮತ್ತು ಆಸನಮುದ್ರೆಗಳು ಎಂದು ಮೂರು ಭಾಗವಾಗಿ ವಿಂಗಡಿಸಬಹುದು. ಇನ್ನೂ ಅನೇಕ ವಿದ್ವಾಂಸರುಗಳು ಮುದ್ರೆಗಳ ಬಗ್ಗೆ ಕೆಳಗೆ ಕಂಡಂತೆ ಅಭಿಪ್ರಾಯಿಸುತ್ತಾರೆ:

---

1 ವಿಷ್ಣುಧರ್ಮೋತ್ತರ ಪುರಾಣ

2 हस्तेन सयमन्नर्थं दृष्ट्या च प्रतिपादयन् ।
सजीव इति दृश्येत सर्वाभिनयदर्शनात् ॥
आङ्गिके चैव चित्रे

೧. ಆರ್. ಕೆ. ಪಟೋಲ್ ಅವರು ವೈದಿಕ, ಲೌಕಿಕ ಮತ್ತು ತಾಂತ್ರಿಕ ಎಂಬ ಮೂರು ರೀತಿಯಾದ ಮುದ್ರೆಗಳನ್ನು ಒಟ್ಟುಗೂಡಿಸಿ 'ಮುದ್ರಾ' ಎಂದು ಕರೆಯುತ್ತಾರೆ.
೨. ಡಾ. ಕುಮಾರಸ್ವಾಮಿಯವರು ಅರವತ್ತುನಾಲ್ಕು ಕಲೆಗಳಲ್ಲಿ ಇದೊಂದು ಕಲೆಯೆಂದು ತಿಳಿಸುತ್ತಾರೆ.
೩. ಕೆಲವು ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಶಿಲ್ಪಗಳ ಮುದ್ರಾಭಿನಯವನ್ನು 'ಅಸಹಜ' ಎಂದು ಕರೆದಿದ್ದಾರೆ.

ಈ ಲೇಖನವು ಹಸ್ತಮುದ್ರೆಗೆ ಮೀಸಲಾಗಿರುವುದರಿಂದ ಅದರ ಬಗ್ಗೆ ಹೆಚ್ಚಾಗಿ ವಿಮರ್ಶಿಸೋಣ.

ಹಸ್ತಮುದ್ರೆ

ಶಿಲ್ಪಶಾಸ್ತ್ರಕೃತಿಗಳಾದ ಸಮರಾಂಗಣಸೂತ್ರಧಾರ ಮತ್ತು ವಿಷ್ಣುಧರ್ಮೋತ್ತರ ಪುರಾಣವು (ಚಿತ್ರಸೂತ್ರದ ಭಾಗ) ಅನೇಕ ಹಸ್ತಮುದ್ರೆಗಳನ್ನು ಹೆಸರಿಸುತ್ತವೆ. ಹಸ್ತಮುದ್ರೆಯಲ್ಲಿ ಮೂರು ವಿಧವುಂಟು.

ಸಮರಾಂಗಣ ಸೂತ್ರಧಾರ:	ವಿಷ್ಣುಧರ್ಮೋತ್ತರ:
೧ ಅಸಂಯುತ ಹಸ್ತಗಳು–೨೪	ಅಸಂಯುತ ಹಸ್ತಗಳು–೨೧
೨ ಸಂಯುತ ಹಸ್ತಗಳು–೧೩	ಸಂಯುತ ಹಸ್ತಗಳು–೧೩
೩ ನೃತ್ತ ಹಸ್ತಗಳು–೨೭	ನೃತ್ತಹಸ್ತಗಳು–೨೮

ಶಿಲ್ಪಶಾಸ್ತ್ರ ಕೃತಿಗಳ ಕಾಲಭೇದದಿಂದ ಅವು ಹೆಸರಿಸಿರುವ ಹಸ್ತಮುದ್ರೆಗಳಲ್ಲಿಯೂ ವ್ಯತ್ಯಾಸವಿದೆ ಎಂಬುದು ಗಮನಾರ್ಹ.

ಅಸಂಯುತ ಹಸ್ತಗಳು

ಸಮರಾಂಗಣ ಸೂತ್ರದಾರ	ವಿಷ್ಣುಧರ್ಮೋತ್ತರ
೧ ಪತಾಕಮುದ್ರಾ	೧ ಪತಾಕ ಮುದ್ರಾ
೨ ತ್ರಿಪತಾಕ ಮುದ್ರಾ	೨ ತ್ರಿಪತಾಕ ಮುದ್ರಾ
೩ ಕರ್ತರೀಮುಖ ಮುದ್ರಾ	೩ ಕರ್ತರೀಮುಖ ಮುದ್ರಾ
೪ ಅರ್ಧಚಂದ್ರ ಮುದ್ರಾ	೪ ಅರ್ಧಚಂದ್ರ ಮುದ್ರಾ
೫ ಅರಾಲ ಮುದ್ರಾ	೫ ಅರಾಲ ಮುದ್ರಾ
೬ ಶುಕತುಂಡ ಮುದ್ರಾ	೬ ಶುಕತುಂಡ ಮುದ್ರಾ
೭ ಮುಷ್ಟಿ ಮುದ್ರಾ	೭ ಮುಷ್ಟಿ ಮುದ್ರಾ
೮ ಶಿಖರ ಮುದ್ರಾ	೮ ಶಿಖರ ಮುದ್ರಾ
೯ ಕಪಿತ್ಥ ಮುದ್ರಾ	೯ ಕಪಿತ್ಥ ಮುದ್ರಾ
೧೦ ಕಟಕಾಮುಖ ಮುದ್ರಾ	೧೦ ಕಟಕಾಮುಖ ಮುದ್ರಾ
೧೧ ಸೂಚೀಮುಖ ಮುದ್ರಾ	೧೧ ಸೂಚ್ಯರ್ಧ ಮುದ್ರಾ
೧೨ ಪದ್ಮಕೋಶ ಮುದ್ರಾ	೧೨ ಪದ್ಮಕೋಶ ಮುದ್ರಾ
೧೩ ಸರ್ಪಶಿರ ಮುದ್ರಾ	೧೩ ಮೃಗಶೀರ್ಷ ಮುದ್ರಾ
೧೪ ಮೃಗಶೀರ್ಷಕ ಮುದ್ರಾ	೧೪ ಮೃಗಲಾಂಗೂಲ ಮುದ್ರಾ
೧೫ ಲಾಂಗೂಲ ಮುದ್ರಾ	೧೫ ಅಲಪದ್ಮ ಮುದ್ರಾ

೧೬ ಅಲಪದ್ಮ ಮುದ್ರಾ
೧೭ ಚತುರ ಮುದ್ರಾ
೧೮ ಭ್ರಮರ ಮುದ್ರಾ
೧೯ ಹಂಸವಕ್ತ್ರ ಮುದ್ರಾ
೨೦ ಹಂಸಪಕ್ಷ ಮುದ್ರಾ
೨೧ ಸಂದಂಶ ಮುದ್ರಾ
೨೨ ಮುಕುಲ ಮುದ್ರಾ
೨೩ ಊರ್ಣನಾಭ ಮುದ್ರಾ
೨೪ ತಾಮ್ರಚೂಡ ಮುದ್ರಾ

೧೬ ಚತುರ ಮುದ್ರಾ
೧೭ ಭ್ರಮರ ಮುದ್ರಾ
೧೮ ಹಂಸಾಸ್ಯ ಮುದ್ರಾ
೧೯ ಹಂಸಪಕ್ಷ ಮುದ್ರಾ
೨೦ ಸಂದಂಶ ಮುದ್ರಾ
೨೧ ಮುಕುಲ ಮುದ್ರಾ

ಸಂಯುತ ಹಸ್ತಗಳು

೧ ಕರ್ಕಟ ಮುದ್ರಾ
೨ ಸ್ವಸ್ತಿಕ ಮುದ್ರಾ
೩ ಕಟಕ ಮುದ್ರಾ
೪ ಉತ್ಸಂಗಮುದ್ರಾ
೫ ಅಂಜಲಿ ಮುದ್ರಾ
೬ ಕಪೋತ ಮುದ್ರಾ
೭ ಡೋಲ ಮುದ್ರಾ
೮ ಪುಷ್ಪಪುಟ ಮುದ್ರಾ
೯ ಮಕರ ಮುದ್ರಾ
೧೦ ಗಜದಂತ ಮುದ್ರಾ
೧೧ ಅವಹಿತ್ಥ ಮುದ್ರಾ
೧೨ ವರ್ಧಮಾನ ಮುದ್ರಾ
೧೩ ಶಕಟ ಮುದ್ರಾ

೧ ಅಂಜಲಿ ಮುದ್ರಾ
೨ ಕಪೋತ ಮುದ್ರಾ
೩ ಕರ್ಕಟ ಮುದ್ರಾ
೪ ಸ್ವಸ್ತಿಕ ಮುದ್ರಾ
೫ ಖಟಕ ಮುದ್ರಾ
೬ ವರ್ಧಮಾನ ಮುದ್ರಾ
೭ ಉತ್ಸಂಗ ಮುದ್ರಾ
೮ ನಿಷಿಧ ಮುದ್ರಾ
೯ ದೋಲ ಮುದ್ರಾ
೧೦ ಪುಷ್ಪಪುಟ ಮುದ್ರಾ
೧೧ ಮಕರ ಮುದ್ರಾ
೧೨ ಗಜದಂತ ಮುದ್ರಾ
೧೩ ಅವಹಿತ್ಥ ಮುದ್ರಾ

ನೃತ್ತ ಹಸ್ತಗಳು

೧ ಚತುರಸ್ರ ಮುದ್ರಾ
೨ ವಿಪ್ರಕೀರ್ಣ ಮುದ್ರಾ
೩ ಪದ್ಮಕೋಶ ಮುದ್ರಾ
೪ ಅರಾಳಕಟಕಾಮುಖ ಮುದ್ರಾ
೫ ಆವಿಧ ವಕ್ರಕ ಮುದ್ರಾ
೬ ಸೂಚೀಮುಖ ಮುದ್ರಾ
೭ ರೇಚಿತ ಮುದ್ರಾ
೮ ಉತ್ತಾನ ವಂಚಿತ ಮುದ್ರಾ
೯ ಅರ್ಧರೇಚಿತ ಮುದ್ರಾ
೧೦ ಪಲ್ಲವ ಮುದ್ರಾ
೧೧ ಕೇಶಬಂಧ ಮುದ್ರಾ
೧೨ ಲತಾ ಮುದ್ರಾ
೧೩ ಗಜ ಮುದ್ರಾ

೧ ಚತುರಸ್ರ ಮುದ್ರಾ
೨ ಆವೃತ್ತ ಮುದ್ರಾ
೩ ಲಘುಮುಖ ಮುದ್ರಾ
೪ ಅರಾಳಕಟಕಾಮುಖ ಮುದ್ರಾ
೫ ಆವಿದ್ಧ ಮುದ್ರಾ
೬ ಸೂಚೀಮುಖ ಮುದ್ರಾ
೭ ರೇಚಿತ ಮುದ್ರಾ
೮ ಅರ್ಧರೇಚಿತ ಮುದ್ರಾ
೮ ಅವಹಿತ್ಥ ಮುದ್ರಾ
೧೦ ಪಲ್ಲವಿತ ಮುದ್ರಾ
೧೧ ನಿತಂಬ ಮುದ್ರಾ
೧೨ ಕೇಶವರ್ಧನ ಮುದ್ರಾ
೧೩ ಲತಾಖ್ಯ ಮುದ್ರಾ

೧೪ ಪಕ್ಷವಾಂಚಿತಕ ಮುದ್ರಾ
೧೫ ಪಕ್ಷಪ್ರದ್ಯೋತಕ ಮುದ್ರಾ
೧೬ ಗರುಡಪಕ್ಷ ಮುದ್ರಾ
೧೭ ದಂಡಪಕ್ಷ ಮುದ್ರಾ
೧೮ ಊರ್ಧ್ವಮಂಡಲ ಮುದ್ರಾ
೧೯ ಪಾರ್ಶ್ವಮಂಡಲ ಮುದ್ರಾ
೨೦ ಉರೋಮಂಡಲ ಮುದ್ರಾ
೨೧ ಉರಃಪಾರ್ಶ್ವಾರ್ಧಮಂಡಲ ಮುದ್ರಾ

೧೪ ಗಜ ಮುದ್ರಾ
೧೫ ಪಕ್ಷದ್ಯೋತ ಮುದ್ರಾ
೧೬ ಅರ್ಧಾರ್ಧಿತ ಮುದ್ರಾ
೧೭ ಗರುಡಪಕ್ಷ ಮುದ್ರಾ
೧೮ ದಂಡಪಕ್ಷ ಮುದ್ರಾ
೧೯ ಊರ್ಧ್ವಮಂಡಲ ಮುದ್ರಾ
೨೦ ಪಾರ್ಶ್ವಮಂಡಲ ಮುದ್ರಾ
೨೧ ಪಾರ್ಶ್ವಾರ್ಧಮಂಡಲ ಮುದ್ರಾ
೨೨ ಉರೋಮಂಡಲ ಮುದ್ರಾ
೨೩ ಇಷ್ಟಸ್ವಸ್ತಿಕ ಮುದ್ರಾ
೨೪ ಪದ್ಮಕೋಶಿಕ ಮುದ್ರಾ
೨೫ ಅಲಿಪಲ್ಲವ ಮುದ್ರಾ
೨೬ ಉಲ್ಬನ ಮುದ್ರಾ
೨೭ ಲಲಿತ ಮುದ್ರಾ
೨೮ ವಲಿತ ಮುದ್ರಾ

ಈ ಶಿಲ್ಪ ಶಾಸ್ತ್ರಗಳ ಅಧ್ಯಾಯ ಅಧ್ಯಾಯಗಳನ್ನೇ ಹಸ್ತಮುದ್ರೆಗಾಗಿ ಮೀಸಲಾಗಿಸಿದ್ದರೂ ಇಷ್ಟು ಹೆಸರಿಸುವ ಎಲ್ಲಾ ಹಸ್ತಮುದ್ರೆಗಳನ್ನೂ ಶಿಲ್ಪಗಳಲ್ಲಿ ಕಾಣಲಾಗುವುದಿಲ್ಲ. ಆದರೆ, ಇವೆಲ್ಲವು ಬಹಳವಾಗಿ ನಾಟ್ಯದಲ್ಲಿ ಬಳಸಲ್ಪಟ್ಟಿವೆ. "ಹಸ್ತ ಮುದ್ರೆಗಳೆಲ್ಲವೂ ಶಿಲ್ಪದಲ್ಲಿ ಉಪಯೋಗಿಸಲ್ಪಟ್ಟಿಲ್ಲ"- ಎಂಬ ಡಾ. ಬ್ಯಾನರ್ಜಿಯವರ[3] ಅಭಿಪ್ರಾಯವು ಬಹಳ ಸಮಂಜಸವೆನಿಸುತ್ತದೆ. ಆದ್ದರಿಂದ, ಶಿಲ್ಪಗಳಲ್ಲಿ ಕಾಣಬರುವ ಹಸ್ತ ಮುದ್ರೆಗಳು.-ಶಿಲ್ಪಶಾಸ್ತ್ರಗಳು ಉದಹರಿಸುವ ಕೆಲವು ನಾಟ್ಯಮುದ್ರೆಗಳು ಮತ್ತು ಕಲೋಪಾಸಕನಿಂದಲೇ ಸೃಷ್ಟಿಸಲ್ಪಟ್ಟ ಇನ್ನಿತರ ಮುದ್ರೆಗಳು ಮಾತ್ರ. ಇದರಿಂದ ಶಿಲ್ಪಗಳಲ್ಲಿನ ಹಸ್ತ ಮುದ್ರೆಗಳಲ್ಲಿ ಎರಡು ವಿಧವುಂಟೆಂದಾಯಿತು.

ನಾಟ್ಯ ಮುದ್ರೆ

೧ ಅಂಜಲಿ ಮುದ್ರಾ
೨ ಗಜ ಮುದ್ರಾ
೩ ಡೋಲ ಮುದ್ರಾ
೪ ಕಟಕ ಮುದ್ರಾ
೫ ತರ್ಜನೀ ಮುದ್ರಾ
೬ ಕರ್ತರೀಮುಖ ಮುದ್ರಾ
೭ ಅರ್ಧಚಂದ್ರ ಮುದ್ರಾ
೮ ಅರ್ಧಪತಾಕಮ್ ಮುದ್ರಾ
೯ ಮುಷ್ಟಿ ಮುದ್ರಾ

ಶಿಲ್ಪಕಾರನಿಂದಲೇ ಸೃಷ್ಟಿಸಲ್ಪಟ್ಟ ಮುದ್ರೆ

೧೦ ಅಭಯ ಮುದ್ರಾ
೧೧ ವರದ ಮುದ್ರಾ
೧೨ ಸಿಂಹಕರ್ಣ ಮುದ್ರಾ
೧೩ ವ್ಯಾಖ್ಯಾನ ಮುದ್ರಾ
೧೪ ಡಮರುಕ ಮುದ್ರಾ
೧೫ ಆಲಿಂಗನ ಮುದ್ರಾ
೧೬ ಊರು ಮುದ್ರಾ
೧೭ ವಿಸ್ಮಯ ಮುದ್ರಾ
೧೮ ಜ್ಞಾನ ಮುದ್ರಾ
೧೯ ಧ್ಯಾನ ಮುದ್ರಾ
೨೦ ನಿದ್ರಾ ಮುದ್ರಾ
೨೧ ಧನುರ್ ಮುದ್ರಾ
೨೨ ನಾಟ್ಯ ಮುದ್ರಾ

[3] J. N. Banerjea, *Development of Hindu Iconography*

೨೩ ದಂಡ ಮುದ್ರಾ
೨೪ ಕಟಿಹಸ್ತ ಮುದ್ರಾ
೨೫ ಧರ್ಮಚಕ್ರ ಪ್ರವರ್ತನ ಮುದ್ರಾ
೨೬ ಭೂಸ್ಪರ್ಶ ಮುದ್ರಾ
೨೭ ಕಾಯೋತ್ಸರ್ಗ ಮುದ್ರಾ

ಶಿಲ್ಪಗಳಲ್ಲಿ ಒಟ್ಟು ೨೭ ಹಸ್ತಮುದ್ರೆಗಳನ್ನು ಕಾಣಬಹುದು. ಆದರೆ ಸಿ. ಶಿವರಾಮಮೂರ್ತಿ, ಡಾ. ಬ್ಯಾನರ್ಜಿ, ಟಿ. ಎ. ಗೋಪಿನಾಥರಾವ್ ಮತ್ತು ಇನ್ನಿತರ ವಿದ್ವಾಂಸರುಗಳು ೧೫ ಮುದ್ರೆಗಳನ್ನು ಮಾತ್ರ ವಿವರಿಸುತ್ತಾರೆ.

೧ ಅಭಯಮುದ್ರೆ : द्रष्टुरभिमुख ऊर्ध्वांगुलिः शांतिदः करः—
ಹಸ್ತವು ಪರಿಶೀಲಕನ ಕಡೆಗೆ ತಿರುಗಿರುತ್ತದೆ ಮತ್ತು ಮೇಲ್ಮುಖವಾಗಿರುತ್ತದೆ ಎಂದು ವರಹಾಮಿಹಿರನು ಈ ಮುದ್ರೆಯ ವಿನ್ಯಾಸವನ್ನು ಬೃಹತ್ ಸಂಹಿತೆಯಲ್ಲಿ[4] ವಿವರಿಸಿದ್ದಾನೆ. ಇದನ್ನು ಪತಾಕ ಮುದ್ರಾ[5] ಎಂದೂ ಕರೆಯಬಹುದು. ಕುಶಾನರ ಕಾಲದ ಶಿಲ್ಪದಲ್ಲಿಯೇ ಈ ಮುದ್ರೆಯು ಕಾಣಬರುತ್ತದೆ. ಕುಶಾನರ ಕಾಲದ ಮಥುರಾ ಬುದ್ಧನ ಪ್ರತಿಮೆಯಲ್ಲಿ, ನಂತರ ಧರಘೋಷನ ಶಿವ–ವಿಶ್ವಾಮಿತ್ರರಿರುವ ನಾಣ್ಯದಲ್ಲಿ ಈ ಮುದ್ರೆಯು ಚಿತ್ರಿತವಾಗಿದೆ. ಬಾರ್‌ಹೂತ್‌ನ ಮಹಾಕಪಿ ಜಾತಕವು ಚಿತ್ರಿತವಾಗಿರುವಲ್ಲಿ ಬ್ರಹ್ಮದತ್ತ ರಾಜನ ಹಸ್ತವು ಈ ಮುದ್ರೆಯಲ್ಲಿದೆ. ಸಾಮಾನ್ಯವಾಗಿ ಎಲ್ಲಾ ಹಿಂದೂ, ಜೈನ ಮತ್ತು ಬೌದ್ಧ ಪ್ರತಿಮೆಗಳಲ್ಲಿ ಅಭಯಮುದ್ರೆಯನ್ನು ಕಾಣಬಹುದು. ಇದು ಕಾಪಾಡುವ,[6] ರಕ್ಷಿಸುವ ಅಥವಾ ಸಲಹುವ ಚಿಹ್ನಾತ್ಮಕವಾಗಿದೆ. (ಚಿತ್ರ ೧)

೨ ವರದ ಮುದ್ರೆ:

ಇದು ಇನ್ನೊಂದು ಪರಿಚಿತವಾದ ಮುದ್ರೆ. ಇದು ವರ ನೀಡುವ ಸೂಚಾತ್ಮಕವಾಗಿದೆ. ಇದರಲ್ಲಿ ಹಸ್ತವು ಕೆಳಮುಖವಾಗಿರುತ್ತದೆ – उत्तानोथोनङ्गुलिर्हस्तो वरदः[7] ಈ ಮುದ್ರೆಯನ್ನು ಮೊದಲನೆಯದಾಗಿ ಮೊಹೆಂಜೊದಾರೊ[8] ಮೊಹರುಗಳಲ್ಲಿನ ಯೋಗಭಂಗಿಯಲ್ಲಿ ಕುಳಿತಿರುವ ಮೂರ್ತಿಗಳಲ್ಲಿ ಮತ್ತು ಹರಪ್ಪದ ಮಣ್ಣಿನ ಪ್ರತಿಮೆಗಳಲ್ಲಿ ಕಾಣಬಹುದು. ಈ ಮುದ್ರೆಯನ್ನು ಶಿಲ್ಪರತ್ನದಲ್ಲಿ[9] ವರದಾನ ಮುದ್ರೆಯೆಂದು ಕರೆಯಲಾಗಿದೆ. (ಚಿತ್ರ ೨)

೩ ಆಹೂಯವರದ ಮುದ್ರೆ:

ಇದು ಅಭಯಮುದ್ರೆಯ ಇನ್ನೊಂದು ಬಗೆ ಅಷ್ಟೆ; (ಚಿತ್ರ ೩) ಈ ಮುದ್ರೆಯಲ್ಲಿ ಬೆರಳುಗಳು ಸ್ವಲ್ಪ ಮಟ್ಟಿಗೆ ಬಗ್ಗಿರುತ್ತವೆ. ಶಿವರಾಮಮೂರ್ತಿಯವರು[10] ಈ ಮುದ್ರೆಯನ್ನು "ಭಗವಂತನು ಭಕ್ತನನ್ನು

---

[4] ಬೃ. ಸಂ. ಅಧ್ಯಾಯ 57, 33–35.

[5] प्रसरितामा सहिता यस्याङगुल्यो भवन्ति हि ।
कुञ्चितश्च तथाङगुष्टः सपताक इति स्मृतः । ವಿಷ್ಣುಧರ್ಮೋತ್ತರ ಅಧ್ಯಾಯ 26, 14–16

[6] प्रवृत्तिश्च निवृत्तिश्च कार्याकार्यो भयाभये ।
बन्धं मोक्षञ्च या वेत्ति बुद्धिः सा पार्थ सात्विकी ॥ ಭಗವದ್ಗೀತೆ xviii 30

[7] ಬೃ. ಸಂ. ಅಧ್ಯಾಯ 57, p. 780

[8] M. S. Vats: *Excavations at Harappa*, p 294, pl. lxxvi

[9] ಶಿಲ್ಪರತ್ನ, ಅಧ್ಯಾಯ 16, 29.

[10] C. Sivaramamurthy: *South Indian Bronzes*

ವರ ನೀಡುವೆನು ಬಾ" ಎಂದು ಕರೆಯುತ್ತಿರುವ ಸೂಚಾತ್ಮಕವಾಗಿದೆ ಎನ್ನುತಾರೆ. ಚೋಳರ ಕಾಲದ ಸುಖಾಸೀನವಾಗಿರುವ ಕೆಲವು ಶೈವ ಮತ್ತು ದೇವೀ ವಿಗ್ರಹಗಳಲ್ಲಿ ಈ ಮುದ್ರೆಯು ಕಂಡುಬರುತ್ತದೆ. ಈ ಮುದ್ರೆಯ ಉಪಯೋಗ ಬಹಳ ಅತ್ಯಲ್ಪ.

೪ ಅಂಜಲಿ ಮುದ್ರೆ:

ಸಂಯುತ ಹಸ್ತಗಳಲ್ಲಿ ಒಂದಾದ ಈ ಮುದ್ರೆಯು ಸಾಮಾನ್ಯವಾಗಿ ಭಕ್ತ ವಿಗ್ರಹಗಳಾದ ಆಳ್ವಾರುಗಳು, ನಾಯನಮಾರ್‌ಗಳು, ನಂದಿಕೇಶ್ವರ, ಗರುಡ, ಚಂಡಿಕೇಶ್ವರ ಇವುಗಳಲ್ಲಿ ಕಾಣಬಹುದು. ಇದರ ಕಾಲವನ್ನು ಹರಪ್ಪ-ಮೊಹೆಂಜೊದಾರೊ ನಾಗರಿಕತೆಗೆ ಕೊಂಡೊಯ್ಯಬಹುದು. ಮೊಹೆಂಜೆದಾರೋವಿನ[11] ಒಂದು ಮೊಹರಿನಲ್ಲಿ ಈ ಮುದ್ರೆಯು ಚಿತ್ರಿತವಾಗಿದೆ. ವಿಷ್ಣುಧರ್ಮೋತ್ತರವು[12] ಹೇಳುವಂತೆ ಎರಡು ಪತಾಕಹಸ್ತವು ಒಟ್ಟಿಗೆ ಸೇರಿದಲ್ಲಿ 'ಅಂಜಲಿ' ಹಸ್ತವೆನಿಸಿಕೊಳ್ಳುತ್ತದೆ ಮತ್ತು ಇದು ಪೂಜಾಕಾಲದಲ್ಲಿ ಉಪಯೋಗಿಸಲ್ಪಡುವಂತಹ ಮುದ್ರೆಯು. (ಚಿತ್ರ ೪)

೫ ಸಿಂಹಕರ್ಣ ಮತ್ತು ೬. ಕಟಕಮುದ್ರೆ :

ಅನೇಕ ವಿದ್ವಾಂಸರು ಈ ಎರಡು ಮುದ್ರೆಗಳನ್ನೂ ಒಂದೇ ಎಂದು ಕರೆಯುತ್ತಾರೆ. ಆದರೆ ಈ ಮುದ್ರೆಗಳಲ್ಲಿರುವ ವ್ಯತ್ಯಾಸವನ್ನು ಚಿತ್ರ ೫, ೬ರಲ್ಲಿ ನೋಡಬಹುದು ಮತ್ತು ಶಿಲ್ಪಶಾಸ್ತ್ರಗಳು ಸಹ ಇವರ ಭೇದವನ್ನು ತಿಳಿಸುತ್ತವೆ. ಕಾಶ್ಯಪ ಶಿಲ್ಪಶಾಸ್ತ್ರದಲ್ಲಿ ಕಟಕ ಮುದ್ರೆಯ ವಿನ್ಯಾಸವು ಈ ರೀತಿಯಿದೆ–

तर्जन्यादि कनिष्ठांतम तत्र मूलस्तु वक्रया।
ईशाद् वक्रं तदंगुष्टम् एवं स्यात् कटकाकृति॥

ಸಿಂಹಕರ್ಣ ಮುದ್ರೆಯ ವಿನ್ಯಾಸವು ಶಿಲ್ಪರತ್ನದಲ್ಲಿ ಹೀಗಿದೆ–

तदेव सिंहकर्णाभ्यं। तलमध्यगतं यदि॥
मध्याङ्गुलग्रं वक्राभं तदपांझशतं तथा।
कनामिकाग्रं शेषाः स्युः पूर्ववापरिकल्पिताः॥

ಇವೆರಡು ಮುದ್ರೆಗಳು ಆಯುಧಗಳು ಅಥವಾ ಹೂವುಗಳನ್ನು ಹಿಡಿಯುವಾಗ ಉಪಯೋಗಿಸಲ್ಪಡುತ್ತವೆ. ಈ ಮುದ್ರೆಗಳನ್ನು ಅಧಿಕವಾಗಿ ದೇವೀ ವಿಗ್ರಹಗಳಲ್ಲಿ ನೋಡಬಹುದು. ಈ ಮುದ್ರೆಯಿರುವ ಪ್ರಾಚೀನಶಿಲ್ಪವು ಬಾರ್‌ಹೂತ್‌ನ ಸಿರಿಮಾದೇವತಾ ಮೂರ್ತಿ.

೭ ಗಜಹಸ್ತ ಅಥವಾ ದಂಡಹಸ್ತ :

ಇದರಲ್ಲಿ ಹಸ್ತವು ಆನೆಯ ಸೊಂಡಿಲಿನಾಕಾರದಲ್ಲಿರುತ್ತದೆ. (ಚಿತ್ರ ೭) ಈ ಮುದ್ರೆಯನ್ನು ಎಲ್ಲಾ ನಟರಾಜಮೂರ್ತಿಗಳಲ್ಲಿ ಕಾಣಬಹುದು. ಯೋಗಾಸನದಲ್ಲಿ ಕುಳಿತಿರುವ (ನರಸಿಂಹ) ಮೂರ್ತಿಗಳಲ್ಲಿ ಕೆಳಗೆ ತೊಡೆಯ ಮೇಲೆ ಇಳಿಬಿಟ್ಟಿರುವ ಎರಡು ಕೈಗಳೂ ಈ ಮುದ್ರೆಯಲ್ಲಿರುತ್ತವೆ. (ಚಿತ್ರ ೭ಎ) ನಾಟ್ಯಶಾಸ್ತ್ರದಲ್ಲಿಯೂ ಇದನ್ನು ಕರಿಹಸ್ತ ಅಥವಾ ಗಜಹಸ್ತ ಎಂದು ಕರೆಯಲಾಗುತ್ತದೆ.

೮ ಡೋಲಕರಮ್:

ಸಾಮಾನ್ಯವಾಗಿ ನಿಂತಿರುವ ಎಲ್ಲಾ ದೇವೀ ವಿಗ್ರಹಗಳ ವಾಮಹಸ್ತವು ಡೋಲಮುದ್ರೆಯಲ್ಲಿರುತ್ತವೆ (ಚಿತ್ರ ೮). ಇದರ ವಿನ್ಯಾಸವು ವಿಷ್ಣುಧರ್ಮೋತ್ತರದಲ್ಲಿ ಹೀಗಿದೆ:

[11] H. Zimmer: *The Art of Indian Asia*, Vol. 2.


[12] पताकाभ्यां तु हस्ताभ्यां सुस्फुटोंजलिरुच्यते।
देवतानां गुरूणां च पितणां चेष्यते पुनः॥ ಅಧ್ಯಾಯ 26



೧. ಅಭಯ ಮುದ್ರೆ




೨. ವರದ ಮುದ್ರೆ



೩. ಆಹೂಯುವರದ ಮುದ್ರೆ



೪. ಅಂಜಲಿ ಮುದ್ರೆ




೫. ಸಿಂಹಕರ್ಣ ಮುದ್ರೆ



೬. ಕಟಕ ಮುದ್ರೆ




೭. ಗಜಹಸ್ತ




೭ಎ. ದಂಡಹಸ್ತ




೮. ದೋಲಕರಹಸ್ತ



೯. ಡಮರುಕಹಸ್ತ



೧೦. ಆಲಿಂಗನಹಸ್ತ



೧೧ ಕಟಿಹಸ್ತ

संक्षिप्ते चैव निक्षिप्ते तथा कायः प्रपीडिते।
पताका लंभितौ हस्तौ दोलेति परिकीर्तिता॥

೯ ಡಮರುಗ ಹಸ್ತ:

ಶಿವನು ಡಮರುಗವನ್ನು ಹಿಡಿಯುವಲ್ಲಿ ಮಾತ್ರ ಈ ಮುದ್ರೆಯು ಕಾಣಬರುತ್ತದೆ. ಆದ್ದರಿಂದಲೇ ಇದಕ್ಕೆ ಡಮರುಗಹಸ್ತವೆಂದು ಹೆಸರು. (ಚಿತ್ರ ೯)

೧೦ ಆಲಿಂಗನ ಹಸ್ತ:

ಈ ಮುದ್ರೆಯನ್ನು ಆಲಿಂಗಿತ ಶಿವ–ಪಾರ್ವತಿ ಮೂರ್ತಿಯಲ್ಲಿ ನೋಡಬಹುದು (ಚಿತ್ರ ೧೦).

೧೧ ಕಟ್ಯವಲಂಬಿತ ಮುದ್ರೆ ಮತ್ತು ೧೨ ಊರು ಹಸ್ತ:

ವಾಮ ಹಸ್ತವು ಕಟಿಪ್ರದೇಶದ ಮೇಲೆ ಇಡಲ್ಪಟ್ಟಿದ್ದರೆ ಕಟ್ಯವಲಂಬಿತ ಮುದ್ರಾ ಎಂದೂ (ಚಿತ್ರ ೧೧) ಮತ್ತು ಕಟಿಪ್ರದೇಶದ ಕೆಳಭಾಗದಲ್ಲಿ ಇಡಲ್ಪಟ್ಟು ಅಥವಾ ಸಿಂಹ ಇನ್ನಿತರ ಪ್ರಾಣಿಗಳ ಮೇಲೆ ಅಥವಾ ಗದೆ ಮುಂತಾದ ಆಯುಧಗಳ ಮೇಲೆ ಇಡಲ್ಪಟ್ಟಿದ್ದರೆ ಊರುಹಸ್ತವೆಂದೂ ಕರೆಯಲಾಗುತ್ತದೆ. (ಚಿತ್ರ ೧೨) ಡಾ. ಬ್ಯಾನರ್ಜಿಯವರು[13] ಕಟ್ಯವಲಂಬಿತ ಮುದ್ರೆಯಿರುವ ಅನೇಕ ನಾಣ್ಯಗಳನ್ನು ಉದಹರಿಸುತ್ತಾರೆ:

೧ ಶಿವನ ಮೂರ್ತಿಯಿರುವ ವೀಮಾ ಕ್ಯಾಡ್‌ಫೈಸಿಸ್‌ನ ನಾಣ್ಯಗಳು
೨ ಶಿವ–ವಿಶ್ವಾಮಿತ್ರರಿರುವ ಧರಘೋಷನ ಬೆಳ್ಳಿ ನಾಣ್ಯಗಳು
೩ ಶಿವ–ಚಕ್ರೇಶ್ವರನಿರುವ ಕುಣಿಂದರ ನಾಣ್ಯಗಳು
೪ ಲಕ್ಷ್ಮಿಯಿರುವ ಇಂಡೋ–ಸಿಥಿಯನ್ನರ ನಾಣ್ಯ

ಮಥುರಾದಲ್ಲಿ ಕಾಣಿಸುವ ಕುಶಾನರ ಕಾಲದ ಅನೇಕ ಸ್ಥಾನಕ ಬುದ್ಧನ ಪ್ರತಿಮೆಗಳಲ್ಲಿ ಈ ಮುದ್ರೆಯಿದೆ. ತಿರುಪತಿಯ ವೆಂಕಟೇಶಮೂರ್ತಿಯ ವಾಮಹಸ್ತವು ಈ ಮುದ್ರೆಯಲ್ಲಿದೆ. ಸ್ಥಾನಕ ವಿಷ್ಣು ಮೂರ್ತಿಯ ವಾಮಹಸ್ತವು ಗದೆಯ ಮೇಲೆ ಇಟ್ಟಿರುವಲ್ಲಿ 'ಊರುಹಸ್ತ'ವನ್ನು ಕಾಣಬಹುದು.

೧೩ ವಿಸ್ಮಯ ಮುದ್ರೆ:

ಈ ಮುದ್ರೆಯು ಆಶ್ಚರ್ಯಸೂಚಕವಾದುದು. ಕೈಲಾಸನಾಥ ದೇವಸ್ಥಾನದಲ್ಲಿರುವ ಚಂಡೇಶಾನುಗ್ರಹ ಮೂರ್ತಿಯ ಹಸ್ತವು ಈ ಮುದ್ರೆಗೊಂದು ಉದಾಹರಣೆ (ಚಿತ್ರ ೧೩). ಈ ಮುದ್ರೆಯ ಉದಾಹರಣೆಗಳು ಬಹಳ ಕಡಿಮೆ. ತಿನ್ನೆವೆಲ್ಲಿ ಜಿಲ್ಲೆಯ ಶರ್ಮಾದೇವಿ ದೇವಸ್ಥಾನದಲ್ಲಿರುವ ಹನುಮಂತನ ಕಂಚಿನ ಪ್ರತಿಮೆಯ ಹಸ್ತವು ಈ ಮುದ್ರೆಯನ್ನು ಉದಹರಿಸುತ್ತದೆ.

೧೪ ಅರ್ಧಚಂದ್ರ ಮುದ್ರೆ:

ಅಗ್ನಿಯನ್ನು ಹಿಡಿದಿರುವ ನಟರಾಜ ಮೂರ್ತಿಗಳಲ್ಲಿ ವಾಮಹಸ್ತವು ಈ ಮುದ್ರೆಯಲ್ಲಿರುತ್ತದೆ.
जस्याङ्गुल्यस्तु विनत सहंगुष्टेन चापबत सोऽर्धचंद्र इति ख्यात—
ಬಿಲ್ಲಿನಾಕಾರದಲ್ಲಿ ತೆರೆಯಲ್ಪಟ್ಟಿರುವ ಹಸ್ತಕ್ಕೆ ಅರ್ಧಚಂದ್ರ ಮುದ್ರೆಯೆಂದು ಹೆಸರು (ಚಿತ್ರ ೧೪).

೧೫ ಧನುರ್‌ಹಸ್ತ:

ಧನುಸ್ಸನ್ನು ಹಿಡಿದಿರುವ ಶ್ರೀರಾಮನ ಮತ್ತು ಇತರ ಮೂರ್ತಿಗಳಲ್ಲಿ ಈ ಮುದ್ರೆಯನ್ನು ಕಾಣಬಹುದು. (ಚಿತ್ರ ೧೫)

[13] J. N. Banerjea, *Devclopment of Hindu Iconography*, p 257

೧೬. ಮುಷ್ಟಿಕರಮ್:

ಬಲಪ್ರಯೋಗ[14] ಮಾಡುವಾಗ ಉಪಯೋಗಿಸಲ್ಪಡುವ ಮುದ್ರೆಯಿದು. ಆದರೆ ಶಿಲ್ಪಗಳಲ್ಲಿ ಈ ಮುದ್ರೆಯು ಆಯುಧವನ್ನು ಹಿಡಿಯುವಾಗ ಉಪಯೋಗಿಸಲ್ಪಡುತ್ತದೆ. ಮೌರ್ಯರ ಕಾಲದ[15] ಚಾಮರಗ್ರಾಹಿಣಿಗಳು ಚಾಮರ ಹಿಡಿದಿರುವ ಮುದ್ರೆಯು ಇದಕ್ಕೊಂದು ಉದಾಹರಣೆ. ಕುಶಾನರ ಕಾಲದ ಕತ್ತಿಯನ್ನು ಹಿಡಿದಿರುವ ಕಾನಿಷ್ಕನ[16] ಪ್ರತಿಮೆಯ ಹಸ್ತವು ಈ ಮುದ್ರೆಯಲ್ಲಿದೆ. (ಚಿತ್ರ ೧೬)

೧೭ ನಾಟ್ಯಕರಮ್:

ಬಾರ್‌ಹೂತ್‌ನಲ್ಲಿರುವ ಅಪ್ಸರಾ ಶಿಲ್ಪಗಳು, ನೃತ್ಯಗಣಪತಿ, ಕಾಲೀಯದಮನ ಕೃಷ್ಣ, (ವಾಮಹಸ್ತ) ನರ್ತನ ಚಾಮುಂಡಾ ಮೂರ್ತಿಗಳಲ್ಲಿ ಈ ಮುದ್ರೆಯು ಕಂಡುಬರುತ್ತದೆ. (ಚಿತ್ರ ೧೭)

೧೮ ನಿದ್ರಾಹಸ್ತ:

ಇದರಲ್ಲಿ ದೇಹದ ಪೂರ್ತಿ ಭಾರವು ಒಂದು ಹಸ್ತದ ಮೇಲಿರುತ್ತದೆ ಮತ್ತು ಆ ಹಸ್ತವು ನೆಲದ ಮೇಲೆ ಅಥವಾ ಪೀಠದ ಮೇಲೆ ಊರಲ್ಪಟ್ಟಿರುತ್ತದೆ. ಇಂತಹ ಮುದ್ರೆಗೆ ನಿದ್ರಾಹಸ್ತವೆಂದು ಹೆಸರು. (ಚಿತ್ರ ೧೮) ಈ ಮುದ್ರೆಯಿರುವ ಮೂರ್ತಿಯ ಭಂಗಿಯು ಸುಖಾಸನದಲ್ಲಿರುತ್ತದೆ. ಚೋಳರ ಕಾಲದ ಸುಖಾಸನದಲ್ಲಿರುವ ಒಂದು ಕಂಚಿನ ಪಾರ್ವತಿ ವಿಗ್ರಹವು[17] ಇದಕ್ಕೊಂದು ಉದಾಹರಣೆ.

೧೯ ತರ್ಜನೀ ಮುದ್ರೆ:

ಈ ಮುದ್ರೆಯ ಉಪಯೋಗ ಬಹಳ ಕಡಿಮೆ. ಈ ಮುದ್ರೆಯನ್ನು ನಾಟ್ಯಶಾಸ್ತ್ರದಲ್ಲಿ 'ಸೂಚಿಮುಖ ಹಸ್ತ' ಎಂದು ಕರೆಯುತ್ತಾರೆ. ಈ ಮುದ್ರೆಯು (ಚಿತ್ರ ೧೯) ಯಾವುದನ್ನೋ ಸೂಚಿಸುವ ಚಿಹ್ನಾತ್ಮಕವಾಗಿರುತ್ತದೆ. ಬಾರ್‌ಹೂತ್‌ನಲ್ಲಿ [18] ಈ ಮುದ್ರೆಯಿರುವ ಶಿಲ್ಪಗಳನ್ನು ಕಾಣಬಹುದು.

೨೦ ಕರ್ತರೀಮುಖ ಮತ್ತು ೨೧ ಅರ್ಧಪತಾಕ ಮುದ್ರೆ:

ಇವೆರಡು ಮುದ್ರೆಗಳೂ ಸ್ವಲ್ಪ ವ್ಯತ್ಯಾಸವು ಕಂಡುಬಂದರೂ. (ಚಿತ್ರ ೨೦, ೨೧) ಎರಡನ್ನೂ ಕರ್ತರೀಮುಖ ಮುದ್ರಾ ಎಂದೇ ಸಂಬೋಧಿಸಲಾಗುತ್ತದೆ. ದೇವತಾಶಿಲ್ಪಗಳಲ್ಲಿ ಶಂಖ, ಚಕ್ರ, ಇನ್ನಿತರ ಆಯುಧಗಳನ್ನು ಹಿಡಿಯುವಾಗ ಈ ಮುದ್ರೆಗಳು ಬಳಸಲ್ಪಟ್ಟಿವೆ.

೨೨ ಧ್ಯಾನ ಮುದ್ರೆ:

ಪದ್ಮಾಸನದಲ್ಲಿ ಕುಳಿತು, ದೃಷ್ಟಿಯನ್ನು ನಾಸಾಗ್ರದ ಮೇಲೆ ಕೇಂದ್ರೀಕರಿಸಿ ದಕ್ಷಿಣ ಹಸ್ತದ ಮೇಲೆ ವಾಮಹಸ್ತವನ್ನು ಇಟ್ಟು ಮತ್ತು ಈ ಹಸ್ತಗಳನ್ನು ಪದ್ಮಾಸನಸ್ಥವಾಗಿರುವ ಪಾದಗಳ ಮೇಲೆ ಇರಿಸಿರುವ ಭಂಗಿಯೇ ಧ್ಯಾನಭಂಗಿ ಮತ್ತು ಈ ಮುದ್ರೆಯೇ ಧ್ಯಾನಮುದ್ರೆ. ಈ ಭಂಗಿಯ ಉಲ್ಲೇಖವನ್ನು ಭಗವದ್ಗೀತೆ[19] ಕುಮಾರ ಸಂಭವ[20] ಇನ್ನಿತರ ಗ್ರಂಥಗಳಲ್ಲಿ ನೋಡಬಹುದು. ಕ್ರಿ.ಪೂ. ೨–೩ನೇ

---

[14] परिधौरायसौस्तीक्ष्णैः सन्निकर्षे च मुष्टिभि:
निघ्नतां समरेअन्योन्यम् शब्दो दिवमिवास्पृशत् ॥ ಮಹಾಭಾರತ, I, 16–17

[15] V.S. Agrawala, *Indian Art*, pl. xx, fig 52.


[16] *Ibid.*, pl. XLVIII, fig. 158

[17] D. R. Thapar, *Icons in Bronze*, pl. LXII


[18] V. S. Agrawala, *op. cit.*, pl. LXX

[19] समम् कायशिरोग्रीवम् धारयन्नचलम् स्थिरः ।
संप्रेक्ष्य नासिकाग्रम् स्वं दिशश्चानवलोकयन् ॥ ಭಗವದ್ಗೀತೆ VI, 13


[20] अवृष्टिसंरम्भमिवाम्बुवाहमपामिवाधारमनुत्तरङ्गम् ।
अन्तश्चराणां मरुतां निरोधान्निवातनिष्कम्पमिव प्रदीपम् ॥
ಕುಮಾರಸಂಭವ III, 47




೧೨. ಊರುಹಸ್ತ




೧೩. ವಿಸ್ಮಯ ಮುದ್ರೆ



೧೪. ಅರ್ಧಚಂದ್ರ ಮುದ್ರೆ




೧೫. ಧನುರ್ ಹಸ್ತ



೧೬. ಮುಷ್ಟಿಕರಮ್



೧೭. ನಾಟ್ಯಕರಮ್



೧೮. ನಿದ್ರಿತಹಸ್ತಂ




೧೯. ತರ್ಜನೀ ಮುದ್ರೆ




೨೦. ಕರ್ತರೀಮುಖ ಮುದ್ರೆ



೨೧. ಅರ್ಧಪತಾಕ ಮುದ್ರೆ




೨೨. ಧ್ಯಾನಮುದ್ರೆ




೨೩. ವ್ಯಾಖ್ಯಾನ ಮುದ್ರೆ



೨೪. ಜ್ಞಾನ ಮುದ್ರೆ



೨೫. ಧರ್ಮಶಾಸ್ತ್ರ ಪ್ರವರ್ತನ ಮುದ್ರೆ



೨೬. ಭೂಸ್ಪರ್ಶ ಮುದ್ರೆ

ಶತಮಾನದ ಉಜ್ಜಯಿನಿಯ[21] ತಾಮ್ರನಾಣ್ಯಗಳಲ್ಲಿರುವ ಮೂರ್ತಿಗಳಲ್ಲಿ ಮತ್ತು ಅನೇಕ ಗಾಂಧಾರ[22] ಪ್ರತಿಮೆಗಳಲ್ಲಿ ಈ ಮುದ್ರೆಯಿದೆ. ಮಥುರಾ ಕಲಾಶಾಲೆಯಲ್ಲಿರುವ ಯೋಗವಿಷ್ಣುಮೂರ್ತಿಗಳಲ್ಲಿ ಈ ಯೋಗ ಮುದ್ರೆಯನ್ನು ಕಾಣಬಹುದು. (ಚಿತ್ರ ೨೨)

೨೩ ವ್ಯಾಖ್ಯಾನ ಮುದ್ರೆ:

ತೋರ್ಬೆರಳಿನ ತುದಿಯು ಮತ್ತು ಹೆಬ್ಬೆಟ್ಟಿನ ತುದಿಯು ಒಂದಕ್ಕೊಂದು ಸ್ಪರ್ಶಿಸಿ, ಇತರ ಬೆರಳುಗಳು ತೆರೆದಿರುವ ಮುದ್ರೆಯೇ ವ್ಯಾಖ್ಯಾನ ಮುದ್ರೆ. ಇದನ್ನು ಸಂದರ್ಶನ ಅಥವಾ ಚಿನ್‌ಮುದ್ರಾ ಎಂದು ಕರೆಯುತ್ತಾರೆ. ಎಲ್ಲೋರದ ರಾಮೇಶ್ವರ ಗುಹಾಲಯದಲ್ಲಿ ಸುಬ್ರಹ್ಮಣ್ಯನು ತನ್ನ ತಂದೆಯಾದ ಶಿವನಿಗೆ ಓಂಕಾರ ಮಂತ್ರಾರ್ಥವನ್ನು ಉಪದೇಶಿಸುತ್ತಿರುವಲ್ಲಿ ಈ ಮುದ್ರೆಯನ್ನು ಕಾಣಬಹುದು. ಬಾರ್‌ಹೂತ್‌ನ ದೀರ್ಘತಪಸ್ವೀ ಮುನಿಯು ತನ್ನ ಶಿಷ್ಯರಿಗೆ ಉಪದೇಶಿಸುತ್ತಿರುವ ಚಿತ್ರದಲ್ಲಿಯೂ ಈ ಮುದ್ರೆಯು ಚಿತ್ರಿತವಾಗಿದೆ. (ಚಿತ್ರ ೨೩)

೨೪ ಜ್ಞಾನ ಮುದ್ರೆ:

ವ್ಯಾಖ್ಯಾನ ಮುದ್ರೆಗೂ. ಜ್ಞಾನಮುದ್ರೆಗೂ ಅಷ್ಟಾಗಿ ವ್ಯತ್ಯಾಸ ಕಂಡುಬರುವುದಿಲ್ಲ. ಇದರಲ್ಲಿಯೂ ತೋರ್ಜೆರಳಿನ ತುದಿ ಮತ್ತು ಹೆಬ್ಬೆಟ್ಟಿನ ತುದಿ ಒಂದಕ್ಕೊಂದು ಸ್ಪರ್ಶಿಸಿ, ಹಸ್ತವು ಹೃದಯದ ಹತ್ತಿರವೇ ಹೃದಯಾಭಿಮುಖವಾಗಿ ತಿರುಗಿರುತ್ತದೆ. ಬಾರ್‌ಹೂತ್‌ನ ಅಜಪಾಲಕ ಯಕ್ಷನಲ್ಲಿ ಈ ಮುದ್ರೆಯನ್ನು ಕಾಣಬಹುದು. ಥಿಯೋಗರ್‌ನ ನರ–ನಾರಾಯಣ ಮೂರ್ತಿಯಲ್ಲಿಯೂ ಕಾಣಬಹುದು. ಕೆಲವು ಶಿಲ್ಪಗಳಲ್ಲಿ ಹಸ್ತವು ದರ್ಶಕನ ಕಡೆಗೂ ತಿರುಗಿರುತ್ತದೆ. (ಚಿತ್ರ ೨೪)

೨೫ ಧರ್ಮಚಕ್ರ ಪ್ರವರ್ತನ ಮುದ್ರೆ ಮತ್ತು ೨೬ ಭೂಸ್ಪರ್ಶ ಮುದ್ರೆ:

ಬುದ್ಧನ ಪ್ರತಿಮೆಗಳಲ್ಲಿ ಮಾತ್ರ ಈ ಮುದ್ರೆಗಳನ್ನು ಕಾಣಬಹುದು. ಸಾರನಾಥದಲ್ಲಿರುವ ಬುದ್ಧನ ಶಿಲ್ಪದಲ್ಲಿ ಧರ್ಮಚಕ್ರ ಪ್ರವರ್ತನ ಮುದ್ರೆಯಿದೆ. ಡಾ. ಬ್ಯಾನರ್ಜಿಯವರ ಅಭಿಪ್ರಾಯದಲ್ಲಿ ಜ್ಞಾನ ಮತ್ತು ವ್ಯಾಖ್ಯಾನ ಮುದ್ರೆಗಳ ಮಿಶ್ರವೇ ಧರ್ಮಚಕ್ರ ಪ್ರವರ್ತನ ಮುದ್ರೆ. ಇದರಲ್ಲಿ ವಾಮಹಸ್ತವು ಜ್ಞಾನಮುದ್ರೆಯಲ್ಲಿಯೂ, ದಕ್ಷಿಣ ಹಸ್ತವು ವ್ಯಾಖ್ಯಾನ ಮುದ್ರೆಯಲ್ಲಿಯೂ ಇರುತ್ತದೆ. (ಚಿತ್ರ ೨೫, ೨೬)

ಹಸ್ತವು ಭೂಮಿಯನ್ನು ಸ್ಪರ್ಶಿಸುತ್ತಿರುವುದರಿಂದ ಈ ಮುದ್ರೆಗೆ ಭೂಸ್ಪರ್ಶ ಮುದ್ರೆ ಎಂದು ಹೆಸರು. ಮಹಾಯಾನ ಶಿಲ್ಪಶಾಸ್ತ್ರದಲ್ಲಿ ಬರುವ ಧರ್ಮಚಕ್ರ ಮತ್ತು ಭೂಸ್ಪರ್ಶ ಮುದ್ರೆಗಳು ಕ್ರಮವಾಗಿ ವೈರೋಚನ ಮತ್ತು ಅಕ್ಷೋಭ್ಯ ಮೂರ್ತಿಗಳಲ್ಲಿ ಕಂಡುಬರುತ್ತವೆ.

೨೭ ಅಜಾನುಲಂಬಬಾಹು ಮುದ್ರೆ:

ಇದು ಜಿನಮೂರ್ತಿಗಳಲ್ಲಿ ಮಾತ್ರ ಉಪಯೋಗಿಸಲ್ಪಡುವ ಮುದ್ರೆ. ವರಾಹಮಿಹಿರನು ಈ ಮುದ್ರೆಯನ್ನು 'ಅಜಾನುಲಂಬಬಾಹು ಮುದ್ರಾ' ಎಂದು ಕರೆಯುತ್ತಾನೆ.

[21] Cunningham : *Coins of Ancient India*

[22] H. Hargreaves : *Handbook to the Sculptures in the Peshawar Museum*, pl. 3

ನೃತ್ತಹಸ್ತಗಳು

ಸಲೆ ಚತುರಸ್ರೋದ್ವೃತ್ತಂ
ತಲಮುಖಮಂ ಸ್ವಸ್ತಿಕಾಖ್ಯಮುನ್ನತಿಯಿಂದಂ
ನೆಲೆಗೊಂಡ ವಿಪ್ರಕೀರ್ಣಂ
ಸುಲಲಿತದಿಂ ತೋರ್ಪರಾಳ ಕಟಿಕಾಮುಖಮಂ ೩೯

ಆವಿದ್ಧವಕ್ತ್ರವೊಳ್ಪಿಂ
ಭಾವಿಸೆ ಸೂಚ್ಯಾಸ್ಯಮರ್ಧರೇಚಿತ ರೇಚಿತ
ಮೋವಿದ ನಿತಂಬಪಲ್ಲವ
ಕೋವಿದೆ ಕೇಳ್ ಕೇಶಬಂಧ ಹಸ್ತಗಳಿವುಂ ೪೦

ಉತ್ತಾನವಂ ಚಿತಂ ಮಿಗೆ
ಬಿತ್ತರಿಪಲತಾಕರಂ ಲಸತ್ಕರಿಹಸ್ತಂ
ಉತ್ತಮದಪಕ್ಷವಂಚಿತ
ಮತ್ಯಂತೋನ್ನತಮೆನಿಪ್ಪಪಕ್ಷದ್ಯೋತಂ ೪೧

ಮಿಗೆ ದಂಡಪಕ್ಷಮುಂ ತೊ
ಟ್ಟಗೆ ಗಾರುಡಪಕ್ಷಮೂರ್ಧ್ವಮಂಡಲವೊಳ್ಪಿಂ
ನೆಗಳ್ದಿರ್ದ ಪಾರ್ಶ್ವಮಂಡಲ
ಮೊಗೆದೆಸೆದಿರ್ಪದುರಮಂಡಲಂ ತಾನೆಂದುಂ ೪೨

ಉರಪಾರ್ಶ್ವಾರ್ಧ[ದ]ಮಂಡಲ
ಮುರುಮುಷ್ಟಿಕಸ್ವಸ್ತಿಕಂ ಮನೋಮುದಮಪ್ಪಾ
ವರನಳಿನಪದ್ಮಕೋಶಂ
ಸುರುಚಿರದಲಪದ್ಮಮೂಲ್ಬಣಂ ವಲಿತಾಖ್ಯಂ ೪೩

ಲಲಿತಮೆನಿಪ್ಪೀ ಹಸ್ತಂ
ನೆಲೆಗೊಳ್ಗುಂ ಭರತದಲ್ಲಿ ಮೂವತ್ತೆಂದುಂ
ಲಲನೆ ಕೇಳ್ ನೃತ್ತಹಸ್ತಮಿ
ವೊಲವಿಂ ಪೇಳ್ದ ಚಿಪುವೆಂ ಸರೋರುಹಗಂಧೀ ೪೪

ಟಿ. ಜಿ. ಕಲಘಟಗಿ

ಅಹಿಂಸೆ: ಒಂದು ಮನಃಶಾಸ್ತ್ರೀಯ ವಿವರಣೆ

೧

ರೂಮೆರೋಲಾ ಹೇಳಿದಂತೆ ಅಹಿಂಸಾ ತತ್ತ್ವವನ್ನು ನೀಡಿದವರು ನೆಪೋಲಿಯನ್ ಅಥವಾ ವೆಲಿಂಗ್‌ಟನ್‌ರಿಗಿಂತ ಬಹಳ ಶ್ರೇಷ್ಠರು. ಅಹಿಂಸೆಯು ಮಾನವನ ನಿಯಮ ಹಾಗೂ ಹಿಂಸೆಯು ಮೃಗಗಳ ನಿಯಮವೆಂದು ಗಾಂಧೀಜಿ ಹೇಳಿದರು. ಅಹಿಂಸೆಯು ಋಷಿಗಳ ಆದ್ಯ ಧರ್ಮ. ಅದರಿಂದ ಅವರು ಸಾಮಾನ್ಯ ಮಾನವನ ಸ್ತರದಿಂದ ಆತ್ಮೋನ್ನತಿಯ ಸ್ತರಕ್ಕೆ ತಮಗೆ ತಾವೇ ಏರುತ್ತಾರೆ ಎಂದು ಜಿಮ್ಮರನ ಅಭಿಮತ.

ಜೈನರು ಅಹಿಂಸೆಗೆ ಪರಮ ಪ್ರಾಮುಖ್ಯವನ್ನು ಕೊಟ್ಟಿದ್ದಾರೆ. ಅಹಿಂಸಾ ಪರಮೋಧರ್ಮಃ ಎಂಬುದು ಜೈನಧರ್ಮದ ಪ್ರಧಾನ ತತ್ತ್ವ. ಪ್ರಾಚೀನ ಭಾರತೀಯ ದರ್ಶನದಲ್ಲಿ ಅಹಿಂಸೆಯು ವ್ಯಕ್ತಿ ಚಾರಿತ್ರ್ಯದ ಮುಖ್ಯ ತತ್ತ್ವವಾಗಿದೆ. ಬೃಹದಾರಣ್ಯಕ ಹಾಗೂ ಛಾಂದೋಗ್ಯ ಉಪನಿಷತ್ತುಗಳು ವ್ಯಕ್ತಿಯು ಅಹಿಂಸಾ ತತ್ತ್ವವನ್ನು ಪಾಲಿಸಿ ಆತ್ಮಸಂಯಮದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಹೇಳುತ್ತವೆ. ಇಂಥದೇ ಬೋಧನೆ ಭಗವದ್ಗೀತೆಯಲ್ಲಿಯೂ ಇದೆ.

೨

ಅಹಿಂಸೆಯು ಎಲ್ಲ ಸದ್ಗುಣಗಳ ಮೂಲ. ಅದು ಯಮ ಹಾಗೂ ನಿಯಮಾತ್ಮಕ ಗುಣಗಳ ಬೇರು. ಸಮಾಧಿಯನ್ನು ಪಡೆಯಲು ಮಾನಸಿಕ ಹಿನ್ನೆಲೆ ಹಾಗೂ ನೈತಿಕ ಸಿದ್ಧತೆಗಾಗಿ ಇನ್ನಿತರ ನಾಲ್ಕು ವ್ರತಗಳೊಂದಿಗೆ ಅಹಿಂಸೆ ಅಗತ್ಯನಿಯಮವೆಂದು ಪತಂಜಲಿ ಯೋಗದಲ್ಲಿ ಹೇಳಿದೆ. ಧ್ಯಾನದ ನೈತಿಕ ಭೂಮಿಕೆಗೆ ಹಿನ್ನೆಲೆಯನ್ನು ಒದಗಲು ನಾವು ಸಿದ್ಧಪಡಿಸಿದರೆ ಆತ್ಮೋನ್ನತಿಯು ಸಾಧ್ಯ. ಅಹಿಂಸೆಯು ಈ ಹಿನ್ನೆಲೆಯನ್ನು ಒದಗಿಸುತ್ತದೆ. ನೈತಿಕ ಭೂಮಿ ಬಲವಾಗಿದ್ದರೆ ಮಾತ್ರ ಇದು ಸಾಧ್ಯ. ಅಹಿಂಸೆಯ ಆಚರಣೆಯು ಆತ್ಮೋನ್ನತಿಯತ್ತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯಕ. ಆದ್ದರಿಂದ ವ್ಯಕ್ತಿತ್ವ ವಿಕಾಸದ ಮಾನಸಿಕ ಭೂಮಿಕೆಯನ್ನು ಉಚಿತವಾಗಿ ವಿಮರ್ಶಿಸಲು ಅಹಿಂಸಾ ತತ್ತ್ವದ ಅರ್ಥವ್ಯಾಪ್ತಿಯನ್ನು ತಿಳಿಯುವುದು ಅಗತ್ಯವಾಗಿದೆ.

೩

ಅಹಿಂಸೆಯೆಂದರೆ ಕೊಲ್ಲದಿರುವುದು. ಯಾವುದೇ ಜೀವಿಯನ್ನು ದೈಹಿಕವಾಗಿಯಾಗಲೀ, ಮಾನಸಿಕವಾಗಿಯಾಗಲೀ ಹಿಂಸಿಸುವುದನ್ನು ತಡೆಯುವುದು. ಜೈನರು ಅಹಿಂಸೆಯ ಕಲ್ಪನೆಯನ್ನು ಮಾನಸಿಕ ಹಾಗೂ ನೈತಿಕ ತಳಹದಿಯ ಮೇಲೆ ವಿಶ್ಲೇಷಿಸಿದ್ದಾರೆ. ಜೀವನದ ಸ್ವಭಾವವನ್ನು ಅದರ ಭೌತಿಕ ಹಾಗೂ ಆಧ್ಯಾತ್ಮಿಕ ಅರ್ಥಗಳಲ್ಲಿ ಅರಿತುಕೊಂಡಾಗ ಮಾತ್ರ ಇದು ಸಾಧ್ಯ. ಎಲ್ಲ ವಸ್ತುಗಳನ್ನು ಜೀವ. ಅಜೀವ ಎಂದು ವಿಭಾಗಿಸಲಾಗಿದೆ. ಜೈನರು ಜೀವಗಳ ಬಹುತ್ವವನ್ನು (plurality) ನಂಬುತ್ತಾರೆ. ಈ ಭೌತಿಕ ಜಗತ್ತಿನ ಜೀವಗಳನ್ನು ಅವುಗಳ ಸ್ತರ ಹಾಗೂ ಇಂದ್ರಿಯ ಸಂಖ್ಯೆ ಇತ್ಯಾದಿ ತತ್ತ್ವಗಳ ಆಧಾರದ

ಮೇಲೆ ವರ್ಗೀಕರಿಸಲಾಗಿದೆ. ಇಲ್ಲಿ ವನಸ್ಪತಿ ಜೀವಿಗಳೂ ಇವೆ. ಪೃಥ್ವೀಕಾಯದಂಥ, ಜಲಕಾಯದಂಥ ಹಾಗೂ ಗಿಡಮರಗಳಂಥ ಏಕೇಂದ್ರಿಯ ಜೀವಿಗಳೂ ಇವೆ. ಪ್ರಾಣಿಗಳು ತ್ರಸ ಜೀವಿಗಳು, ಅಂದರೆ ಸಂಚರಿಸುವ ಜೀವಿಗಳು. ಅವು ಎರಡರಿಂದ ಐದರವರೆಗೆ ಇಂದ್ರಿಯಗಳನ್ನು ಹೊಂದಿವೆ. ಜೀವಿಗಳಿಗೆ ಜೀವನ ಶಕ್ತಿಯಾದ ಪ್ರಾಣವಿರುತ್ತದೆ. ಜೀವರಾಶಿಗಳು ಹಾಗೂ ಅವು ಹೊಂದಿರುವ ಪ್ರಾಣಗಳ ವಿಶ್ಲೇಷಣೆಯ ಆಧಾರದ ಮೇಲೆ ಹೇಳುವುದಾದರೆ, ಮನ, ವಚನ, ಕಾಯಗಳೆಂಬ ತ್ರಿಕರಣಪೂರ್ವಕ ಯಾವುದೇ ಜೀವಿಗಾಗಲೀ ಅಥವಾ ಅದರ ಪ್ರಾಣಕ್ಕಾಗಲೀ ನೋವು ಮಾಡದಿರುವುದೇ ಅಹಿಂಸೆ. ಅಂದರೆ ತಾನೇ ಹಿಂಸೆಯನ್ನು ಮಾಡುವುದು ಅಥವಾ ಹಿಂಸಾಕಾರ್ಯವನ್ನು ಅನುಮೋದಿಸುವುದು ಅಥವಾ ಇನ್ನೊಬ್ಬರು ಹಿಂಸೆಯಲ್ಲಿ ತೊಡಗುವಂತೆ ಮಾಡುವುದು—ಈ ಮೂರು ರೀತಿಯ ಕ್ರಿಯೆಗಳಿಂದ ದೂರವಿರುವುದು ಅಹಿಂಸೆ. ಒಂದು ಜೀವಿ ಎಷ್ಟೇ ಸಣ್ಣದಿದ್ದರೂ ಅದನ್ನು ನಾವು ಹಿಂಸಿಸಬಾರದು. ಬೇರೆಯವರು ನಮ್ಮ ಪರವಾಗಿ ಹಿಂಸಿಸುವಂತೆ ಮಾಡಬಾರದು ಅಥವಾ ಬೇರೆಯವರು ಮಾಡಿದ ಹಿಂಸೆಗೆ ನಮ್ಮ ಒಪ್ಪಿಗೆ ಕೊಡಬಾರದು.

ಹಿಂಸೆಯಲ್ಲಿ ಎರಡು ವಿಧ. ದ್ರವ್ಯ ಹಿಂಸೆ, ಅಂದರೆ ಶಾರೀರಿಕ ಹಿಂಸೆ. ಇದು ಯಾವುದೇ ಜೀವಿಯನ್ನು ಭೌತಿಕವಾಗಿ ಹಿಂಸಿಸುವುದು. ಆದರೆ ಮಾನಸಿಕ ಹಿಂಸೆಯು ಬೇರೆ ಜೀವಿಗೆ ಹಿಂಸೆಯನ್ನು ಕೊಡುವ ಆಲೋಚನೆಗಳಿಗೆ ಅವಕಾಶ ಮಾಡಿಕೊಡುವುದಕ್ಕೆ ಸಂಬಂಧಿಸಿದ್ದು. ಮಾನಸಿಕ ಹಿಂಸೆಯು ದ್ರವ್ಯ ಹಿಂಸೆಗಿಂತಲೂ ಹೆಚ್ಚು ಘಾತಕವಾದದ್ದು. ಉದ್ದೇಶಪೂರ್ವಕ ಮಾಡಿದ ಹಿಂಸೆಯು ಘಾತಕವಾದದ್ದು ಹಾಗೂ ತೀವ್ರ ಪರಿಣಾಮಕಾರಿಯಾದದ್ದು. ಮತ್ತೊಂದು ಜೀವಿಗೆ ಹಿಂಸೆಯನ್ನು ಮಾಡುವ ಭಾವನೆಯನ್ನಿಟ್ಟುಕೊಳ್ಳುವುದು ಆ ಜೀವಿಯನ್ನು ದೈಹಿಕವಾಗಿ ಹಿಂಸಿಸುವುದಕ್ಕಿಂತ ಹೆಚ್ಚು ಕೆಟ್ಟದ್ದು. ಆದ್ದರಿಂದ ಹಿಂಸೆಯನ್ನು ಕೂಡ ತ್ಯಜಿಸಬೇಕು. ಜೈನರ ಅಹಿಂಸೆಯ ಕಲ್ಪನೆಯು ಮಾನಸಿಕ ಹಿಂಸೆಯ ವೈಜ್ಞಾನಿಕ ವಿಶ್ಲೇಷಣೆಯನ್ನು ಆಧರಿಸಿದೆ. ತತ್ತ್ವಾರ್ಥ ಸೂತ್ರದಲ್ಲಿ 'ಪ್ರಮತ್ತ ಯೋಗಾತ್ಪ್ರಾಣವ್ಯಪರೋಪಣಂ ಹಿಂಸಾ' ಎಂದು ಹೇಳಿದೆ.[1] ಹಿಂಸೆ ಎಂದರೆ ಉದಾಸೀನ ಮತ್ತು ಅಲಕ್ಷ್ಯದಿಂದ ಕೂಡಿ ಕ್ರೋಧಾದಿ ಕಷಾಯಗಳಿಂದ ಇನ್ನೊಂದು ಜೀವಿಗೆ ಉಂಟು ಮಾಡಿದ ನೋವು. ಯಶಸ್ತಿಲಕದಲ್ಲಿ ಸೋಮದೇವನು ಹಿಂಸೆಯನ್ನು ಪ್ರಮಾದದಿಂದ ಜೀವಿಗೆ ಮಾಡಿದ ನೋವು ಎಂದು ವಿವರಿಸಿದ್ದಾನೆ. 'ಯತ್ಸ್ಯಾತ್ ಪ್ರಮಾದ ಯೋಗೇನ ಪ್ರಾಣಿಷು ಪ್ರಾಣಹಾಪನಂ ಹಿಂಸಾ' ಎಂದು ಹೇಳಿದ್ದಾನೆ. ಇದರಲ್ಲಿ ಎರಡು ಅಂಶಗಳಿವೆ. ಒಂದು ಜೀವಿಗೆ ಹಿಂಸೆಯನ್ನುಂಟುಮಾಡುವುದು. ಎರಡು ಪ್ರಮಾದದಿಂದ ಮಾಡಲಾದುದು. ಆದರೆ ಕೇವಲ ನೋವು ಮಾತ್ರ ಹಿಂಸೆಯಲ್ಲ. ಅದನ್ನು ಉದ್ದೇಶದ ಜೊತೆಯಲ್ಲಿ ಕೆಟ್ಟ ಭಾವನೆಗಳೊಡನೆ ಪರಿಗಣಿಸಬೇಕು. ಹಾಗೆಯೇ ವಿನೋದ, ಕ್ರೀಡೆ ಅಥವಾ ಯಾವುದಾದರೂ ಲಾಭಕ್ಕಾಗಿ ಮಾಡಿದ ಉದ್ದೇಶ ಪೂರ್ವಕ ನೋವು ಹಿಂಸೆಯಾಗುತ್ತದೆ. ಇಲ್ಲಿ ಸಂಕಲ್ಪವೇ ಪ್ರಧಾನ ಅಂಶ. ಹಾಗೆ ನೋಡಿದರೆ ಕಷಾಯಗಳಿಂದ ಮುಕ್ತನಾದ ದಯಾಮಯಿಯಾದ ಸಾತ್ವಿಕ ವ್ಯಕ್ತಿಯಿಂದ ಆಕಸ್ಮಿಕವಾಗಿ ಹಿಂಸೆಯಾದರೂ ಅದರಿಂದ ಅವನಿಗೆ ಪಾಪವಿಲ್ಲ. ಹಿಂಸಾಚರಣೆಗೆ ಪ್ರೇರಕವಾದ ಉದ್ದೇಶ ಹಾಗೂ ಮಾನಸಿಕ ಒಲವುಗಳನ್ನು **mental set** ಎಂದು ಗಮನಿಸಬಹುದು. ಹಿಂಸೆಯೆಂಬ ಮಾನಸಿಕ ಸ್ಥಿತಿ ಅತ್ಯಂತ ಅಪಾಯಕಾರಿಯಾದದ್ದು. ಮತ್ತೊಬ್ಬನ ವಿರುದ್ಧವಾಗಿ ಕಠಿಣವಾದ ಮಾತುಗಳನ್ನಾಡುವುದು ಹಾಗೂ ದುರಾಲೋಚನೆಗಳಿಗೆ ಎಡೆಗೊಡುವುದು ಕೂಡ ಹಿಂಸೆ ಎಂದು ಪರಿಗಣಿತವಾಗುತ್ತದೆ.

ಅಹಿಂಸಾ ತತ್ತ್ವಕ್ಕೆ ಸಹಜವಾಗಿಯೇ ಕೆಲವು ಮಿತಿಗಳಿವೆ ಎಂದು ಟೀಕಾಕಾರರು ಸೂಚಿಸುತ್ತಾರೆ. (೧) ಅಹಿಂಸೆಯ ಪಾಲನೆಯು ಮಾನವ ಸ್ವಭಾವಕ್ಕೆ ಹೊಂದಿಕೊಳ್ಳದು ಎಂದು ಹೇಳಲಾಗಿದೆ. ಏಕೆಂದರೆ ಮಾನವ ಪೂರ್ಣವಾಗಿ ಸುವಿಚಾರದ ಪ್ರಾಣಿಯಲ್ಲ. (೨) ಇಂದ್ರಿಯಗಳಿಂದ ಕೂಡಿದ ಅವನು ಭಾವೋದ್ರೇಕ ಹಾಗೂ ಸಹಜ ಪ್ರವೃತ್ತಿಗಳಿಂದ ನಿಯಂತ್ರಿತನಾಗಿದ್ದಾನೆ. ಯುದ್ಧ ಪ್ರವೃತ್ತಿಯು

[1] ತತ್ತ್ವಾರ್ಥಸೂತ್ರ, VII-8

ಮನುಷ್ಯನಿಗೆ ಸಹಜವಾದದ್ದು. ಜಗಳ ಹಾಗೂ ಕಾದಾಟ ರಕ್ತಗತವಾದದ್ದು. ಈ ಆಧುನಿಕ ನಾಗರಿಕ ಸಮಾಜದಲ್ಲಿ ನಾವು ಯುದ್ಧ ಮಾಡಲಾಗದಿದ್ದರೂ ಗೂಳಿಕಾಳಗ, ಹುಂಜಗಳ ಕಾದಾಟ ಮತ್ತು ಸ್ಟಂಟ್ ಸಿನಿಮಾಗಳನ್ನು ನೋಡುವುದರ ಮೂಲಕವಾದರೂ ತೃಪ್ತಿಯನ್ನು ಪಡೆಯುತ್ತೇವೆ. (೬) ಸಮಾಜದ ಅಭಿವೃದ್ಧಿಗೆ ಯುದ್ಧಗಳು ಅವಶ್ಯಕ ಹಾಗೂ ಸಹಜವಾದವುಗಳು ಎಂಬುದಾಗಿ ಒಂದು ಯುದ್ಧತತ್ತ್ವ ಹೇಳುತ್ತದೆ. ಸಾಧುಸ್ವಭಾವವನ್ನು, ಅಹಿಂಸೆಯನ್ನು ಬೋಧಿಸುವುದು ಮನುಷ್ಯನ ವೀರ ಸಹಜ ಸ್ವಭಾವಕ್ಕೆ ವಿರುದ್ಧವಾದದ್ದು. ನಮ್ರತೆಯನ್ನು ಸದ್ಗುಣಗಳನ್ನು ಬೋಧಿಸುವ ಧರ್ಮವನ್ನು ತತ್ತ್ವಜ್ಞಾನಿಯಾದ ನೀಷೆ (Nietzsche) ಖಂಡಿಸುತ್ತಾನೆ. ಕಾರಣ ಅದು ಮಾನವನ ಘನತೆಯನ್ನು ಕುಗ್ಗಿಸುತ್ತದೆ. ಹಾಗೂ ಹೇಡಿತನವನ್ನು ಬೆಳೆಸುತ್ತದೆ. (೭) ಮಾನಸಿಕ ಹಾಗೂ ಸಾಮಾಜಿಕ ಮಿತಿಗಳಿರುವುದರಿಂದ ಅಹಿಂಸೆಯನ್ನು ಪೂರ್ಣವಾಗಿ ಹಾಗೂ ನಿಜವಾದ ಅರ್ಥದಲ್ಲಿ ಆಚರಿಸಲು ಸಾಧ್ಯವಿಲ್ಲ. ಅದು ಪ್ರಕೃತಿಯ ನಿಯಮಕ್ಕೆ ವಿರೋಧವಾದುದರಿಂದ ಜೀವನದ ಆದರ್ಶವಾಗಿ ಅಹಿಂಸಾತತ್ತ್ವವು ವೈಜ್ಞಾನಿಕವಾಗಿ ಅಸಾಧ್ಯವೆಂಬುದು ಶ್ರೀಮತಿ ಸ್ಟೀವನಸನ್‌ರ ಅಭಿಪ್ರಾಯ. ಮನುಷ್ಯನ ಸ್ವಭಾವವೇ ಹಾಗಿರುವುದರಿಂದ ಈ ಜಗತ್ತಿನಲ್ಲಿ ಅಹಿಂಸೆಯನ್ನು ನಿರ್ದೋಷಿತವಾಗಿ ಮತ್ತು ಪೂರ್ಣರೀತಿಯಿಂದ ಪಾಲಿಸಲು ಸಾಧ್ಯವಿಲ್ಲ.

ಈ ಆಕ್ಷೇಪಣೆಗಳಲ್ಲಿ ಹುರುಳಿಲ್ಲದಿಲ್ಲ. ಮನುಷ್ಯನು ಪ್ರಾಣಿಗಳಂತೆ ಯುದ್ಧಪ್ರವೃತ್ತಿಯನ್ನು ಪ್ರದರ್ಶಿಸುತ್ತಾನೆ ಎಂಬುದರಲ್ಲಿ ಸ್ವಲ್ಪ ಸತ್ಯವಿದೆ. ಆದರೆ ಇಮ್ಯಾನ್ಯುಯಲ್ ಕಾಂಟ್ ಹೇಳಿದಂತೆ ಮನುಷ್ಯ ಸ್ವತಂತ್ರ ಪ್ರಾಣಿಯಾಗಿದ್ದು ಅವನು ಇತರ ಪ್ರಾಣಿಗಳಂತೆ ಕೇವಲ ಇಂದ್ರಿಯ ಸ್ವಭಾವಗಳಿಂದ ಮಾತ್ರ ನಿಯಂತ್ರಿಸಲ್ಪಟ್ಟಿಲ್ಲ. ಅವನಲ್ಲಿ ವಿಚಾರಶಕ್ತಿ ಕೂಡ ಇದೆ. ಈ ವಿಚಾರಶಕ್ತಿಯೇ ಮಿಕ್ಕ ಪ್ರಾಣಿಗಳಿಂದ ಮನುಷ್ಯನನ್ನು ಪ್ರತ್ಯೇಕಿಸುವುದು. ಮೃಗೀಯ ಪ್ರವೃತ್ತಿಗಳಿಂದ ನಿಯಂತ್ರಿತನಾಗಿರುವುದು ಅವನಿಗೆ ತಿಳಿದಿದೆ. ಆದರೆ ಮಿಕ್ಕ ಪ್ರಾಣಿಗಳಿಗೆ ಈ ಅಂಶದ ಅರಿವು ಇಲ್ಲ. ಇದು ಅವನಿಗೆ ಜೀವರಾಶಿಯ ಅಂತಸ್ತಿನಲ್ಲಿ ವಿಶೇಷವಾದ ಸಾಮರ್ಥ್ಯ ಹಾಗೂ ಜವಾಬ್ದಾರಿಯನ್ನು ನೀಡಿದೆ. ಅವನು ತನ್ನ ಮೃಗೀಯ ಸ್ವಭಾವಗಳನ್ನು ದಾಟಿ ತನ್ನ ಶಕ್ತಿಯನ್ನು ಉಚ್ಚಧ್ಯೇಯಗಳತ್ತ ಸಾಗಿಸಬಹುದು. ಸಹಜಪ್ರವೃತ್ತಿಯ ಶಕ್ತಿಯನ್ನು ಅವನು ಉದಾತ್ತೀಕರಿಸಬಹುದು. ಉದಾಹರಣೆಗೆ ಒಬ್ಬ ಭಗ್ನಪ್ರೇಮಿಯು ತನ್ನ ಶಕ್ತಿಯನ್ನು ಸಮಾಜ ಸೇವೆಗೆ ವಿನಿಯೋಗಿಸಬಹುದು. ಹೀಗೆಯೇ ಮನುಷ್ಯನ ಅತ್ಯಧಿಕ ಶಕ್ತಿಯನ್ನು ಮಾನವ ಜನಾಂಗದ ಕಲ್ಯಾಣದ ಹೋರಾಟದತ್ತ ಹರಿಸಬಹುದು.

೪

ಸಾಮಾನ್ಯ ಮನುಷ್ಯ ಅಹಿಂಸೆಯನ್ನು ಪಾಲಿಸುವಲ್ಲಿರುವ ಮಿತಿಗಳನ್ನು ಭಾರತೀಯ ದಾರ್ಶನಿಕರು ಚೆನ್ನಾಗಿ ತಿಳಿದಿದ್ದರು. ಸಾಧ್ಯವಿರುವಷ್ಟು ಮತ್ತು ಹೆಚ್ಚು ಆಸ್ಥೆಯೊಂದಿಗೆ ಅಹಿಂಸಾತತ್ತ್ವವನ್ನು ಪಾಲಿಸುವಂತೆ ಮಾಡಲು ಅಹಿಂಸಾ ತತ್ತ್ವವು ಸಾಮಾಜಿಕ ಜವಾಬ್ದಾರಿಗಳನ್ನೊಳಗೊಂಡಿರಬೇಕು. ಆದ್ದರಿಂದ ಜೈನಶಾಸ್ತ್ರವು ವಿವಿಧ ಶ್ರೇಣಿಯ ನೈತಿಕ ನಿಯಮಗಳನ್ನು ನೀಡಿದೆ. ಸಂಸಾರವನ್ನು ತ್ಯಜಿಸಿ ಮುನಿಗಳಾದವರ ಆಚರಣೆಗೆ ಸಂಬಂಧಿಸಿದಂತೆ ಬಿಗಿಯಾದ ಕಠಿಣವಾದ ನಿಯಮಗಳಿವೆ. ಅವರು ಸಾಧ್ಯವಾದಷ್ಟು ಪೂರ್ಣರೀತಿಯಿಂದ ಈ ವ್ರತಗಳನ್ನು ಪಾಲಿಸಬೇಕು. ಇದು ಮುನಿಧರ್ಮ. ಮತ್ತು ಈ ವ್ರತಗಳು ಮಹಾವ್ರತಗಳು. ಆದರೆ ಶ್ರಾವಕರ ಅಂದರೆ ಗೃಹಸ್ಥರ ಸಂದರ್ಭದಲ್ಲಿ ಅಹಿಂಸೆಯ ಪಾಲನೆಗಾಗಿ ಹೇಳುವ ನಿಯಮಗಳು ಉದ್ದಾರ ದೃಷ್ಟಿಯನ್ನು ಪ್ರಕಟಿಸುತ್ತವೆ. ಇವೇ ಅಣುವ್ರತಗಳು. ಶ್ರಾವಕನು ತಾನಾಗಿ ಹಿಂಸಿಸಬಾರದು. ಅಥವಾ ಸಂಕಲ್ಪ ಹಿಂಸೆಯನ್ನು ಮಾಡಬಾರದು ಎಂದು ವಿಧಿಸಲಾಗಿದೆ. ಅವನು ಸ್ಥೂಲ ಹಿಂಸೆಯಿಂದ ದೂರ ಇರಬೇಕು. ಗೃಹಸ್ಥನ ಸಂದರ್ಭದಲ್ಲಿ ದ್ವೀಂದ್ರಿಯ ಜೀವಿಗಳ ಹಿಂಸೆಯನ್ನು ತ್ಯಜಿಸುವುದರಿಂದ ಅಹಿಂಸೆ ಪ್ರಾರಂಭವಾಗುತ್ತದೆ. ಇದು ಸಾಮಾಜಿಕ ನೀತಿಶಾಸ್ತ್ರ.

ಗೃಹಸ್ಥನಿಗೆ ಅಹಿಂಸೆಯ ಪಾಲನೆಯಲ್ಲಿ ಕೂಡ ಕೆಲವು ರೀತಿಯ ಹಿಂಸೆಗಳನ್ನು ಮಾಡಲು ರಿಯಾಯಿತಿ ತೋರಿಸಲಾಗಿದೆ. ಉದಾ: ಆಯುಧಗಳನ್ನು ಹಿಡಿದು ದುರ್ಬಲರನ್ನು ರಕ್ಷಿಸುವುದು ಕ್ಷತ್ರಿಯನ ಕರ್ತವ್ಯವೆಂದು ಗೌರವಿಸಲಾಗಿದೆ. ಆದಿಪುರಾಣದಲ್ಲಿ ಪ್ರಥಮ ತೀರ್ಥಂಕರ ಋಷಭ

ತನ್ನ ಪ್ರಜೆಗಳಿಗೆ ಕೃಷಿ, ವಾಣಿಜ್ಯ ಮತ್ತು ಆಯುಧಗಳ ಉಪಯೋಗದ ಶಿಕ್ಷಣ ನೀಡಿದ ವಿವರಣೆಯಿದೆ. ಇಷ್ಟಾದರೂ ವ್ಯಕ್ತಿಯು ಸ್ವೇಚ್ಛಾಚಾರದಿಂದ ಮತ್ತು ಕೋಪ, ತಾಪ, ದ್ವೇಷಗಳಿಂದ ಜೀವಿಗಳನ್ನು ಹಿಂಸಿಸಬಾರದು. ಶತ್ರುಗಳನ್ನು ದ್ವೇಷಿಸಬಾರದು. ಸೋಮದೇವನು ಯಶಸ್ತಿಲಕದಲ್ಲಿ ಕ್ಷತ್ರಿಯನು ಯುದ್ಧದಲ್ಲಾದರೂ ಅವಿವೇಕದಿಂದ ಕೊಲ್ಲಬಾರದೆಂದು ಹೇಳಿದ್ದಾನೆ.

ಇಲ್ಲಿ ಹೇಡಿತನಕ್ಕಿಂತ ಹಿಂಸೆಯು ಮೇಲೆಂದು ಹೇಳಿದ ಗಾಂಧೀಜಿಯ ಮಾತುಗಳನ್ನು ನೆನಪು ಮಾಡಿಕೊಳ್ಳಬಹುದು. ಭಾರತೀಯ ಮಹಿಳೆ ಅಗತ್ಯಬಿದ್ದರೆ ಹಿಂಸೆಯಿಂದಲಾದರೂ ಗೂಂಡಾಗಳನ್ನು ಎದುರಿಸಬೇಕೆಂದು ಅವರು ಹೇಳಿದರು. ಹೇಡಿತನ ಹಾಗೂ ಹಿಂಸೆ ಇವೆರಡರಲ್ಲಿ ಆಯ್ಕೆ ಮಾಡಬೇಕಾಗಿ ಬಂದರೆ ನಾನು ಹಿಂಸೆಯನ್ನು ಆರಿಸುತ್ತೇನೆ ಎಂದು ಅವರು ಹೇಳಿದರು. ಆದರೆ ಅಹಿಂಸೆಯು ಹಿಂಸೆಗಿಂತ ಅನಂತ ಪಾಲು ಶ್ರೇಷ್ಠ. ಅದು ಧೈರ್ಯದ ಬಂಡವಾಳ. ಕ್ಷಮಾಗುಣವು ಯೋಧನಿಗೆ ಭೂಷಣ. ಹೇಡಿಗೆ ಅಹಿಂಸೆಯನ್ನು ಪಾಲಿಸುವ ನೈತಿಕ ಶಕ್ತಿ ಇಲ್ಲ. ಇಲಿಯು ಬೆಕ್ಕಿನ ಬಾಯಲ್ಲಿ ಸಿಕ್ಕು ಸಾಯುವಾಗ ಅದು ಬೆಕ್ಕನ್ನು ಕ್ಷಮಿಸುತ್ತದೆ ಎನ್ನುವುದು ಹಾಸ್ಯಾಸ್ಪದ.[2] ಗಾಂಧೀಜಿಗೆ ಅಹಿಂಸೆಯು ಒಂದು ತತ್ತ್ವ. ಆದರೆ ಸಾಮಾನ್ಯ ಜನರಿಗೆ ಅದೊಂದು ನೀತಿ.

೫

ನೋವು ಮಾಡದಿರುವುದಷ್ಟೆ ಅಹಿಂಸೆಯಲ್ಲ. ಅದಕ್ಕೆ ಸ್ಪಷ್ಟವಾದ ತಾತ್ಪರ್ಯವೂ ಇದೆ. ಎಲ್ಲ ಜೀವಿಗಳೆಡೆ ದಯೆ ಕರುಣೆಗಳಂಥ ಸುಸಂಸ್ಕೃತ ಹಾಗೂ ಒಳ್ಳೆಯ ಭಾವನೆಗಳ ಅಸ್ತಿತ್ವವನ್ನು ಸೂಚಿಸುತ್ತದೆ. ಅಹಿಂಸೆಯೆಂದರೆ ಪ್ರೇಮ. ಅದು ಆತ್ಮತ್ಯಾಗವನ್ನು ಸೂಚಿಸುತ್ತದೆ. ಬುದ್ಧನು ಎಲ್ಲ ಜೀವರಾಶಿಗಳ ಮೇಲಿನ ಕರುಣೆಯಿಂದಲೇ ಲೌಕಿಕ ಸುಖಗಳನ್ನು ತ್ಯಜಿಸಿದನು. ಬಲಗೆನ್ನೆಗೆ ಹೊಡೆದ ಯಾರಿಗೂ ಎಡಗೆನ್ನೆಯನ್ನು ನೀಡು ಎಂದು ಹೇಳಿದ ಯೇಸುಕ್ರಿಸ್ತ ಕರುಣಾಮೂರ್ತಿಯಾಗಿದ್ದ.

ಅಹಿಂಸಾ ಪಾಲನೆಯ ಅಂತಿಮ ಗುರಿ ಅನ್ಯಜೀವಿಗಳನ್ನು ರಕ್ಷಿಸುವುದಷ್ಟೇ ಅಲ್ಲ. ಅದರಿಂದ ನಮ್ಮ ಆತ್ಮೋನ್ನತಿಯೂ ಆಗುವುದು. ಸೂತ್ರಕೃತಾಂಗದಲ್ಲಿ ಹೇಳಿದಂತೆ ಯಾರಾದರೂ ದುರಾಸೆಯಿಂದ ಹಿಂಸೆಗೆ ಕಾರಣರಾದರೆ ಅಥವಾ ಹಿಂಸೆಯನ್ನು ಪ್ರೋತ್ಸಾಹಿಸಿದರೆ ಅವರು ಆತ್ಮದ್ರೋಹ ಮಾಡಿಕೊಳ್ಳುತ್ತಾರೆ.[3] "ಶತ್ರುಗಳನ್ನು ಪ್ರೀತಿಸಬೇಕೆಂದು ನಾನು ನಂಬುತ್ತೇನೆ." (ಕಲ್ಲು ಹೃದಯಗಳನ್ನು ಕರಗಿಸುವ ದಯೆಯ ಶಕ್ತಿಗಳನ್ನು ನಾನು ನಂಬುತ್ತೇನೆ) ಎಂದು ಗಾಂಧೀಜಿ ಹೇಳಿದ್ದಾರೆ.[4]

ಅಹಿಂಸೆಯೆಂದರೆ ದಯಾಭಾವ. ಅದು ಆತ್ಮವಿಕಾಸಕ್ಕೆ ಅನುಕೂಲಕರವಾಗಿದೆ. ಜೀವರಾಶಿಗಳಿಗೆ ಕಲ್ಯಾಣಕರವಾಗಿದೆ. ಅದು ಅತ್ಯಂತ ಕ್ರೂರ ಮೃಗೀಯ ಶಕ್ತಿಯನ್ನು ಸೋಲಿಸಬಲ್ಲದು. ಇದನ್ನು ಗಾಂಧೀಜಿಯವರು ಪ್ರಬಲ ಬ್ರಿಟಿಷ್ ಆಡಳಿತದ ವಿರುದ್ಧ ಅಸಹಕಾರ ಮತ್ತು ಸತ್ಯಾಗ್ರಹದ ಮೂಲಕ ತೋರಿಸಿದ್ದಾರೆ. ಗಾಂಧೀಜಿಯವರ ಸತ್ಯಾಗ್ರಹವೆಂದರೆ ಬೃಹತ್ ಪ್ರಮಾಣದಲ್ಲಿ ಹೋರಾಟ. ಇದು ರಾಯಲ್ ಮಿಲಿಟರಿ ಕಾಲೇಜಿನಲ್ಲಿ ಕಲಿಸುವಂಥ ತತ್ತ್ವಗಳ ಮೇಲೆ ಆಧರಿಸಿದ್ದಲ್ಲ. ಆದರೆ ಆಧ್ಯಾತ್ಮಿಕ ಪ್ರೇರಣೆಯಿಂದ ಬಂದದ್ದು ಎಂದು ಜಿಮ್ಮರ್ ಹೇಳಿದ್ದಾನೆ.[5]

---

2 *Young India*, August 11, 1920, 'Doctrine of the Sword'

೩ ಸೂತ್ರಕೃತಾಂಗ ೧, ೧

4 *Young India*, December 1920 'Love and Hate'

5 Zimmer, *Philosophies of India* (Regan Paul, 1951), pp. 172

ಒ. ಡಿ. ಹೆಗ್ಗಡೆ

ರಾಷ್ಟ್ರೀಯ ವೇತನ ನೀತಿ ಹಾಗೂ ಅದರ ಹಲವು ಸಮಸ್ಯೆಗಳು

೧೯೭೦ರ ದಶಕದ ಈ ಐದು ವರ್ಷಗಳಲ್ಲಿನ ಕಾರ್ಮಿಕ ಚಳುವಳಿ. ಶ್ರೀಸಾಮಾನ್ಯನ ಜೀವನವನ್ನು ದುರ್ಭರಗೊಳಿಸುವ ಬೆಲೆ ಏರಿಕೆ. ರಾಷ್ಟ್ರೀಯ ಮಟ್ಟದಲ್ಲಿ ವೇತನ ನೀತಿಯನ್ನು ರೂಪಿಸಲು ನೇಮಕಗೊಂಡಿರುವ ಚಕ್ರವರ್ತಿ ಸಮಿತಿ ಹಾಗೂ ನಿರುದ್ಯೋಗ ಸಮಸ್ಯೆ, ಮುಂತಾದವುಗಳು ದೇಶಕ್ಕೊಂದು ವೇತನ ನೀತಿಯ ಅಗತ್ಯವನ್ನು ಒತ್ತಿ ಹೇಳುತ್ತವೆ. ಸೂಕ್ತ ವೇತನ ನೀತಿಯು ದೇಶದ ಆರ್ಥಿಕತೆಯು ವಿಷವರ್ತುಲವಾಗದಂತೆ ತಡೆಹಿಡಿಯಲು ಅವಶ್ಯವಾಗಿದೆ. ರಾಷ್ಟ್ರೀಯ ಆದಾಯ ಮತ್ತು ಸಂಪತ್ತಿನ ವಿತರಣೆ, ಬಡತನ ನಿರ್ಮೂಲನ ಹಾಗೂ ಕಾರ್ಮಿಕ ರಂಗದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವುದು. ಹಾಗೂ ಅತಿಯಾದ ಬೆಲೆ ಏರಿಕೆಯಿಂದ ಜನಜೀವನ ಅಸ್ತವ್ಯಸ್ತಗೊಳ್ಳದಂತೆ ನೋಡಿಕೊಳ್ಳುವುದು— ಈ ಎಲ್ಲಾ ಅಂಶಗಳೂ ಪ್ರಧಾನಿಯವರ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮದಲ್ಲಿಯೂ ಮತ್ತು ದೇಶದಲ್ಲಿ ಯೋಜನೆಗಳು ಪ್ರಾರಂಭವಾದಾಗಿನಿಂದಲೂ ಸರ್ಕಾರದ ಆರ್ಥಿಕ ಧೋರಣೆಗಳಾಗಿವೆ. ಈ ಧೋರಣೆಗಳು ಕಾರ್ಯಗತವಾಗಲು ವೇತನ ನೀತಿಯು ತುಂಬಾ ಸಹಕಾರಿಯಾಗುವುದು. ವೇತನ ನೀತಿಯು ದೇಶದಲ್ಲಿನ ಆರ್ಥಿಕ ನೀತಿಯ ಒಂದು ಅಂಗವಾಗಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ. ಇಂತಹ ಉತ್ಪಾದನೆಯ ಸೂಕ್ತ ಪಾಲು ಕಾರ್ಮಿಕರಂಗಕ್ಕೆ ಸಿಗುವಂತೆ ಗೊತ್ತು ಪಡಿಸುವುದರ ಮೂಲಕ ದೇಶದ ಸಂಪತ್ತು ಮತ್ತು ವರಮಾನ ಹಂಚಿಕೆಯಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ.

ಯಾವುದೇ ಅಭಿವೃದ್ಧ ರಾಷ್ಟ್ರಗಳಲ್ಲಿರುವಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಸಹ ವೇತನ ನೀತಿಯು ಕಾರ್ಮಿಕರಿಗೆ ಕನಿಷ್ಠ ವೇತನ ಗೊತ್ತುಪಡಿಸುವುದು. ಯುಕ್ತವಲ್ಲದ ಅಂದರೆ ಉತ್ಪಾದನೆಗೆ ಸಂಬಂಧವಿಲ್ಲದೆ ಉಂಟಾಗುವ ವೇತನದ ಏರಿಕೆಯನ್ನು ತಡೆಯುವುದು. ವಿವಿಧ ಕೈಗಾರಿಕೆಗಳಲ್ಲಿನ ಸಮಾನ ಕೆಲಸಕ್ಕೆ ಸಮಾನ ವೇತನ ನಿಗದಿ ಹಾಗೂ ಒಂದೇ ಕೈಗಾರಿಕೆಯಲ್ಲಿ ಬೇರೆ ಬೇರೆ ಹುದ್ದೆಗಳ ನಡುವಣ ವೇತನ ಮಟ್ಟದಲ್ಲಿ ಭಾರೀ ಅಂತರವನ್ನು ಕಡಿಮೆ ಮಾಡುವುದು ಹಾಗೂ ಬೆಲೆಗಳು ಮುಖ್ಯವಾಗಿ ಕೂಲಿ ಸರಕುಗಳ (ಜನಸಾಮಾನ್ಯರ ಬದುಕಿಗೆ ಅತ್ಯಂತ ಅವಶ್ಯಕವೆನಿಸಿದ ಸರಕು ಮತ್ತು ಸೇವೆ) ಬೆಲೆಯನ್ನು ಸ್ಥಿರಗೊಳಿಸುವುದು ಮತ್ತು ಕೊನೆಯದಾಗಿ ದೇಶದ ರಫ್ತನ್ನು ಹೆಚ್ಚಿಸುವುದು—ಈ ಮುಂತಾದ ಅಂಶಗಳನ್ನು ಧ್ಯೇಯವನ್ನಾಗಿ ಹೊಂದಿದೆ.[1]

ಸ್ವಾತಂತ್ರ್ಯಾನಂತರದ ೨೫ ವರ್ಷಗಳಲ್ಲಿ ದೇಶದಲ್ಲಿ ವೇತನ ನೀತಿಯ ಬೆಳವಣಿಗೆಯನ್ನು ಕುರಿತು ವಿವೇಚಿಸುವುದು ಇಲ್ಲಿನ ಪ್ರಮುಖ ಉದ್ದೇಶವಾಗಿದೆ. ಅಲ್ಲದೆ ರಾಷ್ಟ್ರೀಯ ಮಟ್ಟದಲ್ಲಿ ರಚಿಸಲಾಗಿರುವ

---

[1] Sahab Dayal : Wage Policy in India A critical Evaluation in Dynamics of Labour Relations : ed. by R. D. Agarwal.

ಚಕ್ರವರ್ತಿ ಸಮಿತಿಯು ತನ್ನ ಮಧ್ಯಕಾಲೀನ ವರದಿಯಲ್ಲಿ ವೇತನ ನೀತಿಯ ಬಗ್ಗೆ ನೀಡಿರುವ ಸಲಹೆಗಳನ್ನೂ ಚರ್ಚಿಸಲಾಗುವುದು.

ವೇತನ ನೀತಿ (೧೯೫೧-೭೪)

ನಮ್ಮ ದೇಶದಲ್ಲಿ ಅಭಿವೃದ್ಧಿ ಯೋಜನೆ ಪ್ರಾರಂಭವಾದಾಗಿನಿಂದಲೂ ವೇತನ ವಿಷಯಕ್ಕೆ ಸಂಬಂಧಿಸಿದಂತೆ ಯೋಜನೆಯ ನೇತಾರರು ಕಾರ್ಮಿಕ ವರ್ಗದ ನೈಜ ಕೂಲಿಯನ್ನು ಕಾಪಾಡುವುದು. ಕಾಲಾನುಕ್ರಮದಲ್ಲಿ ಕಾರ್ಮಿಕರು ಹೊಂದಿರುವ ವೃತ್ತಿ ಕೌಶಲ್ಯಕ್ಕೆ ತಕ್ಕಂತೆ ವೇತನ ದರಗಳಲ್ಲಿ ವ್ಯತ್ಯಾಸಗಳನ್ನು ಕಾಪಾಡಿಕೊಂಡು ಬರುವುದು. ಕಾರ್ಮಿಕ ವರ್ಗವನ್ನು ಶೋಷಣೆಯಿಂದ ಪಾರು ಮಾಡುವುದು. ಉತ್ತೇಜನಕಾರಕ ಬಟವಾಡೆ ನೀತಿಯ ಅನುಸರಣೆ ಹಾಗೂ ಕಾರ್ಮಿಕ ವರ್ಗದ ಕೂಲಿಯನ್ನು ಉತ್ಪಾದನೆ ಹೆಚ್ಚಿದಂತೆ ಹೆಚ್ಚಿಸುವುದು. ಅಂದರೆ ಉತ್ಪಾದನೆ-ವೇತನ ಇವೆರಡಕ್ಕೂ ನೇರ ಸಂಬಂಧ ಕಲ್ಪಿಸುವುದು ಮುಂತಾದ ವಿಚಾರಗಳನ್ನು ಯೋಜನಾವಧಿಯಲ್ಲಿ ಜಾರಿಗೊಳಿಸಲು ಪ್ರಯತ್ನಿಸಿದ್ದಾರೆ.

೧೯೪೮ರಲ್ಲಿ ಭಾರತ ಸರ್ಕಾರವು ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆ ಕಾನೂನನ್ನು ಹೊರಡಿಸಿತು. ಈ ಕಾನೂನಿನ ರೀತ್ಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕನಿಷ್ಠ ವೇತನದ ಗರಿಷ್ಠ ಮಿತಿಯನ್ನು ದೈಹಿಕ ಶ್ರಮ ಹೆಚ್ಚು ಅವಶ್ಯವಿರುವ ಕೈಗಾರಿಕೆಗಳಲ್ಲಿ ನಿಗದಿಪಡಿಸಲು ಅಧಿಕಾರವನ್ನು ಹೊಂದಿದವು. ಇದೇ ಕಾನೂನು ಭಾರತ ಸಂವಿಧಾನದ ರಾಜ್ಯ ನಿರ್ದೇಶಕ ತತ್ವದ ಮೇರೆಗೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ಕೊಟ್ಟು ವ್ಯವಸಾಯ ರಂಗದಲ್ಲಿಯೂ ಕನಿಷ್ಠ ವೇತನವನ್ನು ನಿಗದಿಪಡಿಸುವಂತೆ ಮಾಡಿ, ಅವುಗಳ ಅಧಿಕಾರ ವ್ಯಾಪ್ತಿಗೊಳಪಡಿಸಿತು. ಇದೇ ವರ್ಷ ಸರ್ಕಾರ 'ನ್ಯಾಯ ವೇತನ ಮಂಡಳಿ' ಯೊಂದನ್ನು ನೇಮಿಸಿತು. (A Fair Wage Committee, ೧೯೪೮) ಈ ಸಮಿತಿಯು ಮೂರು ತೆರನಾದ ವೇತನ ಮಟ್ಟವನ್ನು ಸಲಹೆ ಮಾಡಿ ಅವುಗಳನ್ನು ವ್ಯವಸ್ಥಿತ ಕೈಗಾರಿಕಾ ಕ್ಷೇತ್ರದಲ್ಲಿ ಅನುಸರಿಸಲು ಕರೆ ನೀಡಿತು. ಆ ಮೂರು ವೇತನಮಟ್ಟಗಳು ಈ ಕೆಳಕಂಡಂತಿವೆ:

೧. ಜೀವನಾವಶ್ಯಕ ವೇತನ ಮಟ್ಟ: ಅಂದರೆ ಕಾರ್ಮಿಕ ವರ್ಗ ಉತ್ತಮವಾದ ನಾಗರೀಕ ಜೀವನವನ್ನು ನಡೆಸಲು ಸಾಕಾಗುವಂತಹ ವೇತನ.

೨. ನ್ಯಾಯವಾದ ವೇತನ: ಕಾರ್ಮಿಕನ ಕೆಲಸಕ್ಕೆ ತಕ್ಕಂತೆ ಯಾವ ವಿಧವಾದ ಶೋಷಣೆಗೂ ಅವನನ್ನು ಗುರಿ ಮಾಡದೆ ಕೂಲಿಕೊಡುವುದು ನ್ಯಾಯವಾದ ವೇತನಮಟ್ಟವಾಗಿರುತ್ತದೆ.

೩. ಕನಿಷ್ಠ ವೇತನ ಮಟ್ಟ: ಯಾವುದೇ ಕೆಲಸಕ್ಕೆ ಯಾವ ವ್ಯಕ್ತಿಯನ್ನೇ ನೇಮಿಸಿಕೊಂಡರೂ ಅದೇ ತೆರನಾದ ಕೆಲಸಕ್ಕೆ ಯಾವುದೇ ಉದ್ಯಮವನ್ನು ನಡೆಸುವ ಸಂಸ್ಥೆಗಳು ಕೊಡಬೇಕಾದ ಕನಿಷ್ಠ ಕೂಲಿದರ.

ಸರ್ಕಾರವು ಕಾರ್ಮಿಕ ವರ್ಗದ ನೈಜ ಕೂಲಿಯನ್ನು ಕಾಪಾಡುವುದಕ್ಕಾಗಿ ತುಟ್ಟಿಭತ್ಯ ನೀಡಲುಪಕ್ರಮಿಸಿತು. ತುಟ್ಟಿಭತ್ಯದ ಪ್ರಮಾಣವು ನೌಕರರ ಮೂಲ ವೇತನದ ಆಧಾರದ ಮೇಲೆ ನಿರ್ಧರಿಸಲ್ಪಡುತ್ತದೆ. ತುಟ್ಟಿಭತ್ಯವು ನೇರವಾಗಿ ಆವಶ್ಯಕ ಸರಕುಗಳ ಅನುಭೋಗಿ ಸೂಚ್ಯಂಕಕ್ಕೆ ಸಂಬಂಧಿಸಲ್ಪಟ್ಟಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ತುಟ್ಟಿಭತ್ಯದ ಏರಿಕೆ ಮತ್ತು ನೀಡಿಕೆ ವಿಚಾರದಲ್ಲಿ ತಮ್ಮ ತಮ್ಮ ಹಣಕಾಸಿನ ಸಂಪನ್ಮೂಲ ಮತ್ತು ಹೆಚ್ಚುವರಿ ತುಟ್ಟಿಭತ್ಯದ ಪ್ರಮಾಣ—ಇವುಗಳಿಗೆ ಅನುಗುಣವಾಗಿ ವರ್ತಿಸುತ್ತವೆ.

ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೈಗಾರಿಕಾ ರಂಗದಲ್ಲಿ ವೇತನ ಅಥವ ಕೂಲಿಯ ಹೊಂದಾಣಿಕೆಯು ಕೊಂಚಮಟ್ಟಿಗೆ ಬಿಗಿಯಾಗಿತ್ತು. ಎರಡನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ವೇತನವು ಕೊಂಚ ಮಟ್ಟಿಗೆ ಮೇಲ್ಮುಖವಾಗಿ ಏರಿಕೆಯಾಯಿತು. ಇಂತಹ ವೇತನ ಹೆಚ್ಚಳವು ಉತ್ಪಾದನೆ ವೃದ್ಧಿಸಿದ ಕೈಗಾರಿಕೆಗಳಲ್ಲಿ ಮಾತ್ರ ಸಾಧ್ಯವಾಯಿತು. ಈ ಕ್ರಮವು ಸರ್ಕಾರ ವೇತನವನ್ನು ಹೆಚ್ಚಿಸುವ ವಿಚಾರದಲ್ಲಿ ೧೯೫೧-೬೬ರ ಅವಧಿಯಲ್ಲಿ ಕಂಡುಬಂದ ಬಿಗಿ ನೀತಿಯನ್ನು ಸಡಿಲಗೊಳಿಸುವುದಕ್ಕೆ ನಿದರ್ಶನವಾಗಿದೆ. ಮೂರು ಮತ್ತು ನಾಲ್ಕನೇ ಪಂಚವಾರ್ಷಿಕ ಯೋಜನೆಗಳಲ್ಲಿ ವೇತನದ ಏರಿಕೆ

ಹಾಗೂ ಕಾರ್ಮಿಕ ವರ್ಗಕ್ಕೆ ಇತರೇ ಸೌಲಭ್ಯಗಳನ್ನು ಒದಗಿಸುವುದರಲ್ಲಿ ತಾತ್ಕಾಲಿಕ ವೇತನ ಮಂಡಳಿಗಳು ಪ್ರಮುಖವಾದ ಪಾತ್ರವಹಿಸಿದವು.

ಅವಶ್ಯಕತೆಯನ್ನು ಆಧರಿಸಿದ ಕನಿಷ್ಠ ವೇತನ ಮಟ್ಟ

ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ವೇತನ ನೀತಿಯ ವಿಚಾರದಲ್ಲಿ ಆದ ಮತ್ತೊಂದು ಪ್ರಮುಖ ಬೆಳವಣಿಗೆ ಎಂದರೆ ಕಾರ್ಮಿಕ ವರ್ಗದಿಂದ "ಅವಶ್ಯಕತೆಯನ್ನು ಪೂರೈಸುವ ಅಥವ ಆಧರಿಸಿದ ಕನಿಷ್ಠ ವೇತನ ಮಟ್ಟ"ವನ್ನು ಸರ್ಕಾರ ಮತ್ತು ಖಾಸಗಿ ಉದ್ದಿಮೆಗಾರರು ಪೂರೈಸುವಂತೆ ಬೇಡಿಕೆ ಸಲ್ಲಿಸಿದ್ದು. ಈ ವಿಚಾರವು ೧೫ನೇ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಚರ್ಚಿಸಲ್ಪಟ್ಟಿತು. ಕಾರ್ಮಿಕವರ್ಗವು ಗೌರವಪೂರ್ಣ ಜೀವನವನ್ನು ನಡೆಸಲು ಹಾಗೂ ದೇಶದಲ್ಲಿ ಕೈಗಾರಿಕಾ ಬಾಂಧವ್ಯ ಸುಮಧುರವಾಗಿರಲು "ಅವಶ್ಯಕತೆಯನ್ನು ಆಧರಿಸಿದ ಕನಿಷ್ಠ ವೇತನ ಮಟ್ಟ"ವು ಅನಿವಾರ್ಯವೆಂದು ಆ ಸಮ್ಮೇಳನ ಕರೆ ನೀಡಿತು. ಆ ಸಮ್ಮೇಳನವು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಂತಹ ವೇತನ ಮಟ್ಟದ ಪೂರೈಕೆಗಾಗಿ ಕರೆ ನೀಡಿತು:

೧. ಕೈಗಾರಿಕೆ ಅಥವ ಕೈಗಾರಿಕಾ ಘಟಕದ ವೇತನ ಪಾವತಿ ಮಾಡುವ ಅರ್ಹತೆ ಹಾಗೂ ಕಾರ್ಮಿಕರ ನಡುವಿನ ವೃತ್ತಿಕೌಶಲ್ಯದ ವ್ಯತ್ಯಾಸ.

೨. ಬೆಲೆ ಏರಿಕೆಯಿಂದ ಕಾರ್ಮಿಕರಿಗುಂಟಾಗುವ ನಷ್ಟವನ್ನು ತೊಡೆದು ಹಾಕುವುದು.

೩. ಕಾರ್ಮಿಕರು ಉದ್ಯಮದಿಂದ ಬರುವ ಲಾಭದಲ್ಲಿ ಪಾಲು ಪಡೆಯಲು ಅನುಕೂಲವಾಗುವಂತೆ ಸುಭದ್ರವಾದ ವ್ಯವಸ್ಥೆಯೊಂದರ ನಿರೂಪಣೆ.

ಅಲ್ಲದೆ ಈ ಸಭೆಯು "ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ ಮಟ್ಟ"ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿರ್ಧಾರವಾಗಬೇಕಲ್ಲದೆ, ದೇಶದಲ್ಲಿನ ಕೈಗಾರಿಕಾರಂಗದಲ್ಲಿ ವೇತನ ನಿರ್ಧರಿಸುವ ಎಲ್ಲಾ ಸಮಿತಿಗಳು ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕನಿಷ್ಠ ವೇತನವನ್ನು ನಿಗದಿಗೊಳಿಸಬೇಕೆಂದು ಒತ್ತಾಯ ಮಾಡಿತು:

(ಅ) ಕಾರ್ಮಿಕನ ಕುಟುಂಬದಲ್ಲಿ ಮೂರು ಜನ ಅನುಭೋಗಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಹಾಗೂ ಹೆಂಗಸರು ಮತ್ತು ಮಕ್ಕಳು ಗಳಿಸುವ ಕೂಲಿಯನ್ನು ಪರಿಗಣಿಸಬಾರದು.

(ಆ) ಆಹಾರದ ಅವಶ್ಯಕತೆಯ ವಿಚಾರವಾಗಿ ಸುಮಾರು ೨೭೦೦ ಕ್ಯಾಲರಿಯಷ್ಟು ಆಹಾರ ಎಲ್ಲ ಭಾರತೀಯರಿಗೂ ಇರಬೇಕು. ಇದನ್ನು ಪೂರೈಸಿಕೊಳ್ಳಲು ಕನಿಷ್ಠ ವೇತನವು ಸಹಕಾರಿಯಾಗಬೇಕು.

(ಇ) ಪ್ರತಿಯೊಬ್ಬ ಕಾರ್ಮಿಕನ ಕುಟುಂಬದಲ್ಲಿನ ಸದಸ್ಯರಿಗೂ ತಲಾ ೧೮ ಗಜದಂತೆ ಉಡುಪನ್ನು ಒದಗಿಸಬೇಕು. ಅಂದರೆ ಸರಾಸರಿಯಾಗಿ ಒಬ್ಬ ಕಾರ್ಮಿಕನ ಕುಟುಂಬದಲ್ಲಿ ೪ ಸದಸ್ಯರೆಂದು ಪರಿಗಣಿಸಿ ೭೨ ಗಜ ಸಾದಾ ಉಡುಪನ್ನು ಕೊಳ್ಳಲು ಕನಿಷ್ಠ ವೇತನ ಸಹಕಾರಿಯಾಗಬೇಕು.

(ಈ) ಕಾರ್ಮಿಕರ ವಸತಿಯ ವಿಚಾರವಾಗಿ ಸರ್ಕಾರವು ಕನಿಷ್ಠ ಬಾಡಿಗೆಯನ್ನು ಗೊತ್ತುಪಡಿಸಬೇಕು.

(ಉ) ಕಟ್ಟಿಗೆ, ಮನೆಯ ವಿದ್ಯುದ್ದೀಪದ ವ್ಯವಸ್ಥೆ ಮುಂತಾದ ಖರ್ಚುಗಳಲ್ಲಿನ ಶೇ. ೨೦ ಭಾಗವನ್ನು ಈ ಅವಶ್ಯಕತೆ ಆಧರಿಸಿದ ಕನಿಷ್ಠವೇತನ ಭರ್ತಿ ಮಾಡುವಂತಿರಬೇಕು.[2]

---

[2] Quoted by K. V. Iyer; "Financial Implications of Need based Minimum Wages" *Yojana*: Vol. XVIII: No. 7: Yojana Bhavan: New Delhi: 1st May 1974.

೧೫ನೇ ಭಾರತೀಯ ಕಾರ್ಮಿಕ ಸಭೆಯು ಈ ನಿರ್ಣಯವನ್ನು ಕೈಗೊಂಡ ತರುವಾಯ ಅನೇಕ ಸರ್ಕಾರಿ ಸಮಿತಿಗಳೂ, ಖಾಸಗಿ ಸಂಸ್ಥೆಗಳೂ, ಕಾರ್ಮಿಕ ಸಂಘ ಸಂಸ್ಥೆಗಳೂ ಮೇಲ್ಕಂಡ ನೀತಿ ಸಂಹಿತೆಯ ಆಧಾರದ ಮೇಲೆ "ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ ಮಟ್ಟ"ವನ್ನು ಹಣದ ರೂಪದಲ್ಲಿ ಲೆಕ್ಕಾಚಾರ ಮಾಡಲು ಪ್ರಯತ್ನಪಟ್ಟವು. ಈ ಸಮಿತಿ ಮತ್ತು ಸಂಸ್ಥೆಗಳ ಲೆಕ್ಕಾಚಾರಗಳು ಏಕರೂಪವಾಗಿರದೆ ಬೇರೆ ಬೇರೆ ಮೊಬಲಗನ್ನು ಸೂಚಿಸಿವೆ. ಈಗ ಇಲ್ಲಿ ಒಂದೆರಡು ಅತ್ಯಂತ ಇತ್ತೀಚಿನ ಸಮಿತಿಗಳ ಲೆಕ್ಕಾಚಾರಗಳನ್ನು ಉದಾಹರಿಸಲಾಗುವುದು.

ನೌಕರರ ಫೆಡರೇಷನ್‌ಗಳು ೧೫ನೇ ಭಾರತೀಯ ಕಾರ್ಮಿಕ ಸಮ್ಮೇಳನದ ನೀತಿ ಸಂಹಿತೆಯ ಪ್ರಕಾರ, ವಾರ್ಷಿಕ ಸರಾಸರಿ ಬೆಲೆಗಳನ್ನು ಗಮನದಲ್ಲಿರಿಸಿಕೊಂಡು, ೩೧ನೇ ಅಕ್ಟೋಬರ್ ೧೯೭೩ಕ್ಕೆ ಸಂಬಂಧಿಸಿದಂತೆ "ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ ಮಟ್ಟ"ವನ್ನು ಲೆಕ್ಕಿಸಲು ಪ್ರಯತ್ನಿಸಿದವು. ಈ ಲೆಕ್ಕಾಚಾರದ ಪ್ರಕಾರ ಅಂತಹ ಒಂದು ಕನಿಷ್ಠ ವೇತನದ ಮಟ್ಟವು ರೂ. ೨೨೨ಮತ್ತು ರೂ. ೨೯೫ಕ್ಕೆ ನಿಂತಿತು. ಇದೇ ಲೆಕ್ಕವನ್ನು ೧೯೭೭ನೇ ವರ್ಷಕ್ಕೆ ಹೊಂದಿಸಿ ಹೇಳುವುದಾದರೆ, ಇಂತಹ ವೇತನಮಟ್ಟವು ರೂ. ೨೮೯ ಮತ್ತು ೩೪೦ ಆಗುವುದು. ಈ ಲೆಕ್ಕಾಚಾರಕ್ಕೆ ಆಧಾರಭೂತವಾಗಿ ಅನುಭೋಗಿಗಳ ಬೆಲೆ ಸೂಚಿ ೨೫೨.೫ (೧೯೬೦ = ೧೦೦) ಅನ್ನು ಆರಿಸಿಕೊಳ್ಳಲಾಗಿತ್ತು. ೧೫ನೇ ಭಾರತೀಯ ಕಾರ್ಮಿಕ ಸಮ್ಮೇಳನದ ನೀತಿ ಸಂಹಿತೆಯ ಪ್ರಕಾರ, (೧೯೬೦ = ೧೦೦) ಮೂರನೇ ವೇತನ ಆಯೋಗವು 'ಅವಶ್ಯಕತೆ ಆಧರಿಸಿದ ಕನಿಷ್ಠವೇತನ ಮಟ್ಟ'ವನ್ನು ಲೆಕ್ಕಿಸಿದಾಗ, ಅದು ರೂ. ೩೦೪ ಮತ್ತು ರೂ. ೩೭೮ರ ಮಟ್ಟವನ್ನು ಕ್ರಮಬದ್ಧವಾಗಿ ೧೯೭೨ ಮತ್ತು ೧೯೭೭ನೇ ವರ್ಷಗಳಿಗೆ ನಿಗದಿ ಮಾಡಿತು. ಆದರೆ ೩ನೇ ವೇತನ ಆಯೋಗವು, ರೂ. ೨೨೨ ಅನ್ನು ಕನಿಷ್ಠ ವೇತನವನ್ನಾಗಿ ಜಾರಿಗೊಳಿಸಿದರೂ ಸಹ ಅದು ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಮೇಲೆ ದುಷ್ಪರಿಣಾಮವುಂಟು ಮಾಡುವುದು ಎಂದು ಅಭಿಪ್ರಾಯಪಟ್ಟಿತು. ಆದ್ದರಿಂದ ಅದು 'ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ ಮಟ್ಟ'ವನ್ನು ನಿರ್ಧರಿಸಲು ತನ್ನದೇ ಆದ ಕೆಲವು ಸೂತ್ರಗಳನ್ನು ಕಂಡುಹಿಡಿಯಿತು. ಅವು ಯಾವುವೆಂದರೆ

೧. ೧೯೬೮ರಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಹಾಗೂ ಆರೋಗ್ಯ ಸಮಿತಿಯು ಸಲಹೆ ಮಾಡಿದ ಸಸ್ಯಾಹಾರಿ ಆಹಾರ.

೨. ನೌಕರರ ಕುಟುಂಬದಲ್ಲಿನ ೩ ಜನ ವಯಸ್ಕ ಸದಸ್ಯರು.

೩. ಎರಡನೇ ಸೂತ್ರದಂತೆ ೩ ಜನರಿರುವ ಕಾರ್ಮಿಕ ಕುಟುಂಬವೊಂದಕ್ಕೆ ೧೬.೫ ಮೀಟರ್ ವರ್ಷವೊಂದಕ್ಕೆ ಉಡುಪು.

೪ ಪೂರ್ಣ ಸಂಬಳದ ಶೇ. 7½ಯಷ್ಟು ಮನೆ ಬಾಡಿಗೆ.

೫ ವಗೈರೆ ಖರ್ಚು ಶೇ. ೨೦ ಭಾಗ ಆತನ ಸಂಬಳದಲ್ಲಿ ತುಂಬಿರತಕ್ಕದ್ದು.[3]

ಈ ಮೇಲ್ಕಂಡ ಅಂಶಗಳಲ್ಲಿ ಸೇರಿಸಿರುವಷ್ಟು ಸರಕು ಮತ್ತು ಸೇವೆಯನ್ನು ಹೊಂದಲು ಬೇಕಾಗುವ ಕನಿಷ್ಠ ವೇತನವು, ೩ನೇ ವೇತನ ಆಯೋಗದ ಪ್ರಕಾರ ಮಾಹೆಯಾನ ರೂ. ೧೯೬.

೧೯೭೩ರಿಂದೀಚಿನ ಬೆಲೆಯೇರಿಕೆ ಮತ್ತು ಕಾರ್ಮಿಕ ಅಶಾಂತಿಯನ್ನು ಗಮನಿಸಿ ಕೇಂದ್ರ ಸರ್ಕಾರವು ೩ನೇ ವೇತನ ಆಯೋಗದ ಶಿಫಾರಸಿನ ಪ್ರಕಾರ ರೂ. ೧೯೬ ಅನ್ನು ಕನಿಷ್ಠ ವೇತನದ ರೂಪವಾಗಿ ಅಂಗೀಕರಿಸಿದೆ. ಆದರೆ ಇಂದು ದೇಶದಲ್ಲಿ ರಾಜ್ಯ ಸರ್ಕಾರಗಳ ಉದ್ಯಮಗಳಲ್ಲಿ ಮತ್ತು ಆಡಳಿತರಂಗದಲ್ಲಿ ಹಾಗೂ ಖಾಸಗೀ ವಲಯದ ಅನೇಕ ಕೈಗಾರಿಕಾ ಘಟಕಗಳಲ್ಲಿನ ಕಾರ್ಮಿಕರು ಈ ಕನಿಷ್ಠ ವೇತನವನ್ನೂ ಕೂಡ ಗಳಿಸುತ್ತಿಲ್ಲ.

ಕಡೆಯದಾಗಿ, ೧೫ನೇ ಭಾರತೀಯ ಕಾರ್ಮಿಕ ಸಮ್ಮೇಳನದ ನೀತಿ ಸಂಹಿತೆಯ ಪ್ರಕಾರ ರೂಪುಗೊಳ್ಳುವ 'ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ'ವನ್ನು ದೇಶದ ಪ್ರಸ್ತುತ ಸಮಯದಲ್ಲಿ ಯಾರಿಗೂ ನೀಡಲಾಗುವುದಿಲ್ಲ. ಏಕೆಂದರೆ,

[3] *Ibid.*

೧. ಮೇಲೆ ತಿಳಿಸಿದ ವೇತನಮಟ್ಟವು ಸರ್ಕಾರಕ್ಕೆ ಅತೀವವಾದ ಹಣಕಾಸಿನ ಮುಗ್ಗಟ್ಟನ್ನು ತಂದೊಡ್ಡುವುದು. ಅಲ್ಲದೆ ರಾಷ್ಟ್ರೀಯ ಕಾರ್ಮಿಕ ಸಮಿತಿಯ ಪ್ರಕಾರ, ವೇತನ ಮಟ್ಟವನ್ನು ನಿರ್ಧರಿಸುವ ಸಮಿತಿಗಳು, 'ಅವಶ್ಯಕತೆ' ಆಧರಿಸಿದ ಕನಿಷ್ಠ ವೇತನಮಟ್ಟ' ಎಂಬ ಪದವನ್ನೇ ನಿಷ್ಕ್ರಿಯಗೊಳಿಸಿವೆ. ಏಕೆಂದರೆ ಪ್ರಸ್ತುತ ಸಮಯದಲ್ಲಿ ಖಾಸಗಿ ಬಂಡವಾಳಗಾರರೂ ಕೂಡ ಈ ವೇತನ ಮಟ್ಟವನ್ನು ಭರಿಸಲಾರರು. ಹಾಗೂ ಇಂದಿನ ವೇತನ ಸಂಬಂಧಗಳನ್ನು ಸ್ವಲ್ಪವಾದರೂ ಬದಲಾಯಿಸಿದರೆ ಅದು ಹಣದುಬ್ಬರಕ್ಕೆ ಎಡೆಮಾಡಿಕೊಡುವುದು.

೨. ನಮ್ಮ ದೇಶದಲ್ಲಿ ಆವಶ್ಯಕ ಸರಕುಗಳ ಬೆಲೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆಬೇರೆ ರೀತಿಯದ್ದಾಗಿರುವುದರಿಂದ ೧೫ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಏಕರೂಪವಾದ ನೀತಿಸಂಹಿತೆಯ ಆಧಾರದ ಮೇಲೆ ಯಾವುದೇ ಕನಿಷ್ಠ ವೇತನ ಮಟ್ಟವನ್ನು ನಿರ್ಧರಿಸಲಾಗದು.

೩. ಅದೂ ಅಲ್ಲದೆ ಕೃಷಿ ಕಾರ್ಮಿಕರು, ಬೀಡಿ ಕಾರ್ಮಿಕರು, ಹೋಟೆಲ್, ಸಿನಿಮಾ, ಕಟ್ಟಡ ಕಟ್ಟುವ ಕೆಲಸಗಾರರು–ಮುಂತಾದವರು ಇಂದು ಯಾವುದೇ ವಿಶೇಷ ಸವಲತ್ತುಗಳಿಲ್ಲದೆ ಹಾಗೂ ವ್ಯವಸ್ಥಿತ ರಂಗದ ಕಾರ್ಮಿಕರಿಗಿಂತ ಅನೇಕ ರೀತಿಯಲ್ಲಿ ಶೋಷಣೆಗೀಡಾಗಿರುವುದು ಕಂಡು ಬರುತ್ತದೆ. ಇಂತಹ ಸಂದರ್ಭದಲ್ಲಿ ವ್ಯವಸ್ಥಿತ ರಂಗದ ಕಾರ್ಮಿಕರು ಉತ್ಪಾದನೆ ಹೆಚ್ಚಿಸುವತ್ತ ಗಮನ ನೀಡದೆ ಕೇವಲ ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಹವಣಿಸುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ. ಈಗ ರಾಜ್ಯ ಸರ್ಕಾರಗಳು ತೀವ್ರವಾಗಿ ಅವ್ಯವಸ್ಥಿತವಾಗಿ ಹಾಗೂ ಅನೇಕ ಕಡೆ ಚದುರಿ ಹೋಗಿರುವ ಖಾಸಗಿ ಹಾಗೂ ಕೃಷಿಕ್ಷೇತ್ರದ ಕಾರ್ಮಿಕರ ಏಳ್ಗೆಗೆ ಶ್ರಮಿಸಬೇಕಾಗಿದೆ. ಈ ದಿಸೆಯಲ್ಲಿ ಕರ್ನಾಟಕ ಸರ್ಕಾರವು ಇಪ್ಪತ್ತು ಮಂದಿ ಕಾರ್ಮಿಕರಿರುವ ಎಲ್ಲಾ ಉದ್ಯಮಗಳಿಗೂ ಇ.ಎಸ್.ಐ.ನ ಸೌಲಭ್ಯ ಕಲ್ಪಿಸಿದೆ. ಹಾಗೂ ಕನಿಷ್ಠ ವೇತನಮಟ್ಟವನ್ನು ಹೆಚ್ಚಿಸಿ, ಅದನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ವಿಮರ್ಶಿಸುವುದಕ್ಕೆ ಅವಕಾಶ ನೀಡಿ ಕಾನೂನನ್ನು ಜಾರಿಗೆ ತಂದಿದೆ.

ಏನೇ ಆಗಲಿ ೧೫ನೇ ಭಾರತೀಯ ಕಾರ್ಮಿಕ ಸಮ್ಮೇಳನದ 'ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ ಮಟ್ಟ'ವನ್ನು ದೀರ್ಘಕಾಲೀನ ಧ್ಯೇಯವನ್ನಾಗಿಸಿಕೊಂಡು, ಇಂದು ಕಾರ್ಮಿಕ ವರ್ಗವು ದೇಶದಲ್ಲಿ ಉತ್ಪಾದನೆ ವೃದ್ಧಿಸುವತ್ತ ಸಹಕರಿಸಬೇಕಾಗಿದೆ.

ಪ್ರಸ್ತುತ ವೇತನ ನೀತಿಯಲ್ಲಿನ ಕುಂದುಕೊರತೆಗಳು

ದೇಶದಲ್ಲಿ ಇದುವರೆಗೆ ಅನುಸರಿಸಲಾದ ವೇತನ ನೀತಿಯಲ್ಲಿ, ಕಾಲಾನುಕ್ರಮದಲ್ಲಿ ಅನೇಕ ತೊಡಕುಗಳು ಕಾಣಿಸಿಕೊಂಡು, ಅನೇಕ ರೀತಿಯ ಸಮಸ್ಯೆಗಳಿಗೆ ಎಡೆಕೊಟ್ಟವು. ಇಂತಹ ಪರಿಸ್ಥಿತಿಗೆ ಈ ಕೆಳಗೆ ಹೇಳಲಾಗಿರುವ ಅಂಶಗಳು ಬಹುಮಟ್ಟಿಗೆ ಕಾರಣವಾಗಿವೆ:

೧. ಕನಿಷ್ಠ ವೇತನವನ್ನು ನಿಗದಿಪಡಿಸುವಾಗಲಾಗಲಿ, ವೇತನ ಹಾಗೂ ಇತರೇ ಭತ್ಯಗಳನ್ನು ಏರಿಸುವಾಗಲಾಗಲಿ ಯಾವುದೇ ತೆರನಾದ ಏಕರೀತಿಯ ತತ್ವವನ್ನು ವೇತನ ಸಮಿತಿ ಮತ್ತು ಬೋರ್ಡ್‌ಗಳು ಅನುಸರಿಸಲಿಲ್ಲ. ಇದರಿಂದಾಗಿ ಸಮಾನ ಕೆಲಸಕ್ಕೆ ವಿವಿಧ ಉದ್ದಿಮೆಗಳ ನಡುವೆ ವಿವಿಧ ವೇತನ ಮಟ್ಟಗಳು ನಿಗದಿಪಡಿಸಲ್ಪಟ್ಟು ವೇತನದ ಅಂತರ ಕಂಡುಬಂದಿತು.

೨. ಕನಿಷ್ಠ ವೇತನ ಮಟ್ಟದ ಕಾನೂನನ್ನು ಪರಿಣಾಮಕಾರಿಯಾಗಿ ಅನುಸರಿಸಲಿಲ್ಲ. ಕಾರಣವೇನೆಂದರೆ, ಈ ಕನಿಷ್ಠ ವೇತನ ಮಟ್ಟವನ್ನು ೩ ಅಥವ ೫ ವರ್ಷಗಳಿಗೊಮ್ಮೆ ಅಂದಿನ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಪರಾಮರ್ಶಿಸಲಿಲ್ಲ. ಪರಾಮರ್ಶಿಸಿದರೂ ಕೂಡ ಅದರ ಕಾಲವು ಸುಮಾರು ೭-೮ ವರ್ಷಗಳಾಯಿತು. ಇದರಿಂದಾಗಿ ವೇತನಮಟ್ಟದಲ್ಲಿ ಅಂತರ ಕಂಡು ಬಂದಿತು.

೩. ಕನಿಷ್ಠ ವೇತನ, ಜೀವನಾವಶ್ಯಕ ವೇತನ, ನ್ಯಾಯ ವೇತನ ಹಾಗೂ ಅವಶ್ಯಕತೆ ಆಧರಿಸಿದ ಕನಿಷ್ಠ ವೇತನ ಮಟ್ಟ ಮುಂತಾದ ಪದಗಳು ಹೆಚ್ಚಾಗಿ ಬಳಸಲ್ಪಟ್ಟುದರಿಂದ, ವೇತನ ಮಟ್ಟವನ್ನು ನಿಷ್ಕರ್ಷಿಸುವವರಿಗೆ ಗೊಂದಲವುಂಟಾದುದೇ ಅಲ್ಲದೆ, ಅವುಗಳನ್ನು ವಾಸ್ತವವಾಗಿ ಅನುಸರಣೆಗೆ ತಂದಾಗ

ಉಂಟಾಗುವ ಹೆಚ್ಚಿನ ವೇತನದ ಹೊರೆಯನ್ನು ಕೇಂದ್ರ, ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಉದ್ಯಮಗಳು ಭರಿಸಲಾಗದಂತಾಗಿದೆ. ಇದರಿಂದಾಗಿ ಸರ್ಕಾರವು ವೇತನದ ವಿಚಾರದಲ್ಲಿರುವ ಆದರ್ಶ ಧ್ಯೇಯ ಮತ್ತು ಆರ್ಥಿಕತೆಯಲ್ಲಿರುವ ನೈಜ ಪರಿಸ್ಥಿತಿಯ ನಡುವೆ ಭೇದ ಉಂಟು ಮಾಡಲಾಗದೆ ತೊಳಲಾಡುವ ಪರಿಸ್ಥಿತಿಗೆ ಬಂದಿದೆ.

೪ ಬೆಲೆ ಏರಿಕೆ ತಡೆಗಟ್ಟುವಿಕೆ, ವೇತನ ಮಟ್ಟದಲ್ಲಿನ ಅಂತರ ತೊಡೆದು ಹಾಕುವಿಕೆ, ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆ ವೃದ್ಧಿ ಮುಂತಾದ ನೀಡಬೇಕಾದ ಗಮನ ಮತ್ತು ಮಹತ್ವಗಳನ್ನು ಅತ್ಯಂತ ನಿಕೃಷ್ಟವಾಗಿ ಕಾಣಲಾಯಿತು. ವೇತನ ಬೋರ್ಡುಗಳು, ಕೈಗಾರಿಕಾ ಟ್ರಿಬ್ಯೂನಲ್‌ಗಳು, ಕಾರ್ಮಿಕ ನ್ಯಾಯಾಲಯಗಳು, ಮತ್ತು ವೇತನ ಸಮಿತಿಗಳಿಗೆ ಕ್ರಮಬದ್ಧವಾದ ಯಾವುದೇ ನಿರ್ದಿಷ್ಟ ತತ್ವಗಳನ್ನನುಸರಿಸಲು ಸರ್ಕಾರದಿಂದ ಆದೇಶ ದೊರೆಯಲಿಲ್ಲ. ಹಾಗೂ ಆ ಸಮಿತಿಗಳಿಗೆ ದೊರೆತ ಆದೇಶಗಳು ತತ್ಕ್ಷಣದ ಸಮಸ್ಯೆಯನ್ನು ಮಾತ್ರ ನಿವಾರಿಸಲು ಅನುಕೂಲವಾಗುವಂತೆ ಇದ್ದುದು ದುರದೃಷ್ಟಕರವಾದುದಾಗಿದೆ.

ಈ ಮೇಲ್ಕಂಡ ಕುಂದುಕೊರತೆಗಳಿಂದಾಗಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲಿರುವ ಅದೇ ತೆರನಾದ ಕೆಲಸಕ್ಕೆ ನೀಡುವ ವೇತನದಲ್ಲಿ ಕಂಡು ಬರುವ ವ್ಯತ್ಯಾಸವಲ್ಲದೆ, ಖಾಸಗಿರಂಗದಲ್ಲೂ ಈ ಅಂತರವನ್ನು ಗಮನಿಸಬಹುದಾಗಿದೆ. ಹಾಗೂ ವ್ಯವಸ್ಥಿತವಲ್ಲದ ಕ್ಷೇತ್ರದಲ್ಲಿನ ೮೫ ಮಿಲಿಯನ್ ಕೃಷಿ ಕಾರ್ಮಿಕರು, ಕೂಲಿಗಾರರು, ಮುಂತಾದವರು ಅತ್ಯಂತ ಕಡಿಮೆ ಕನಿಷ್ಠವೇತನ ಪಡೆಯುತ್ತಿರುವರಲ್ಲದೆ, ಎಲ್ಲ ವಿಧವಾದ ಕಾರ್ಮಿಕ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಉದಾ: ಇವರಿಗೆ ಯಾವ ತೆರನಾದ ವಿಮೆ, ಪ್ರಾವಿಡೆಂಟ್ ಫಂಡ್ ಹಾಗೂ ಉಚಿತ ವೈದ್ಯಕೀಯ ಸೌಲಭ್ಯಗಳಿಲ್ಲ. ಕೊನೆಯ ಪಕ್ಷ ತಮ್ಮ ಕೆಲಸದ ಭದ್ರತೆ ಕೂಡ ಇಲ್ಲ.

ಈ ಮೇಲ್ಕಂಡ ವಿವರಗಳಿಂದ ಕಂಡುಬರುವ ಪ್ರಮುಖ ವಿಚಾರವೆಂದರೆ: ವ್ಯವಸ್ಥಿತ ಕೈಗಾರಿಕಾ ಕ್ಷೇತ್ರದಲ್ಲಿನ ವೇತನ ವ್ಯತ್ಯಾಸ, ವಿವಿಧ ಘಟಕಗಳ ವಿವಿಧ ಹುದ್ದೆಗಳ ನಡುವಿನ ಭಾರಿ ವೇತನ ವ್ಯತ್ಯಾಸ, ವ್ಯವಸ್ಥಿತ ಮತ್ತು ವ್ಯವಸ್ಥಿತವಲ್ಲದ ಕಾರ್ಮಿಕರ ವರಮಾನ ಗಳಿಕೆ ಮತ್ತು ಸೌಲಭ್ಯಗಳಲ್ಲಿನ ಅಂತರ ಅಸಹನೀಯವೆನಿಸುತ್ತದೆ. ಹಾಗೂ ಇದು ಸರ್ಕಾರದ ಇಂದಿನ ಗಮನ ತೀವ್ರತರವಾಗಿ ವ್ಯವಸ್ಥಿತವಲ್ಲದ ಕಾರ್ಮಿಕವರ್ಗದತ್ತ ಹೊರಳಬೇಕು ಎಂಬುದನ್ನು ತಿಳಿಸುತ್ತದೆ. ಅದೂ ಅಲ್ಲದೆ ಇದುವರೆಗೆ ದೇಶದಲ್ಲಿ ಅನುಸರಿಸಿದ ವೇತನ ನೀತಿಯು ಉದ್ಯೋಗಶೀಲತೆಯ ತತ್ವಕ್ಕಾಗಲಿ ಅಥವ ಉತ್ಪಾದನೆಗಾಗಲಿ ನೇರ ಸಂಬಂಧ ಹೊಂದಿದುದಾಗಿರಲಿಲ್ಲ ಎಂಬುದನ್ನೂ ತಿಳಿಸುವುದು.

ವೇತನ ನೀತಿ ಮತ್ತು ಸಮಗ್ರ ವರಮಾನ ನೀತಿ

ಕೂಲಿ ಮತ್ತು ಸಂಬಳಕ್ಕೆ ಸಂಬಂಧಿಸಿದ ಯಾವುದೇ ನೀತಿಯು ಸೂಕ್ತವಾದ ವರಮಾನ ನೀತಿಯಿಂದ ದೂರವಾಗಿ ಕೆಲಸ ನಿರ್ವಹಿಸಲು ಸಾಧ್ಯವಿಲ್ಲ. ಏಕೆಂದರೆ ಕೂಲಿ ಮತ್ತು ಸಂಬಳವು ವ್ಯವಸ್ಥಿತ ಮತ್ತು ವ್ಯವಸ್ಥಿತವಲ್ಲದ ರಂಗದಲ್ಲಿನ ಕಾರ್ಮಿಕರ ಏಕೈಕ ವರಮಾನ ಮೂಲವಾಗಿರುತ್ತದೆಯಲ್ಲದೆ, ದಿನೇ ದಿನೇ ವೃದ್ಧಿಯಾಗುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತ ರಂಗದ ನೌಕರರ ವರಮಾನದ ಮೂಲವಾಗಿರುವುದೂ ಅಷ್ಟೇ ಮಟ್ಟಿಗೆ ನಿಜ. ಆದ್ದರಿಂದ ವೇತನ ನೀತಿಯನ್ನು ರಾಷ್ಟ್ರದಲ್ಲಿ ಯಾವುದೇ ವರ್ಗದ ಕಾರ್ಮಿಕರ ನಡುವಿನ ಸಂಪತ್ತು ಮತ್ತು ವರಮಾನದಲ್ಲಿರುವ ಅಂತರವನ್ನು ಹೋಗಲಾಡಿಸಲು ಒಂದು ಪರಿಣಾಮಕಾರಿಯಾದ ಸಾಧನವಾಗಿ ಬಳಸಬಹುದು. ಇಲ್ಲಿ ಅನೇಕ ರೀತಿಯ ವರಮಾನದ ತತ್ವಗಳ ಮಧ್ಯೆ ಸಮನ್ವಯ ಅವಶ್ಯವೆನಿಸುತ್ತದೆ. ಈ ಕ್ರಮವು ವೇತನ ಮತ್ತು ವರಮಾನ ನೀತಿಯನ್ನು ಪರಿಣಾಮಕಾರಿಗೊಳಿಸುವುದಕ್ಕಾಗಿಯಷ್ಟೇ ಅಲ್ಲದೆ ದೇಶದ ಅರ್ಥವ್ಯವಸ್ಥೆ ಭದ್ರಬುನಾದಿಯ ಮೇಲೆ ನಿಲ್ಲಲೂ ಕೂಡ ಇಂದು ಬೇಕಾಗಿದೆ. ವರಮಾನ ಮತ್ತು ವೇತನ ನೀತಿಗಳೆರಡನ್ನೂ ಸೂಕ್ತವಾಗಿ ಸಮನ್ವಯಗೊಳಿಸುವಲ್ಲಿ ವರಮಾನವನ್ನು ಅದರ ಕಾರ್ಯಕಾರಿ ಮೂಲದ ಪ್ರಕಾರ ವಿಭಜಿಸಬೇಕು. ಅಂದರೆ, ಶ್ರಮಕ್ಕೆ ಸಂಬಂಧಪಟ್ಟಂತೆ ವೇತನ, ಗೇಣಿ, ಬಡ್ಡಿ, ಲಾಭ ಎಂಬುದಾಗಿ ವಿಂಗಡಿಸಬಹುದು.

ವರಮಾನ ನೀತಿಯು ದೇಶದ ಎಲ್ಲ ವರ್ಗಗಳ ಪ್ರಜೆಗಳ ಆರ್ಥಿಕ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಏಕೆಂದರೆ ವರಮಾನ ನೀತಿಯು ದೇಶದ ಸಂಪತ್ತಿನ ಹಂಚಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವುದು. ವರಮಾನ ನೀತಿಯು ಆರ್ಥಿಕ ಸಮಾನತೆ ತತ್ವ, ಆರ್ಥಿಕ ಬೆಳವಣಿಗೆ ಗತಿ, ಆರ್ಥಿಕ ಆವರ್ತಗಳು–ಮುಂತಾದವುಗಳೆಲ್ಲದರ ಮೇಲೂ ಪ್ರಭಾವ ಬೀರುವುದು. ನಮ್ಮ ದೇಶದಂತಹ ಮಿಶ್ರ ಅರ್ಥವ್ಯವಸ್ಥೆಯಲ್ಲಿ ಸಮಾಜವಾದೀ ಸಮಾಜ ಸೃಷ್ಟಿಯನ್ನು ಧ್ಯೇಯವಾಗಿ ಹೊಂದಿರುವಲ್ಲಿ ಸಂಪತ್ತಿನ ಹಂಚಿಕೆಯಲ್ಲಿನ ಅಸಮತೋಲನವನ್ನು ತೊಡೆದು ಹಾಕುವುದರ ಜೊತೆಗೆ ಉತ್ಪಾದನೆ ವೃದ್ಧಿಸುವತ್ತ ಸಹ ಗಮನ ನೀಡಬೇಕು. ಈ ಎರಡೂ ಧ್ಯೇಯಗಳನ್ನು ಕಾರ್ಯಗತಗೊಳಿಸಲು ಪರಿಣಾಮಕಾರಿಯಾದ ಸರ್ಕಾರದ ತತ್ವ ಹಾಗೂ ನಿರ್ದೇಶನದ ಆವಶ್ಯಕತೆ ಕಂಡು ಬರುತ್ತದೆ. ಇಂತಹ ಒಂದು ಸಾರ್ವತ್ರಿಕ ನೀತಿಯ ಅನುಸರಣೆಯಿಂದ ಮಾತ್ರ ಇದು ಸಾಧ್ಯ. ಇಲ್ಲಿ ಆರ್ಥಿಕ ಹಾಗೂ ರಾಜಕೀಯ ಧೋರಣೆಗಳು ಪರಸ್ಪರ ಮಿಳಿತಗೊಳ್ಳುವುದನ್ನು ಗಮನಿಸಬಹುದು.

ವೇತನ ಮತ್ತು ವರಮಾನ ನೀತಿಗಳು ಒಳಗೊಳ್ಳಬೇಕಾದ ಅಂಶಗಳು

ವರಮಾನ ನೀತಿಯನ್ನು ರೂಪಿಸುವಾಗ ವೇತನವು ಅದರ ಮುಖ್ಯವಾದ ಅಂಗವಾಗುವುದರಿಂದ, ವೇತನ ಮಟ್ಟವನ್ನು ಸರಿಯಾದ ಆರ್ಥಿಕ ನೀತಿಗಳಿಗನುಗುಣವಾಗಿ ನಿರ್ಧರಿಸಬೇಕು. ಹೆಚ್. ಎ. ಟರ್ನರ್ ರವರ ಪ್ರಕಾರ. "ವೇತನ ಮಟ್ಟವು ಆರ್ಥಿಕಾಭಿವೃದ್ಧಿಯ ಅವಶ್ಯಕತೆಯನ್ನು ಪೂರೈಸಬೇಕಾದರೆ, ವೇತನ ಮಟ್ಟದ ರಚನೆಯು ಕಾರ್ಮಿಕರಿಗೆ ಸಿಗುವ ಪ್ರತಿಫಲ ಹಾಗೂ ಉತ್ಪಾದನೆಯತ್ತ ಅವರ ಕಾಣಿಕೆಯ ನಡುವೆ ಸ್ಪಷ್ಟವಾದ ಸಂಬಂಧವನ್ನು ರೂಪಿಸಲೇಬೇಕು. ಹಾಗೂ ಅಂತಹ ವೇತನಮಟ್ಟವು ಉತ್ಪಾದನೆಯ ಒಟ್ಟು ಹೆಚ್ಚಳಕ್ಕೆ ಹಾಗೂ ಅರ್ಥವ್ಯವಸ್ಥೆಗೆ ವಿವಿಧ ತೆರನಾದ ಶ್ರಮಕ್ಕೆ ಇರುವ ನೈಜ ಮೌಲ್ಯದ ಆಧಾರದ ಮೇಲೆ ರೂಪಿತವಾಗಬೇಕು."[4] ವೇತನ ನೀತಿಯು ಉದ್ಯೋಗಾವಕಾಶವನ್ನು ವೃದ್ಧಿಗೊಳಿಸಬೇಕಲ್ಲದೆ, ಉದ್ಯೋಗಸ್ಥರು ಮತ್ತು ಉದ್ಯೋಗ ಪಡೆಯಲಿಚ್ಛಿಸುವ ಎಲ್ಲಾ ಶ್ರಮಗಾರರಿಗೂ ಪ್ರಯೋಜನಕಾರಿಯಾಗಿರಬೇಕು. ಏಕೆಂದರೆ ಕಾಲಾನುಕ್ರಮದಲ್ಲಿ ಅನುಭವಿ ಮತ್ತು ನುರಿತ ಕಾರ್ಮಿಕರು ಉನ್ನತ ಹುದ್ದೆಗಳನ್ನು ಹೊಂದಬೇಕಾಗುವುದು. ಇಂತಹ ವೇತನ ನೀತಿಯು ಸ್ಪಷ್ಟವಾಗಿ ಕಾರ್ಮಿಕ ವರ್ಗದ ಜೀವನ ಮಟ್ಟವನ್ನು ಉತ್ತಮಗೊಳಿಸಬೇಕಲ್ಲದೆ, ಅವರ ಸರಾಸರಿ ನೈಜ ಕೂಲಿ ಮಟ್ಟವನ್ನು ಸುಧಾರಿಸಬೇಕು. ಆಗ ಮಾತ್ರ ಕಾರ್ಮಿಕ ವರ್ಗ ಆರ್ಥಿಕಾಭಿವೃದ್ಧಿಯ ಪ್ರತಿಫಲವನ್ನು ಪಡೆಯಲು ಸಾಧ್ಯ. ಇಂತಹ ಯಾವುದೇ ನಿರ್ದಿಷ್ಟ ತತ್ವದ ಆಧಾರದ ಮೇಲೆ ಅವಲಂಬಿತವಾಗದ ವೇತನ ಏರಿಕೆ ನಮ್ಮ ದೇಶದಲ್ಲಾದಂತೆ ಹಣದುಬ್ಬರದಲ್ಲಿ ಪರ್ಯವಸಾನವಾಗುವುದು.

ದೇಶದಲ್ಲಿನ ಒಟ್ಟು ಕೂಲಿ ಸರಕುಗಳ ಉತ್ಪಾದನಾ ಮಟ್ಟ ಮತ್ತು ಕಾರ್ಮಿಕರು ಗಳಿಸುವ ಒಟ್ಟು ಕೂಲಿ ಮಟ್ಟಕ್ಕೆ ನೇರ ಸಂಬಂಧ ಕಲ್ಪಿಸಬೇಕು. ಏಕೆಂದರೆ ವೇತನದಲ್ಲಾಗುವ ಹೆಚ್ಚಳವು ಕೂಲಿ ಮತ್ತು ಭೋಗ ಸರಕುಗಳ ಬೇಡಿಕೆ ಹೆಚ್ಚಿಸುವುದು. ಕೂಲಿ ಸರಕುಗಳ ಬೇಡಿಕೆಯು ಭೋಗ ಸರಕುಗಳಿಗಿರುವ ಬೇಡಿಕೆಗಿಂತಲೂ ಹೆಚ್ಚಿನ ದರದಲ್ಲಿ ವೃದ್ಧಿಯಾಗುವುದು. ಹೇಗೆಂದರೆ ಪದೇ ಪದೇ ತುಟ್ಟಿಭತ್ಯ ಮತ್ತು ಇತರೇ ಭತ್ಯಗಳಲ್ಲಾಗುವ ಏರಿಕೆಯು ಬೆಲೆ ಏರಿಕೆಯ ಪರಿಣಾಮವಾಗಿರುತ್ತದೆ. ಕಾಲಾನುಕ್ರಮದಲ್ಲಿ ಯಾವುದೇ ವೇತನದ ಹೆಚ್ಚಳವು ಕೂಲಿ ಸರಕುಗಳಿಗೆ ಬೇಡಿಕೆ ವೃದ್ಧಿಸುವುದು. ಆದ್ದರಿಂದ ಒಟ್ಟು ಕಾರ್ಮಿಕರ ಸರಾಸರಿ ಅನುಭೋಗ ಪ್ರವೃತ್ತಿಯನ್ನು ಲೆಕ್ಕಿಸಿ ಅದನ್ನು ಕೂಲಿಮಟ್ಟದೊಡನೆ ಸಂಬಂಧಿಸಿದಾಗ, ಕೂಲಿ ಸರಕುಗಳಿಗೆ ಯಾವ ಪ್ರಮಾಣದಲ್ಲಿ ಬೇಡಿಕೆ ವೃದ್ಧಿಸುವುದು ಎಂಬ ಜ್ಞಾನ ಗೋಚರವಾಗುವುದು. ಈ ಸರಕುಗಳ ಪೂರೈಕೆಯಲ್ಲಿ ಯಾವುದೇ ಕೊರತೆ ಬೀಳದಂತೆ ಗಮನವಹಿಸಲು ಆಧಾರ ದೊರಕುವುದು. ಆಗ ಈ ಸರಕುಗಳ ವಿಧೇರ್ ಬೆಲೆ ಏರಿಕೆಯನ್ನು ತಡೆಗಟ್ಟಲು ಅವಕಾಶ ಲಭಿಸುತ್ತದೆ. ಹಾಗೂ ಬೆಲೆ ಏರಿಕೆಯಿಂದ ಉಂಟಾಗುವ ವೇತನ ಏರಿಕೆ ಬೇಡಿಕೆಗೂ ಸಹ ಕಡಿವಾಣ ಹಾಕುವುದಾಗಿದೆ.

---

[4] H. V. Turner : Wage Trends : Wage Policies of Collective Bargaining : The problems for UDc's : UN Publication : 1965

ಕನಿಷ್ಠ ವೇತನ ಮಟ್ಟ ನೀತಿಯು ಕೌಶಲ್ಯವಿಲ್ಲದ ಅನನುಭವಿ ಕಾರ್ಮಿಕರ ಉದ್ಯೋಗಾವಕಾಶವನ್ನು ವಿಸ್ತರಿಸುವಂತೆಯೂ. ಅಂತಹ ವಿಸ್ತರಣೆಯ ಗತಿಯೂ ಶೀಘ್ರವಾಗಿ ನಡೆಯುವಂತೆಯೂ ಇರಬೇಕು. ಇಂತಹ ಕಾರ್ಮಿಕರು ಕೆಲಸಕ್ಕೆ ಬೇಕಾದ ಕೌಶಲ್ಯ ಹಾಗೂ ಅನುಭವವನ್ನು ಕಾಲಕ್ರಮದಲ್ಲಿ ಹೊಂದಲು ಸಹಕಾರಿಯಾಗುವಂತೆ ಕನಿಷ್ಠ ವೇತನ ಮಟ್ಟದ ರಚನೆಯು ತರ್ಕಬದ್ಧವಾಗಿ ರೂಪುಗೊಳ್ಳಬೇಕು.

ಮೇಲೆ ಹೇಳಲಾದ ದಿಕ್ಕಿನಲ್ಲಿ ಕೆಲವು ಪರಿಹಾರಗಳನ್ನು ವೇತನ ನೀತಿಯ ಸಮಸ್ಯೆಗಳಿಗೆ ಸೂಚಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಇದರ ಜೊತೆಗೆ ರಾಷ್ಟ್ರೀಯ ವೇತನ ನೀತಿಯನ್ನು ರೂಪಿಸಲು ನೇಮಿಸಲಾದ ಚಕ್ರವರ್ತಿ ಸಮಿತಿಯ ಸಲಹೆಗಳನ್ನು ಕೊಡಲಾಗಿದೆ. ಚಕ್ರವರ್ತಿ ಸಮಿತಿಯು ಈಗಾಗಲೇ ಕೇಂದ್ರ ಸರ್ಕಾರಕ್ಕೆ ತನ್ನ ಮಧ್ಯಕಾಲೀನ ವರದಿಯಲ್ಲಿ ಹಲವು ರೂಪುರೇಷೆಗಳನ್ನು ನೀಡಿದೆ. ಈ ಸಮಿತಿಯು ವೇತನ ನೀತಿಯನ್ನು ರಾಷ್ಟ್ರೀಯ ವರಮಾನ ಮತ್ತು ಬೆಲೆಗಳೊಡನೆ ಸಮನ್ವಯಗೊಳಿಸುವುದನ್ನು ಧ್ಯೇಯವನ್ನಾಗಿ ಹೊಂದಿದೆ.

ಚಕ್ರವರ್ತಿ ಸಮಿತಿ ಸಲಹೆಗಳು

೧. ನಿರ್ದಿಷ್ಟ ಗತಿಯ ಬೆಲೆ ಸ್ಥಿರತೆ ಅರ್ಥಿಕಾಭಿವೃದ್ಧಿಯ ಹಾದಿ ಸುಗಮಗೊಳ್ಳಲು ಅವಶ್ಯಕ. ಬೆಲೆ ಸ್ಥಿರವಾಗಿರಬೇಕಾದರೆ ಬಾಡಿಗೆ, ಬಡ್ಡಿ ಹಾಗೂ ಗೇಣಿ–ಇವುಗಳಲ್ಲಿ ಅಧಿಕ ಏರಿಕೆ ಸಲ್ಲದು. ಏಕೆಂದರೆ ಈ ಎಲ್ಲ ಅಂಶಗಳೂ ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ ಉಂಟುಮಾಡುವುವು. ಪರಿಣಾಮವಾಗಿ ಕೈಗಾರಿಕೆಯ ಉತ್ಪಾದಿತ ಸರಕುಗಳ ಬೆಲೆಯೂ ಏರುವುದು. ಬೆಲೆ ಸ್ಥಿರತೆಯಿಂದಾಗಿ ಉತ್ಪಾದನಾ ವೆಚ್ಚ ಹೆಚ್ಚದು. ಕೈಗಾರಿಕೆಯ ಉತ್ಪಾದನಾ ಸಾಮರ್ಥ್ಯ ವೃದ್ಧಿಗೊಂಡು, ಅದರ ಅರ್ಧಭಾಗ ಸರಕುಗಳ ಬೆಲೆ ಇಳಿತಾಯದಲ್ಲಿ ಸ್ಪರ್ಧಾತ್ಮಕವಾದಾಗ ಅಂತಹ ಸರಕುಗಳಿಗೆ ಪ್ರಪಂಚ ಮಾರುಕಟ್ಟೆ ಲಭ್ಯವಾಗುತ್ತದೆ. ಬೆಲೆ ಸ್ಥಿರತೆಯಿಂದುಂಟಾಗುವ ಕಡಿಮೆ ವೆಚ್ಚ, ಕೈಗಾರಿಕೆಯ ಉತ್ಪಾದನಾ ಸಾಮರ್ಥ್ಯದ ವೃದ್ಧಿ–ಎರಡೂ ಕೂಡ ಅನಿವಾರ್ಯವಾಗಿ ಕೆಲವು ಕೈಗಾರಿಕೆಗಳಲ್ಲಾಗುವ ಬೆಲೆ ಏರಿಕೆಯನ್ನು ಸಮತೋಲಗೊಳಿಸುವುವು. ಅದ್ದರಿಂದ ನಿರ್ದಿಷ್ಟಗತಿಯ ಬೆಲೆ ಸ್ಥಿರತೆ ಅರ್ಥಿಕಾಭಿವೃದ್ಧಿಗೆ ಚೇತನದಾಯಕವಾದುದು.

೨. ದೇಶದಲ್ಲಿ ಪ್ರಸ್ತುತ ತುಟ್ಟಿಭತ್ಯೆ ನೀಡುತ್ತಿರುವುದನ್ನು ಗಮನಿಸಿದರೆ, ಈ ಕ್ರಮವು ಈಗಾಗಲೆ ಆಗಿರುವಂತೆ ಅತಿ ಅನಪೇಕ್ಷಿತ ಬೆಲೆ-ವೇತನದ ವಿಷವರ್ತುಲ (Wage-Price Spiral)ಕ್ಕೆ ದಾರಿ ಮಾಡಿಕೊಡುವುದು. ಅದ್ದರಿಂದ ತುಟ್ಟಿಭತ್ಯವನ್ನು ಪ್ರಾದೇಶಿಕ ಅನುಭೋಗ ಸೂಚ್ಯಂಕಕ್ಕೆ ಸಂಬಂಧಿಸಬೇಕು. ಏಕೆಂದರೆ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಜೀವನ ವೆಚ್ಚವು ವ್ಯತ್ಯಾಸವಾಗುತ್ತದೆ. ಹಾಗೂ ಈ ಮೊದಲೇ ಹೇಳಿದಂತೆ ಸರ್ಕಾರವು ಕೂಲಿ ಸರಕುಗಳ ಬೆಲೆ ಏರಿಕೆಯನ್ನು ತೀವ್ರಕ್ರಮಗಳನ್ನು ಕೈಗೊಂಡು ತಡೆಹಿಡಿಯಬೇಕು.

ನಮ್ಮ 'ದೇಶದಲ್ಲಿ ತುಟ್ಟಿಭತ್ಯವನ್ನು ಬೆಲೆ ಏರಿಕೆಯಿಂದ ನೈಜ ಕೂಲಿಯನ್ನು ರಕ್ಷಿಸಲು ನೀಡಲಾಗುತ್ತಿದೆ. ಚಕ್ರವರ್ತಿ ಸಮಿತಿಯು ಇನ್ನು ಮುಂದೆ ತುಟ್ಟಿಭತ್ಯವನ್ನು ನೀಡುವಾಗ ಈ ಕೆಳಗೆ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಒತ್ತಿ ಹೇಳಿದೆ.

(ಅ) ತುಟ್ಟಿಭತ್ಯವು ಮೂಲವೇತನದ ಆಧಾರದ ಮೇಲೆ ಶೇಕಡಾವಾರು ಪ್ರಮಾಣದಲ್ಲಿ ನಿರೂಪಿತವಾಗಬೇಕೇ ಹೊರತು ನಿರ್ದಿಷ್ಟವಾದ ಮೊತ್ತವಾಗಿರಬಾರದು.

(ಆ) ತುಟ್ಟಿಭತ್ಯದ ಶೇಕಡಾವಾರು ಪ್ರಮಾಣವು ಮೂಲವೇತನದ ಮೊತ್ತಕ್ಕೆ ಅನುಗುಣವಾಗಿ ಬದಲಾವಣೆ ಹೊಂದಬಹುದು. ಕನಿಷ್ಠ ವೇತನ ಪಡೆಯುವವರಿಗೆ ತುಟ್ಟಿಭತ್ಯದ ಪ್ರಮಾಣವು ಬೆಲೆ ಏರಿಕೆಗೆ ಸಮಪ್ರಮಾಣದ್ದಾಗಿರಬೇಕು. ಅಂದರೆ ಶೇ. ೧೦೦ ಪರಿಹಾರವಾಗಬೇಕು. ೧೦೦೦ ರೂಪಾಯಿಗಳಿಗಿಂತ ಮೇಲ್ಪಟ್ಟು ಮೂಲವೇತನ ಪಡೆಯುವವರಿಗೆ ಯಾವುದೇ ಸಂದರ್ಭದಲ್ಲೂ ಕೂಡ ತುಟ್ಟಿಭತ್ಯ ನೀಡಕೂಡದು. ಈ ಕ್ರಮವನ್ನು ಕೈಗೊಂಡಲ್ಲಿ ಮೂಲ ವೇತನದಲ್ಲಿನ ಭಾರೀ ಅಂತರವನ್ನು ಕಡಿಮೆ ಮಾಡಲು ಸಾಧ್ಯ.

(ಇ) ತುಟ್ಟಿಭತ್ಯವನ್ನು ಜೀವನ ಮಟ್ಟದ ಸೂಚ್ಯಂಕಕ್ಕೆ ಸಂಬಂಧಿಸಬೇಕು. ಜೊತೆಗೆ ಕಾರ್ಮಿಕರಿಗೆ ತುಟ್ಟಿಭತ್ಯವನ್ನು ನೀಡುವಾಗ ಎರಡು ಬಗೆಯ ಸೂಚ್ಯಂಕಗಳನ್ನು ಬಳಸುವುದು ಸೂಕ್ತ. ಏಕೆಂದರೆ ೩ ಮತ್ತು ೪ನೇ ದರ್ಜೆ ಕಾರ್ಮಿಕರ ಜೀವನಮಟ್ಟ ಸೂಚ್ಯಂಕ ರೂಪಿಸಿ ಆ ಮೂಲಕ ಬೆಲೆ ಏರಿಕೆಯುಂಟಾದಾಗ ಅವರಿಗೆ ಪೂರ್ಣ ಪ್ರಮಾಣದ ಪರಿಹಾರ ಒದಗಿಸಿ ಅವರುಗಳ ನೈಜ ಕೂಲಿ ರಕ್ಷಿಸಬಹುದು. ಅಂತೆಯೇ ಮ್ಯಾನೇಜಿರಿಯಲ್ ಹಾಗೂ ಇತರ ಉನ್ನತ ಹುದ್ದೆ ಹೊಂದಿರುವವರಿಗೆ ಬೇರೆ ಸೂಚ್ಯಂಕವನ್ನು ರೂಪಿಸಿ ಅವರಿಗೆ ಬೆಲೆ ಏರಿಕೆಯುಂಟಾದಾಗ ನೀಡುವ ಪರಿಹಾರದ ಪ್ರಮಾಣವನ್ನು ಕಡಿಮೆ ಮಾಡಬಹುದು. ಇಲ್ಲಿ ಗಳಿಕೆಯ ಆಧಾರದ ಮೇಲೆ ಕಾರ್ಮಿಕರನ್ನು ಮೂರು ಭಾಗವಾಗಿ ವಿಂಗಡಿಸಬಹುದು–ರೂ. ೨೫೦ಕ್ಕಿಂತ ಕಡಿಮೆ ಗಳಿಕೆ ಇರುವವರನ್ನು ಒಂದು ಗುಂಪಾಗಿಯೂ. ರೂ. ೨೫೦–೧೦೦೦ ಗಳಿಕೆ ಇರುವವರನ್ನು ಮತ್ತೊಂದು ಗುಂಪಾಗಿಯೂ, ಹಾಗೂ ರೂ ೧೦೦೦ಕ್ಕಿಂತ ಮೇಲ್ಪಟ್ಟು ವೇತನ ಪಡೆಯುವವರನ್ನು ಇನ್ನೊಂದು ಗುಂಪಾಗಿಯೂ ವರ್ಗೀಕರಿಸಬಹುದು. ಇದೇ ರೀತಿ ಬೇರೆ ತೆರನಾದ ಸೂಚ್ಯಂಕಗಳನ್ನು ದೈಹಿಕ ಶ್ರಮ ಬೇಕಾದ ಕೆಲಸಗಳಿಗೂ ಹಾಗೂ ಬೌದ್ಧಿಕ ಶ್ರಮ ಬೇಕಾಗುವ ಕೆಲಸಗಳಿಗೂ ಬಳಸುವುದು ಅತ್ಯಂತ ಸಮಂಜಸವೆನಿಸುವುದು.

(ಈ) ತುಟ್ಟಿಭತ್ಯ ನೀಡಿಕೆಯ ಪ್ರಶ್ನೆಯನ್ನು ಬೆಲೆಗಳಲ್ಲಿ ೫ ಪಾಯಿಂಟುಗಳ ಏರಿಕೆಯುಂಟಾದಾಗ ಮೂರು ತಿಂಗಳ ಚಾಲಿತ ಸರಾಸರಿ ಏರುಪೇರುಗಳನ್ನು ಹೊಸ ಸೂಚ್ಯಂಕದ ಪ್ರಕಾರ (೧೯೭೩–೭೪ ಮೂಲವರ್ಷವಾಗಿ ಆಧರಿಸಿ) ಪರಾಮರ್ಶಿಸಬಹುದು.

೩. ತರ್ಕಬದ್ಧವಾದ ರಾಷ್ಟ್ರೀಯ ವೇತನ ನೀತಿಯು ವೇತನ ರಚನೆಯಲ್ಲಿ ಭಾರೀ ಅಂತರವನ್ನು ಹೋಗಲಾಡಿಸಲು ಶಕ್ತವಾಗಿರಬೇಕು. ವೇತನ ರಚನೆಯಲ್ಲಿನ ಭಾರೀ ಅಂತರವನ್ನು ಈ ಕೆಳಗಿನ ಕ್ರಮಗಳ ಅನುಷ್ಠಾನದಿಂದ ಕ್ರಮೇಣವಾಗಿ ಹೋಗಲಾಡಿಸಬಹುದು:

(ಅ) ದೇಶದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕ್ರಮಕ್ಕನುಸಾರವಾಗಿ ಅತ್ಯಂತ ಕನಿಷ್ಠ ಮೂಲವೇತನ ಮಟ್ಟದಲ್ಲಿ ತುಟ್ಟಿಭತ್ಯದ ಒಟ್ಟು ಮೊತ್ತವು ಕನಿಷ್ಠ ಮೂಲ ವೇತನಕ್ಕೆ ಸಮವಾಗಿರುವುದೂ ಕೆಲವು ಸಂದರ್ಭಗಳಲ್ಲಿ ಹೆಚ್ಚಾಗಿರುವುದೂ ಕಂಡು ಬರುವುದು. ಆದ್ದರಿಂದ ಮೂಲವೇತನದಲ್ಲಿನ ಭಾರೀ ಅಂತರವನ್ನು ಹೋಗಲಾಡಿಸಲು ಸರ್ಕಾರ ತುಟ್ಟಿಭತ್ಯವನ್ನು ೧೯೭೩–೭೪ರ ಮಟ್ಟದ ಮೂಲವೇತನದೊಂದಿಗೆ ಸೇರಿಸಬೇಕಲ್ಲದೆ. ಕಾರ್ಮಿಕರ ಜೀವನ ಮಟ್ಟ ಅತ್ಯಂತ ದುಬಾರಿಯಾಗದಿರುವಂತೆ ಗಮನ ಹರಿಸುವುದು ಅಗತ್ಯ.

(ಆ) ಮೂಲವೇತನ ಮಟ್ಟಕ್ಕನುಸಾರವಾಗಿ ವಾರ್ಷಿಕ ವೇತನ ಹೆಚ್ಚಳವನ್ನು ಬೇರೆ ಬೇರೆ ಪ್ರಮಾಣದಲ್ಲಿ ಕೊಡುವುದರಿಂದಲೂ ಮೂಲವೇತನ ಮಟ್ಟದಲ್ಲಿನ ಅಂತರವನ್ನು ಕಡಿಮೆ ಮಾಡಬಹುದು. ಆದ್ದರಿಂದ ಅತಿ ಕಡಿಮೆ ವೇತನ ಪಡೆಯುವವರಿಗೆ ಹೆಚ್ಚು ವಾರ್ಷಿಕ ವೇತನ ಹೆಚ್ಚಳ ದರವನ್ನೂ. ಇದಕ್ಕಿಂತ ಇನ್ನೂ ಹೆಚ್ಚು ಗಳಿಕೆಯಿರುವವರಿಗೆ ವಾರ್ಷಿಕ ವೇತನ ಹೆಚ್ಚಳ ದರವನ್ನು ಕಡಿಮೆಗೊಳಿಸಬೇಕಲ್ಲದೆ ಒಂದು ನಿರ್ದಿಷ್ಟ ಮಟ್ಟಕ್ಕಿಂತ ಹೆಚ್ಚು ವೇತನ ಪಡೆಯುವವರಿಗೆ ವಾರ್ಷಿಕ ವೇತನ ಹೆಚ್ಚಳ ಕೊಡದು. ಇಂತಹ ಕ್ರಮದ ಅನೂಚಾನವಾದ ಅನುಸರಣೆಯಿಂದ ಮಾತ್ರ ಕಾಲಾನುಕ್ರಮದಲ್ಲಿ ಮೂಲವೇತನ ರಚನೆಯಲ್ಲಿನ ಭಾರೀ ಅಂತರವನ್ನು ಕೊನೆಗಾಣಿಸಿ. ತರ್ಕಬದ್ಧವಾದ ಮೂಲವೇತನದಲ್ಲಿನ ಅಂತರವನ್ನು ವಿವಿಧ ತೆರನಾದ ಕೆಲಸಗಳಿಗೆ ಬೇಕಾಗುವ ವೃತ್ತಿ ಕೌಶಲ್ಯಕ್ಕೆ

ಸಂಬಂಧಿಸಿ ವಿವಿಧ ಕೆಲಸಗಳ ನಡುವಿನ ವೃತ್ತಿಕೌಶಲ್ಯ–ವೇತನ ವ್ಯತ್ಯಾಸವನ್ನು ಕಾಪಾಡಿಕೊಂಡು ಬರಬಹುದು.

(ಇ) ವೃತ್ತಿ ಕೌಶಲ್ಯ ಮತ್ತು ವೇತನ ಮಟ್ಟದ ನಡುವಿನ ಅಂತರವನ್ನು ಕಾಪಾಡಿಕೊಂಡು ಬರಲು ಸಮಿತಿಗಳನ್ನು ನೇಮಿಸಬೇಕಲ್ಲದೆ. ಇಂತಹ ಸಮಿತಿಗಳು ವೇತನದ ಅಂತರವನ್ನು ತರ್ಕಬದ್ಧವಾಗಿ ರೂಪಿಸಲು ವಿವಿಧ ತೆರನಾದ ಕೆಲಸಗಳಿಗೆ ಬೇಕಾಗುವ ಅನುಭವ, ವಿದ್ಯಾರ್ಹತೆ, ಜವಾಬ್ದಾರಿ ನಿರ್ವಹಣಾ ಶಕ್ತಿ, ದೇಹದಾರ್ಢ್ಯತೆ ಮುಂತಾದ ಅಂಶಗಳನ್ನು ಆಧಾರವಾಗಿಟ್ಟುಕೊಳ್ಳಬೇಕು. ಈ ಅಂಶಗಳನ್ನು ಕೆಲಸ ಮಾಡುವ ಶಕ್ತಿಯನ್ನು ನಿರ್ಧರಿಸುವ ಅಂಶಗಳೆಂದು ಕರೆಯುವರು. ಮುಕ್ತ ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ನೀಡಿಕೆಗಳಿಗನುಸಾರವಾಗಿ ಕೆಲವು ಸಂದರ್ಭಗಳಲ್ಲಿ ಅತ್ಯಂತ ಜವಾಬ್ದಾರಿಯುತ ಹಾಗೂ ಕೌಶಲ್ಯ ಬೇಕಾಗುವ ಕೆಲಸಗಳಿಗೆ ಕಾರ್ಮಿಕರು ದೊರಕುವುದಿಲ್ಲ. ಆಗ ಅವರ ಸೇವೆಯನ್ನು ಪಡೆಯುವುದಕ್ಕಾಗಿ ಸ್ವಲ್ಪ ಹೆಚ್ಚು ವೇತನ ನೀಡುವುದು ಅನಿವಾರ್ಯವಾಗುತ್ತದೆ.

ಮೇಲೆ ತಿಳಿಸಲಾದ ವೇತನ ಮಟ್ಟ ರಚನೆಯನ್ನು ಸೃಜಿಸಿ, ಆರ್ಥಿಕ ಬೆಳವಣಿಗೆಗೆ ಅದು ಪೂರಕವಾಗಿರುವಂತೆ ಮಾಡಲು ವಿವಿಧ ಕೆಲಸಗಳನ್ನು ಅನುಕ್ರಮವಾಗಿ ವಿಂಗಡಣೆ ಮಾಡಬೇಕಾಗುವುದು. ಇಂತಹ ವಿಂಗಡಣಾ ಕ್ರಮವು ತಾಂತ್ರಿಕ, ಮ್ಯಾನೇಜಿರಿಯಲ್ ಹಾಗೂ ಆಡಳಿತರಂಗದಲ್ಲಿನ ನೌಕರರಿಂದ ಹಿಡಿದು ಕನಿಷ್ಠ ವೇತನವನ್ನು ಪಡೆಯುವ ಅನನುಭವಿ ಹಾಗೂ ದೈಹಿಕ ಶ್ರಮಗಾರರನ್ನೂ ಒಳಗೊಂಡಿರಬೇಕು. ಅನಂತರ ಕೈಗಾರಿಕೆ, ಆಡಳಿತ ವಿಭಾಗ ಇವುಗಳಿಗೆ ತಕ್ಕಂತೆ ವಿವಿಧ ಹುದ್ದೆಗಳನ್ನು ವರ್ಗೀಕರಿಸಿ ಅನುಕ್ರಮಗೊಳಿಸಬಹುದು. ಈ ಒಂದು ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದಲ್ಲಿ ಆರ್ಥಿಕಾಭಿವೃದ್ಧಿಗೆ ಪೂರಕವಾದ ವೃತ್ತಿ ಕೌಶಲ್ಯ ವೇತನ ಮಟ್ಟ ರಚನೆಯಲ್ಲಿನ ವ್ಯತ್ಯಾಸಗಳನ್ನು ತರ್ಕಬದ್ಧವಾಗಿ ರೂಪಿಸಿ ಅದನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗುವುದು.

೪. ಆರ್ಥಿಕಾಭಿವೃದ್ಧಿಯ ಲಾಭಾಂಶ (Growth Dividend)

ಆರ್ಥಿಕಾಭಿವೃದ್ಧಿಯ ಪ್ರತಿಫಲವು ವೇತನ ಕಾರ್ಮಿಕವರ್ಗಕ್ಕೆ ದೊರಕಲು ಯಾವುದಾದರೂ ಸೂಕ್ತ ವ್ಯವಸ್ಥೆಯನ್ನು ರೂಪಿಸುವ ಹೊಣೆ ರಾಷ್ಟ್ರೀಯ ವೇತನ ನೀತಿಯದ್ದಾಗಿರುತ್ತದೆ. ಈ ಕ್ರಮವನ್ನು ಚಕ್ರವರ್ತಿ ಸಮಿತಿ ತನ್ನ ಮಧ್ಯಕಾಲೀನ ವರದಿಯಲ್ಲಿ ಸೂಚಿಸಿದೆ. ಈ ಆರ್ಥಿಕಾಭಿವೃದ್ಧಿಯ ಲಾಭಾಂಶವು ಕಾರ್ಮಿಕನ ಮೂಲವೇತನದ ಶೇಕಡ ಭಾಗವಾಗಿರಬೇಕು. ಈ ಶೇಕಡಾ ಭಾಗವು ಕಾರ್ಮಿಕನ ಅಂದಾಜು ಮಾಡಿದ ಶೇಕಡ ಖಾಸಗಿ ಅನುಭೋಗ ಮಟ್ಟದ ಬೆಳವಣಿಗೆ ಆಧಾರದ ಮೇಲೆ ರೂಪುಗೊಳ್ಳಬೇಕು. ಇದನ್ನು ಗೊತ್ತುಪಡಿಸುವಾಗ ಕಾಲಾನುಕ್ರಮದಲ್ಲುಂಟಾಗುವ ಬೆಳವಣಿಗೆಗೆ ತಕ್ಕಂತೆ ಕಾರ್ಮಿಕ ವರ್ಗ ಪಡೆಯುವ (ಅ) ಮೂರು ಅಥವ ಐದು ವರ್ಷಗಳಿಗೊಮ್ಮೆ ಕನಿಷ್ಠ ವೇತನ ಏರಿಕೆ (ಆ) ಲಾಭದಲ್ಲಿನ ಕಾರ್ಮಿಕರ ಪಾಲು ಅಥವ ಬೋನಸ್–ಈ ಎರಡೂ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಪ್ರತಿ ೧೦ ವರ್ಷಗಳಿಗೊಮ್ಮೆ ಈ ಆರ್ಥಿಕಾಭಿವೃದ್ಧಿಯ ಲಾಭಾಂಶವನ್ನು ಮೂಲವೇತನದೊಂದಿಗೆ ಸೇರಿಸಬೇಕಲ್ಲದೆ. ಚಕ್ರವರ್ತಿ ಸಮಿತಿ ಪ್ರಕಾರ ಇಂತಹ ಕ್ರಮವು ಕಾರ್ಮಿಕರು ತಮ್ಮ ಗಮನವನ್ನು ಉತ್ಪಾದನೆ ಹೆಚ್ಚಿಸುವತ್ತ ನೀಡಲು ಸಹಾಯಕವಾಗುವುದಲ್ಲದೆ ವೇತನ ಮಟ್ಟದಲ್ಲಿನ ಭಾರಿ ಅಂತರವನ್ನು ನಿವಾರಿಸಲು ಸಹಕಾರಿಯಾಗುವುದು. ಆರ್ಥಿಕಾಭಿವೃದ್ಧಿಯ ಲಾಭಾಂಶವನ್ನು ಶೇ. ೧.೫ ಅಥವ ಶೇ. ೩ರ ದರದಲ್ಲಿ ಉತ್ಪಾದನೆ ಹೆಚ್ಚಾದಂತೆಲ್ಲಾ ನೀಡಿದರೆ ಅದೇನೂ ಬೆಲೆಯೇರಿಕೆಗೆ ಕಾರಣವಾಗದು.

೫. ಚಕ್ರವರ್ತಿ ಸಮಿತಿಯು ವೇತನ ಬೋರ್ಡುಗಳ ರಚನೆಯು ಯಾವುದೇ ವೇತನ ಮಟ್ಟವನ್ನು ನಿಗದಿಗೊಳಿಸಲು ಯಾವುದಾದರೂ ಕೈಗಾರಿಕೆ ಅಥವ ಅದರ ಘಟಕದ ಮಟ್ಟದಲ್ಲಿ ಉಪಯುಕ್ತ ಸಂಸ್ಥೆ

ಗಕಾಗಿ ಕೆಲಸ ಮಾಡಲು ಅರ್ಹವೆನಿಸುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆದುದರಿಂದ ರಾಷ್ಟ್ರೀಯ ವೇತನ ನೀತಿಯನ್ನು ಸ್ಪಷ್ಟವಾಗಿ ನಿರೂಪಿಸಿ, ಈ ಸಮಿತಿಗಳು ಅದನ್ನು ಜಾರಿಗೊಳಿಸುವಂತೆ ನಿರ್ಬಂಧ ಹೇರಿ, ಕೈಗಾರಿಕೆ ಅಥವ ಘಟಕದ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳಲು ಅವುಗಳಿಗೆ ಅವಕಾಶ ನೀಡುವುದು ಸಮಂಜಸವೆನಿಸುತ್ತದೆ.

೬. ಚಕ್ರವರ್ತಿ ಸಮಿತಿಯು ದೇಶದಲ್ಲಿ ವೇತನ ನೀತಿಯನ್ನು ಅನುಷ್ಠಾನಕ್ಕೆ ತರಲು ಹಾಗೂ ಅದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರಮಟ್ಟದಲ್ಲಿ ವೇತನ ಸಮಿತಿಯೊಂದರ ಅವಶ್ಯಕತೆಯನ್ನು ಮನಗಂಡಿದೆ. ಇಂತಹ ಸಮಿತಿಯು ಪೂರ್ಣಾವಧಿಯ ಸಂಸ್ಥೆಯಾಗಿ ಕೆಲಸ ಮಾಡಲು ಎಲ್ಲಾ ಸವಲತ್ತುಗಳನ್ನು ಕೊಟ್ಟು ಅದನ್ನು ಕೇಂದ್ರ ಸರ್ಕಾರದ ಕಾರ್ಮಿಕ ಖಾತೆಯ ನಿರ್ದೇಶನದಂತೆ ಕಾರ್ಯಮಾಡಲು ಅವಕಾಶ ಮಾಡಿಕೊಡಬೇಕು. ಅಂತೆಯೇ ರಾಜ್ಯ ಸರ್ಕಾರಗಳೂ ಕೂಡ ಅದೇ ತೆರನಾದ ಒಂದೊಂದು ಪೂರ್ಣಾವಧಿಯ ಸಮಿತಿಯನ್ನು ತಮ್ಮ ಕಾರ್ಮಿಕ ಖಾತೆಯಲ್ಲಿ ರೂಪಿಸಿಕೊಂಡು ಕೇಂದ್ರೀಯ ಸಮಿತಿಯ ಸಹಕಾರ ಹಾಗೂ ನಿರ್ದೇಶನದೊಂದಿಗೆ ಕೆಲಸ ಮಾಡುವುದು ಇಂದಿನ ಸಮಯದಲ್ಲಿ ಅತ್ಯಂತ ಅವಶ್ಯಕವೂ ಹಾಗೂ ಜರೂರಾಗಿ ಕೈಗೊಳ್ಳಬೇಕಾದ ಕ್ರಮವೂ ಆಗಿದೆ.[5]

೭. ಕಾರ್ಮಿಕರ ಶ್ರಮದಿಂದ ಉಂಟಾಗುವ ಉತ್ಪಾದನೆಯಲ್ಲಿನ ಹೆಚ್ಚಳಕ್ಕೂ ವೇತನದಲ್ಲಿನ ಯಾವುದೇ ಹೆಚ್ಚಳಕ್ಕೂ ನೇರವಾದ ಹಾಗೂ ಸ್ಪಷ್ಟವಾದ ಸಂಬಂಧ ಇರಬೇಕಾದುದು ಅವಶ್ಯಕ: ಇದರಿಂದಾಗಿ ಉತ್ಪಾದನೆಯಲ್ಲಿನ ಹೆಚ್ಚಳವನ್ನು ಗುರ್ತಿಸಲು ಯಾವುದೇ ಒಂದು ಕೈಗಾರಿಕೆ (ಉದಾ) ಸಕ್ಕರೆ ಕೈಗಾರಿಕೆ) ಮತ್ತು ಒಂದು ನಿರ್ದಿಷ್ಟ ಪ್ರದೇಶವನ್ನು (ಯಾವುದೇ ರಾಜ್ಯ, ಉದಾ: ಕರ್ನಾಟಕ. ಗಣನೆಗೆ ತೆಗೆದುಕೊಳ್ಳುವುದು ಸೂಕ್ತವಾದ ಕ್ರಮವೆನಿಸುತ್ತದೆ. ನಮ್ಮ ದೇಶದಲ್ಲಿ ಇಂತಹ ಕ್ರಮವು ಕಾರ್ಮಿಕ ವರ್ಗಕ್ಕೆ ಅವಶ್ಯವಾದ ಉತ್ತೇಜನ ನೀಡಿ ಉತ್ಪಾದನೆ ಹೆಚ್ಚಿಸುವುದಕ್ಕೆ ಅವಕಾಶ ಒದಗಿಸುವುದು. ಉತ್ಪಾದನೆಗೆ ಸಂಬಂಧಿಸಿದ ವೇತನದ ಹೆಚ್ಚಳವು ಕೆಲವು ಸೂಕ್ತ ಅಂಶಗಳ ಆಧಾರದ ಮೇಲೆ ಅವಲಂಬಿತವಾಗಬೇಕು. ಇಂತಹ ಅಂಶಗಳನ್ನು ರಿಸರ್ವ್ ಬ್ಯಾಂಕಿನಿಂದ ಬಿ. ಕೆ. ಮದನ್‌ರವರ ನೇತೃತ್ವದಲ್ಲಿ ನೇಮಕಗೊಂಡ ಸಮಿತಿಯು 'ವರಮಾನ ಹಾಗೂ ಬೆಲೆ ನೀತಿ' ಎಂಬ ಹೊತ್ತಿಗೆಯಲ್ಲಿ ಈ ಕೆಳಕಂಡಂತೆ ಸೂಚಿಸಿದೆ.

(ಅ) ಉತ್ಪಾದನೆಗೆ ಸಂಬಂಧಿಸಿದ ವೇತನ ಮಟ್ಟವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಒಪ್ಪತಕ್ಕದ್ದಾಗಿರಬೇಕಲ್ಲದೆ, ಅಂತಹದನ್ನು ಅವಕಾಶವಿರುವೆಡೆಗಳಲ್ಲೆಲ್ಲಾ ಜಾರಿಗೆ ತರಲು ಕ್ರಮ ತೆಗೆದುಕೊಳ್ಳಬೇಕು.

(ಆ) ಉತ್ಪಾದನೆಯ ಹೆಚ್ಚಳದಿಂದ ಉಂಟಾಗುವ ವೇತನದಲ್ಲಿನ ಹೆಚ್ಚಳದ ಪ್ರಮಾಣವು ಕಾರ್ಮಿಕನು ಪುನಃ ಉತ್ಪಾದನೆ ಹೆಚ್ಚಿಸುವತ್ತ ಆಸಕ್ತಿ ವಹಿಸಲು ಅನುವು ಮಾಡಿಕೊಡುವ ಪ್ರಮಾಣದಲ್ಲಿರಬೇಕು.

(ಇ) ಯಾವುದೇ ಕೈಗಾರಿಕಾ ಘಟಕದಲ್ಲಿ ಉತ್ಪಾದನೆ ಹೆಚ್ಚಿದಲ್ಲಿ, ಅಂತಹ ಹೆಚ್ಚಳವು ಆ ಘಟಕವು ತನ್ನ ಸಾಮರ್ಥ್ಯ ಮತ್ತು ದಕ್ಷತೆಯನ್ನು ರೂಢಿಸುವತ್ತ ಅದು ಮಾಡಿದ ಪ್ರಯತ್ನಕ್ಕೆ ತಕ್ಕ ಪ್ರತಿಫಲವನ್ನು ಒಂತಿರುಗಿಸಿಕೊಡುವುದಾಗಿರಬೇಕು.

(ಈ) ಕೈಗಾರಿಕಾ ಘಟಕವೊಂದರ ಉತ್ಪಾದನೆ ಹೆಚ್ಚಿದ ನಂತರ ಈ ಹೆಚ್ಚಳದಲ್ಲಿ ಕಾರ್ಮಿಕರ ಪಾಲು ಹಾಗೂ ಉದ್ಯಮಿಗಳ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಇವೆರಡನ್ನೂ ತೆಗೆದ ಬಳಿಕ ಉಳಿದ ಹೆಚ್ಚುವರಿಯು ಸಮಾಜದ ಏಳ್ಗೆಗೆ ಅಂದರೆ ಘಟಕದ

[5] Chakravarthy: Report of the Interim Committee on National Wage Policy: Main stream.

> ಪದಾರ್ಥದ ಬೆಲೆ ಇಳಿತಾಯ, ಸರಕಿನ ಗುಣಮಟ್ಟ ಸುಧಾರಿಸುವಿಕೆ ಹಾಗೂ ಹೆಚ್ಚು ಹೆಚ್ಚು ವಿದೇಶಿ ವಿನಿಮಯ ಗಳಿಕೆ-ಮುಂತಾದವುಗಳಲ್ಲಿ ಪರ್ಯವಸಾನ ವಾಗಬೇಕು.[6]

ದೇಶದಲ್ಲಿ ವಿವಿಧ ವರ್ಗಗಳ ವರಮಾನ ಮಟ್ಟವನ್ನು ರೂಪಿಸುವಾಗ ಉತ್ಪಾದನೆ ಜೊತೆಗೆ ಜನತೆ ಸಾಮಾಜಿಕವಾಗಿ ಉತ್ತಮಗೊಳ್ಳಲು ಭರಿಸಲೇಬೇಕಾದ ವೆಚ್ಚ ಹಾಗೂ ಆರ್ಥಿಕವಾಗಿ ದಕ್ಷತೆಯನ್ನು ಕಾರ್ಮಿಕ ವರ್ಗ ರೂಢಿಸಿಕೊಳ್ಳಲು ನೀಡಬೇಕಾದ ಉತ್ತೇಜನಕಾರಕವಾದ ಸಂದಾಯಗಳನ್ನೂ ಪೂರ್ಣವಾಗಿ ಕಡೆಗಣಿಸುವಂತಿಲ್ಲ. ಆದ್ದರಿಂದ ನಿರ್ದಿಷ್ಟವಾದ ಉತ್ಪಾದನಾ ಹಾಗೂ ಬೆಲೆ ನೀತಿಗಳು ವರಮಾನ ನೀತಿಯು ಪರಿಣಾಮಕಾರಿಯಾಗಬೇಕಾದರೆ ಅವಶ್ಯಕವೆನಿಸುವುವು. ಏಕೆಂದರೆ. ಬೆಲೆ ಏರಿಕೆಯು ವರಮಾನವನ್ನು (ಕೊಳ್ಳುವ ಶಕ್ತಿಯ ಮೂಲಕ) ಕುಗ್ಗಿಸುವುದೇ ಅಲ್ಲದೆ ವರಮಾನದ ವಿತರಣೆಯಲ್ಲಿ ಅಸಮತೋಲನವನ್ನುಂಟು ಮಾಡುವುದು. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೋಸ್ಕರವಾಗಿ ವರಮಾನ. ಬಂಡವಾಳ ಹೂಡಿಕೆ. ಉತ್ಪಾದನೆ ಹಾಗೂ ಬೆಲೆ ನೀತಿಗಳು ಒಂದಕ್ಕೊಂದು ಪೂರಕವಾಗಿ ಪರಸ್ಪರ ಧ್ಯೇಯಗಳನ್ನು ಅನುಷ್ಠಾನಕ್ಕೆ ತರಲು ಸುಭದ್ರವಾದ ಸಂಬಂಧವನ್ನು ಹೊಂದಿರಬೇಕು.

ಒಟ್ಟಿನಲ್ಲಿ ಹೇಳುವುದಾದರೆ. ಸರ್ಕಾರವು ಇನ್ನು ಮುಂದಾದರೂ ಅರೆ ಮನಸ್ಸಿನ ನೀತಿಗಳನ್ನು ಅನುಸರಿಸಿ ಸಮಸ್ಯೆಗಳನ್ನು ತೀವ್ರಗೊಳಿಸುವುದರ ಬದಲಾಗಿ ತರ್ಕಬದ್ಧವಾದ ವೇತನ ನೀತಿಯನ್ನು ವರಮಾನ. ಬಂಡವಾಳ ಹೂಡಿಕೆ. ಉತ್ಪಾದನೆ ಮತ್ತು ಬೆಲೆ ನೀತಿಗಳಿಗೆ ಪೂರಕವಾಗಿ ರಚಿಸಿ ಮತ್ತು ವೇತನ ನೀತಿಯನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಪೂರ್ಣಾವಧಿಯ ವೇತನ ಸಮಿತಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಟ್ಟದಲ್ಲಿ ನೇಮಿಸಿ ಕ್ರಮ ಕೈಗೊಂಡರೆ ಆಗ ರಾಷ್ಟ್ರೀಯ ವೇತನ ನೀತಿಯು ಯೋಜನೆಯ ಪ್ರಮುಖ ಧ್ಯೇಯವೆನಿಸಿದ ಬಡತನ ನಿರ್ಮೂಲನಕ್ಕೆ ಕೂಡ ತನ್ನದೇ ಆದ ಕಾಣಿಕೆಯನ್ನು ನೀಡುವುದಲ್ಲದೆ ದೇಶದಲ್ಲಿ ಮುಂದಿನ ಆರ್ಥಿಕಾಭಿವೃದ್ಧಿಯ ಗತಿಯನ್ನೂ ಕೂಡ ಏರುಪೇರಾಗಿಸದೆ. ಅದು ತೀವ್ರಗತಿಯಲ್ಲಿ ಸಾಗುವಂತೆ ಮಾಡಲು ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.

---

[6] B. K. Madan: Report on a Framework for Incomes and Price Policy: RBI Publication: New Delhi, 1967.

ತಿ. ತಾ. ಶರ್ಮ

ಕರ್ನಾಟಕ ವಾಸ್ತುಶಿಲ್ಪ[1]

ವ್ಯಾಪ್ತಿ

> "ಕರ್ನಾಟಕ ರಾಜ್ಯವು ಅತ್ಯುನ್ನತ ಪದವಿಯಲ್ಲಿದ್ದಾಗ ಉತ್ತರಕ್ಕೆ ನರ್ಮದಾನದಿಯ ವರೆಗೂ, ದಕ್ಷಿಣಕ್ಕೆ ಕಂಚಿಯ ವರೆಗೂ, ಪೂರ್ವಕ್ಕೆ ಮಹಾನದಿಯ ವರೆಗೂ, ಪಶ್ಚಿಮಕ್ಕೆ ಕರಾವಳಿಯವರೆಗೂ ಹರಡಿತ್ತೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಬಹಳ ಕಾಲದ ವರೆಗೂ ಲಾಟ ದೇಶವು (ಗುಜರಾತ್) ಕರ್ನಾಟಕ ರಾಜರ ಅಧೀನಕ್ಕೆ ಒಳಪಟ್ಟಿತ್ತೆಂದೂ, ಅಲ್ಲಿಯ ಕಟ್ಟಡಗಳಿಗೂ ಈಗಿನ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕಟ್ಟಡಗಳಿಗೂ, ಅನೇಕ ವಿಧದಲ್ಲಿ ಹೋಲಿಕೆ ಇರುವುದರಿಂದಲೂ, ಕರ್ನಾಟಕದ ವಾಸ್ತುಶಿಲ್ಪ ಮೂಲವು 'ಲಾಟದೇಶವಿರಬಹುದೆ' ಎಂಬ ಸಂದೇಹವು ಒದಗುತ್ತದೆ. ಯಾವುದೂ "ಇದಮಿತ್ಥಂ" ಎಂದು ಹೇಳುವ ಕಾಲ ಬಂದಿಲ್ಲ."[2]

ಹೀಗೆಂದು ಕೀರ್ತಿಶೇಷ ವಾಸ್ತುಶಿಲ್ಪಶಾಸ್ತ್ರವಿಶಾರದ ಬಿ. ವೆಂಕೋಬರಾಯರು ಹೇಳಿದರು.

ಪಶ್ಚಿಮ ಚಾಳುಕ್ಯರ ಅಥವಾ ಬಾದಾಮಿ ಚಾಳುಕ್ಯರ ವಂಶದ ಸೋದರ ಶಾಖೆಯೊಂದು ಲಾಟದೇಶದಲ್ಲಿ ಪ್ರಭುತ್ವ ಮಾಡಿತು. ಆ ಪ್ರಭುತ್ವ ಕೇವಲ ರಾಜಕೀಯವಾಗಿ ಮಾತ್ರ ಇರದೆ ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ದೃಷ್ಟಿಯಿಂದ ಆ ದೇಶದ ಜನಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರಿರಬೇಕು. ಲಾಟರ ವಾಸ್ತುಶಿಲ್ಪ, ರೂಪಕರ್ಮ, ಇತ್ಯಾದಿ ಕಲೆಗಳಲ್ಲಿ ಚಾಳುಕ್ಯ ಮುದ್ರೆ ಕಂಡು ಬಂದರೆ ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಆದ ಕಾರಣ ಕರ್ನಾಟಕದ ವಾಸ್ತುಶಿಲ್ಪದ ಮೂಲ ಲಾಟದೇಶವೋ, ಲಾಟದೇಶದ ವಾಸ್ತುಶಿಲ್ಪದ ಮೂಲ ಕರ್ನಾಟಕ ದೇಶವೋ, ಹೇಳುವುದು ಮೇಲೆ ಮೇಲೆ ಕಾಣುವಷ್ಟು ಸುಲಭವಲ್ಲ. ಲಾಟ–ಕರ್ನಾಟಕ ದೇಶಗಳೆರಡರ ಸಾಂಸ್ಕೃತಿಕ ಇತಿಹಾಸ ಪರಂಪರೆಯಲ್ಲಿ ಇದನ್ನು ಕಂಡುಕೊಳ್ಳಬೇಕಾಗಿದೆ. ಚಾಳುಕ್ಯರು ರಾಜಕೀಯವಾಗಿ ಪೂರ್ವಭಾಗದಲ್ಲಿ ಆಂಧ್ರಪ್ರದೇಶದ ಪ್ರಭುತ್ವ ಸ್ಥಾನ ಸಂಪಾದಿಸಿದರು. ಇಮ್ಮಡಿ ಪುಲಿಕೇಶಿಯ ಒಬ್ಬ ಸೋದರನೇ ಪೂರ್ವ ಚಾಳುಕ್ಯ ವಂಶದ ಮೂಲಪುರುಷ. ಆಂಧ್ರ ಜನಪದ ಜೀವನದ ಸಕಲ ಕ್ಷೇತ್ರಗಳಲ್ಲೂ ಕರ್ನಾಟಕ ಸಂಸ್ಕೃತಿಯ ಪ್ರಭಾವ ಕಂಡುಬರುತ್ತದೆ. ಇಮ್ಮಡಿ ಪುಲಿಕೇಶಿಯ ಮತ್ತೊಬ್ಬ ಸೋದರನೇ ಲಾಟ ಅಥವಾ ಸೌರಾಷ್ಟ್ರ ಚಾಳುಕ್ಯರ ಮೂಲಪುರುಷ. ಈ ರಾಜಕೀಯವಾದ ಚಲನದ ಪರಿಣಾಮ ಸಹಜವಾಗಿ ಸೌರಾಷ್ಟ್ರ ಜನಪದ ಜೀವನದ

---

1 ಇದು ದಿವಂಗತ ತಿ. ತಾ. ಶರ್ಮರು ಬಿಟ್ಟು ಹೋಗಿರುವ ಬರೆಹಗಳ ರಾಶಿಯಲ್ಲಿ ಒಂದು. ಲೇಖನ ಅಸಂಪೂರ್ಣವಾಗಿಯೇ ಉಳಿದಿದೆ. ಆದರೂ ಇದರ ಉಪಯುಕ್ತತೆಯನ್ನು ಗಮನಿಸಿ ಇಲ್ಲಿ ಇದನ್ನು ಪ್ರಕಟಿಸಲಾಗುತ್ತಿದೆ. ಪ್ರಕಟಣೆಗಾಗಿ ಹಸ್ತಪ್ರತಿ ಕಳುಹಿದ ಶ್ರೀಮತಿ ರಾಜಮ್ಮನವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

2 ಕನ್ನಡ ನುಡಿ" ವಿಶೇಷ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು

ನಾನಾ ಕ್ಷೇತ್ರಗಳಲ್ಲಿ ಕಂಡು ಬರುವುದರಲ್ಲಿ ಆಶ್ಚರ್ಯವೇನಿಲ್ಲ. ಆದಕಾರಣ ಲಾಟದ ವಾಸ್ತುಶಿಲ್ಪ ಮೂಲವನ್ನು ಕರ್ಣಾಟಕದಲ್ಲಿ ಕಾಣುವುದಾದರೆ ಆಶ್ಚರ್ಯವೇನೂ ಇಲ್ಲ.

ಕರ್ನಾಟಕ ಶೈಲಿಯ ಮೂಲ

ಸ್ವತಂತ್ರ ದೇವಾಲಯಗಳು ಮೊದಲು ದಕ್ಷಿಣ ಭಾರತದಲ್ಲಿ ಕಾಣಿಸಿಕೊಂಡದ್ದು ಐಹೊಳೆಯಲ್ಲಿ. ದೇವಾಲಯ ನಿರ್ಮಾಣದ ಪ್ರಥಮ ಪ್ರಯತ್ನಗಳು. ಪ್ರಯೋಗಗಳು. ನಡೆದದ್ದೂ ಇಲ್ಲಿಯೇ. ಉತ್ತರ ಮತ್ತು ದಕ್ಷಿಣ ಭಾರತದ ಶಿಲ್ಪಕಲೆಯ ಚಾತುರ್ಯಗಳನ್ನು ಅಕ್ಕಪಕ್ಕಗಳಲ್ಲಿ ಕಾಣುವುದು ಇಲ್ಲಿಯೇ. ಮತ್ತು ದಕ್ಷಿಣ ಭಾರತದ ಶಿಲ್ಪಿಗಳ ಮಿಲನವು ಹೇಗೆ ನಡೆಯಿತು, ಒಂದು ಮೂರನೆಯ ದಾದ ಕರ್ಣಾಟಕ ಶಿಲ್ಪವು ಹೇಗೆ ಹುಟ್ಟಿತೆಂಬುದನ್ನು ಕಾಣುವುದೂ ಇಲ್ಲಿಯೇ."[3]

ವೆಂಕೋಬರಾಯರ ಈ ಮಾತಿನಲ್ಲಿ ಅಡಗಿರುವ ಅಪೂರ್ವ ವಿಚಾರಗಳನ್ನು ಕುರಿತು ವಿದ್ವಾಂಸರು. ವಿಚಾರಪರರು. ಕಲಾ ವಿಮರ್ಶಕರು. ಪರೀಕ್ಷೆ ಮಾಡಬೇಕು. ರಾಯರು ವಿದ್ವಾಂಸರು: ವಿಶ್ವವಿದ್ಯಾನಿಲಯ ದಲ್ಲಿ ವಾಸ್ತುಶಿಲ್ಪ ಶಾಸ್ತ್ರವನ್ನು ಅಧ್ಯಯನ ಮಾಡಿದವರು. ಪ್ರಾಚ್ಯ ವಾಸ್ತುವನ್ನು ವಿಮರ್ಶಾ ದಾಷ್ಟಿ ಯಲ್ಲಿ ತಾಂತ್ರಿಕ ಶಾಖಾಧಿಕಾರಿಗಳಾಗಿದ್ದವರು. ಕರ್ಣಾಟಕದಲ್ಲೆಲ್ಲ ಸಂಚಾರ ಮಾಡಿ, ನೂರಾರಲ್ಲ ಸಾವಿರಾರು ದೇವಾಲಯಗಳ ವಾಸ್ತುಶಿಲ್ಪ ವೈವಿಧ್ಯ. ವೈಭವ. ರಹಸ್ಯ. ತಾಂತ್ರಿಕ ಚಮತ್ಕಾರ, ಹೊದ ಲಾದವುಗಳನ್ನು ಶೋಧಿಸಿದವರು. ಅದ ಕಾರಣ ಅವರು ಹೇಳುವ ಒಂದೊಂದು ಮಾತಿಗೂ ವಿಶೇಷ ಬೆಲೆಯುಂಟು.

ಅಂದರೆ ಐಹೊಳೆಯಲ್ಲಿರುವ ನಾನಾ ದೇವಾಲಯಗಳ ಪೂರ್ಣ ಅಧ್ಯಯನ ಮಾಡಬೇಕು. ಅಲ್ಲಿನ ಅವಶೇಷಗಳೊಂದೊಂದನ್ನೂ ಎಚ್ಚರಿಕೆಯಿಂದ ಪರೀಕ್ಷಿಸಬೇಕು. ಈ ಅಧ್ಯಯನ. ಈ ಪರೀಕ್ಷೆ. ವಿಪುಲರ ನಾಯಕತ್ವದಲ್ಲಿ. ಶಾಸ್ತ್ರೀಯವಾಗಿ. ನಿಷ್ಪಕ್ಷಪಾತ ವಾತಾವರಣದಲ್ಲಿ. ಸಾವಕಾಶವಾಗಿ ನಡೆಯ ಬೇಕು. ಆಗ ಆರ್ಯಾವರ್ತ, ದಕ್ಷಿಣಾಪಥಗಳೆರಡರ ವಾಸ್ತುಶಿಲ್ಪ ಮಾರ್ಗಗಳ ಮಿಳನ ಮಹಾಕಾರ್ಯ ನಡೆದದ್ದು ಕರ್ಣಾಟಕದಲ್ಲಿ. ಐಹೊಳೆಯಲ್ಲಿ. ಎಂಬುದು ನಿರ್ಣಯವಾಗಬೇಕು. ದಕ್ಷಿಣ ಭಾರತದಲ್ಲಿ 'ದೇವಾಲಯ' ಎಂಬ ರಚನೆ ರೂಪುಗೊಂಡದ್ದು ಐಹೊಳೆಯಲ್ಲಿ ಎಂಬುದೂ ನಿರ್ಣಯವಾದೀತು. ಇಷ್ಟು ಮಾತ್ರವೇ ಅಲ್ಲ. ಉತ್ತರ ಭಾರತ, ದಕ್ಷಿಣ ಭಾರತದ. ವಾಸ್ತುಶಿಲ್ಪ ಮಾರ್ಗಗಳ ಮಿಳನ ಪ್ರಯೋಗ ಫಲವೇ "ಕರ್ಣಾಟಕ ವಾಸ್ತುಶಿಲ್ಪ" ಮಾರ್ಗವೆಂಬುದೂ ಸ್ಥಿರಪಡುವುದರಲ್ಲಿ ಸಂದೇಹವಿಲ್ಲ. ಈ "ಕರ್ಣಾಟಕ ಮಾರ್ಗ"ವನ್ನೇ ಕೆಲವರು "ಚಾಳುಕ್ಯ ಮಾರ್ಗ"ವೆಂದು ಕರೆದರು. ಮತ್ತೆ ಕೆಲವರು "ಹೊಯ್ಸಳ ಮಾರ್ಗ"ವೆಂದು ಕರೆದರು. ಇನ್ನೂ ಕೆಲವರು "ಮೈಸೂರು ವಾಸ್ತುಶಿಲ್ಪ"ವೆಂದೂ ಹೆಸರಿಟ್ಟರು. ಈ ಮೂರೂ ಹೆಸರುಗಳಲ್ಲೂ ಒಂದೊಂದು ರೀತಿಯ 'ಮಿತಿ' ಕಂಡು ಬರುತ್ತದೆ. "ಕರ್ಣಾಟಕ ಮಾರ್ಗ" ಎಂಬ ಹೆಸರು ವ್ಯಾಪಕವಾಗಿದೆ.

ಕಲ್ಪನೆಗಳ ಕರ್ತರು ಯಾರು ?

ಇದೇ ಸಮಯದಲ್ಲಿ 'ಕಲ್ಮನೆ'ಗಳನ್ನು–ಗುಹಾಂತರ್ದೇವಾಲಯಗಳನ್ನು ಕುರಿತ ಸಮಸ್ಯೆಯ ಪರಿಹಾರವೂ ಆಗಬೇಕಾಗಿದೆ. ನಮ್ಮವರು ಗುಹಾಂತರ್ದೇವಾಲಯಗಳನ್ನು 'ಕಲ್ಮನೆ'ಗಳೆಂದು ಕರೆ ದಿದ್ದಾರೆ. ಈ 'ಕಲ್ಮನೆ'ಗಳು ದಕ್ಷಿಣ ದೇಶದಲ್ಲಿ ಅಸಂಖ್ಯಾತವಾಗಿವೆ. ಈ ಕಲ್ಮನೆಗಳ ಕಾಮಗಾರಿ ಮೊದಲು ಎಲ್ಲಿ ಆರಂಭವಾಯಿತು? ಆರಂಭಿಸಿದವರು ಯಾರು? ಆರ್ಯಾವರ್ತದವರೆ? ದಕ್ಷಿಣಾಪಥ ದವರೆ?

ಡಾ. ಜೊವೆರೊ ಡುಬ್ರೆಯಾಲ್ ಎಂಬ ಫ್ರೆಂಚ್ ವಿದ್ವಾಂಸರು ಪಾಂಡಿಚೆರಿಯಲ್ಲಿದ್ದುಕೊಂಡು ದಕ್ಷಿಣ ಭಾರತದ ಇತಿಹಾಸ. ವಾಸ್ತುಶಿಲ್ಪ. ಚಿತ್ರಕರ್ಮ, ಮೊದಲಾದವುಗಳ ಅಧ್ಯಯನ. ಸಂಶೋಧನಾ ಕಾರ್ಯದಲ್ಲಿ ಅತಿಶಯ ಆಸಕ್ತಿ ತೋರಿಸಿ. ಕೆಲಸಮಾಡಿದ್ದಾರೆ. ಪಲ್ಲವರನ್ನೂ ಕುರಿತು ವಿಶಿಷ್ಟ ರೀತಿಯ

3 ಮೈಸೂರು ದೇಶದ ವಾಸ್ತುಶಿಲ್ಪ, ಪುಟ. ೬೬

ಕೆಲಸ ಮಾಡಿದ್ದಾರೆ. ಗ್ರಂಥಗಳನ್ನು ರಚಿಸಿದ್ದಾರೆ. ಇವರ ಅಭಿಪ್ರಾಯದಲ್ಲಿ ಮಹೇಂದ್ರವರ್ಮ ಪಲ್ಲವನೇ (ಕ್ರಿ.ಶ. ೬೦೦–೬೩೦) ಗುಹಾಂತರ್ದೇವಾಲಯಗಳನ್ನು ನಿರ್ಮಿಸುವುದರಲ್ಲಿ ಮೊದಲಿಗ[4]

ಭಾರತ ಸರಕಾರದ ಪ್ರಾಚೀನ ಲಿಪ್ಯನ್ವೇಷಣ ಶಾಖೆಯಲ್ಲಿ ದೀರ್ಘಕಾಲ ಸೇವೆಸಲ್ಲಿಸಿದ ಖ್ಯಾತ ಇತಿಹಾಸ ಸಂಶೋಧಕರಾದ ಶ್ರೀ ಕೆ. ವಿ. ಸುಬ್ರಹ್ಮಣ್ಯ ಅಯ್ಯರವರೂ ಸಹ ಫ್ರೆಂಚ್ ವಿದ್ವಾಂಸರಿಗಿಂತ ಮೊದಲೇ ದಕ್ಷಿಣ ಭಾರತದ 'ಕಲ್ಮನೆ'ಗಳ ಕೆಲಸ ಮಾಡಿದವರು ಪಲ್ಲವರೆಂಬುದಾಗಿ ಅಭಿಪ್ರಾಯಪಟ್ಟಿದ್ದರು. ಆದರೆ ಮಹೇಂದ್ರವರ್ಮನೇ ಈ ಕೆಲಸವನ್ನು ಮಾಡಿಸಿದವರಲ್ಲಿ ಮೊದಲಿಗನೆಂದು ಹೇಳಲಿಲ್ಲ.[5] -

ಪಶ್ಚಿಮ ಕರಾವಳಿಯ ನಾನಾ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದವರು ಯಾರು? ಅಜಂತ. ಎಲ್ಲೋರ. ಐಹೊಳೆ. ಬಾದಾಮಿ. ಮೊದಲಾದ ಕಡೆಯ ಕಲ್ಮನೆಗಳ ಜಗದಾಶ್ಚರ್ಯಕರವಾದ ಕೆಲಸಗಳನ್ನು ಮಾಡಿಸಿದವರು ಯಾರು? ಯಾವ ಕಾಲದಲ್ಲಿ, ಯಾರ ಕಾಲದಲ್ಲಿ, ಈ ಕಲ್ಲಿನ ಕಲಾಗಾರಗಳ ಸೃಷ್ಟಿಯಾಯಿತು? ಸತ್ಯಾನ್ವೇಷಣದ ಏಕೈಕ ಧ್ಯೇಯ–ದೃಷ್ಟಿಯಿಂದ, ದಕ್ಷಿಣ ಭಾರತದ ರಾಜಕೀಯ ಇತಿಹಾಸದೊಂದಿಗೆ, ವಾಸ್ತುಶಿಲ್ಪ ಮತ್ತು ಲಲಿತಕಲೆಯ ಇತಿಹಾಸವನ್ನೂ ಓದಬೇಕಾಗಿದೆ; ಪರಿಶೋಧನೆ ಮಾಡಬೇಕಾಗಿದೆ. ವಾದಗ್ರಸ್ತವಾದನೇಕ ಅಂಶಗಳು ಹಾಗೆಯೇ ಉಳಿದಿವೆ. ಅವುಗಳ ಗಂಟುಗಳನ್ನು ಬಿಡಿಸಬೇಕಾಗಿದೆ.

> "ಪಲ್ಲವ ಶಿಲ್ಪವು ಬಾದಾಮಿ ಚಾಳುಕ್ಯರಿಗೆ ಸ್ಫೂರ್ತಿಕೊಟ್ಟಿತೆಂದೂ. ಇಮ್ಮಡಿ ಪುಲಿಕೇಶಿಯು ಪಲ್ಲವರನ್ನು ಸೋಲಿಸಿದ ಮೇಲೆ, ಪಲ್ಲವರಿಗೂ ಚಾಳುಕ್ಯರಿಗೂ ಒಂದು ಶತಮಾನ ಯುದ್ಧಗಳು ನಡೆಯುತ್ತಿದ್ದು ಪಲ್ಲವ ಶಿಲ್ಪಗಳು ಚಾಳುಕ್ಯರ ಆಶ್ರಯದಲ್ಲಿ ಐಹೊಳೆ. ಪಟ್ಟದಕಲ್ಲು. ಬಾದಾಮಿ. ಇತ್ಯಾದಿ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಿ ಚಾಳುಕ್ಯರೀತಿಗೆ ಪೀಠಿಕೆ ಹಾಕಿದರೆಂದೂ, ಕೆಲವರು ಬರೆದಿರುವರು. ಆದರೆ ಕರ್ನಾಟಕದಲ್ಲಿರುವ ಕಟ್ಟಡಗಳ ಕಾಲವನ್ನು ನಿರ್ಧರಿಸಿದರೆ ಇದು ವಿಪರೀತವಾದವೆಂದು ಕಂಡುಬರುತ್ತದೆ. ಪಲ್ಲವ ಮಹೇಂದ್ರವರ್ಮನು ಇಟ್ಟಿಗೆ ಮರ ಗಾರೆಗಳಲ್ಲಿ ಪ್ರತ್ಯೇಕ ದೇವಾಲಯಗಳನ್ನು ನಿರ್ಮಿಸಿದ್ದಾನೆ. ಕಲ್ಲಿನ ಕಟ್ಟಡಗಳಲ್ಲಿ ತಾನೇ ಮೊದಲಿಗನೆಂದು ಹೇಳಿಕೊಂಡಿರುವನು. ಅವನಿಗೆ ಮುಂಚೆ ತಮಿಳುನಾಡಿನಲ್ಲಿ ಗುಹಾಲಯಗಳೂ, ಮರ ಇಟ್ಟಿಗೆ ಕಟ್ಟಡಗಳೂ. ಇದ್ದುವು. ಅದಕ್ಕಿಂತ ಐದುನೂರು ವರ್ಷಗಳ ಹಿಂದೆಯೇ ಬನವಾಸಿ, ತಾಳಗುಂದಗಳಲ್ಲಿ ಕಲ್ಲಿನ ಪ್ರತ್ಯೇಕ ದೇವಾಲಯಗಳಿದ್ದುವು. ಕದಂಬರ ಶಾಸನಗಳಿಂದ. ಹಲ್ಮಿಡಿ, ಹಲಸಿ, ಪುಲಿಗೆರೆ (ಲಕ್ಷ್ಮೇಶ್ವರ), ಮಳವಳ್ಳಿ, ಚಂದ್ರವಳ್ಳಿ, ಮುಂತಾದ ಸ್ಥಳಗಳಲ್ಲಿ ದೇವಾಲಯಗಳಿದ್ದುವೆಂದು ಕಂಡುಬರುತ್ತದೆ."

ಇದು ಡಾ. ಸೊಂಡೇಕೊಪ್ಪದ ಶ್ರೀಕಂಠಶಾಸ್ತ್ರಿಗಳ ಅಭಿಪ್ರಾಯ.[6]

ಕಲ್ಮನೆಗಳ ಕೀರ್ತಿ ಶಾತವಾಹನರದು

"ಇದು ಅವರಭಿಪ್ರಾಯ; ಇದು ಇವರಭಿಪ್ರಾಯ"ವೆಂದು ವರ್ಗೀಕರಣ ಮಾಡಿ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಅಂಗೀಕರಿಸುವುದರಿಂದಾಗಲಿ, ತಿರಸ್ಕರಿಸುವುದರಿಂದಾಗಲಿ, ಉದಾಸೀನತೆಯಿಂದ ವರ್ತಿಸು

---

4 ಅಲೋಕ ಮಪ್ಯಮಮ ಸುಧಾಮಯಷ್ಟಿಕಾ ಕಾರಿತಮಿದಮಾಯತನಂ ವಿಚಿತ್ರಚಿತ್ತೇನ".
Pallava Mahendravarma bore the tittle "*Vichitrachitta*"

5 K. V. Subrahmanya Iyer: *Historical Sketches of Ancient Dekhan* (1917) p. 17–19.

6 ೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯಸಮ್ಮೇಳನದ ಅಂಗವಾಗಿ ನಡೆದ ಕಲಾಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣ.

ಪ್ರದರಿಂವಾಗಲಿ, ಏನೇನೂ ಪ್ರಯೋಜನವಿಲ್ಲ. ಒಂದು ಪ್ರಮಾಣದಲ್ಲಿ ಏಕಾಭಿಪ್ರಾಯಕ್ಕೆ ಬರಲು ಪರೀಕ್ಷೆಗೆ ಸಾಕಷ್ಟು ಸಾಧನಗಳಿವೆ. ಬೇಕಾಗಿರುವುದು ಆ ಸಾಧನಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ, ಪ್ರಾಮಾಣಿಕತೆಯಿಂದ ಅವುಗಳೇನು ಸೂಚಿಸುತ್ತವೆಂಬುದನ್ನು ಧೈರ್ಯವಾಗಿ, ಸ್ಪಷ್ಟಪಡಿಸಬೇಕು.

ಮೌರ್ಯ ಸಾಮ್ರಾಜ್ಯಾನಂತರ ಶಾತವಾಹನರು ಪ್ರಬಲರಾದರು. ಪ್ರತಿಷ್ಠಾನ ಅವರ ರಾಜಧಾನಿ. ಅವರ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಶ. ಒಂದನೆ ಶತಮಾನದಿಂದ ಸುಮಾರು ಮೂರು ಶತಮಾನಗಳ ಕಾಲ ಅವರ ಪ್ರಭುತ್ವ ನಡೆಯಿತು. ಪ್ರತಿಷ್ಠಾನ ಅಂದು ಕನ್ನಡ ಪ್ರದೇಶ. ಶಾತವಾಹನ ಸಾಮ್ರಾಜ್ಯವು ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದ ವರೆಗೂ ಹರಡಿತ್ತು. ಉತ್ತರದಲ್ಲಾದರೋ ಗುಜರಾತ್, ಮಾಳವ, ಮಧ್ಯಪ್ರಾಂತ್ಯಗಳು ಅವರ ಸಾಮ್ರಾಜ್ಯದಲ್ಲಿ ಸೇರಿದ್ದುವು. ದಕ್ಷಿಣಾಪಥದಲ್ಲಾದರೋ, ಪಶ್ಚಿಮದಲ್ಲಿ ವೈಜಯಂತಿ (ಬನವಾಸಿ), ಪೂರ್ವದಲ್ಲಿ ಧಾನ್ಯಕಟಕ (ಧರಣಿಕೋಟೆ) ಅವರ ನೆಲೆವೀಡುಗಳು. ಕಲ್ಪನೆಗಳನ್ನು ಕೆರಳಿಸುವ, ಜಗದಾಶ್ಚರ್ಯಕರವಾದ ಕಲಾಗಾರಗಳನ್ನು ನಿರ್ಮಿಸಿದ ಕೀರ್ತಿ ಶಾತವಾಹನರಿಗೆ ಸಲ್ಲಬೇಕು. ಆದಾಗ್ಯೂ ಹಿಂದೆ ಮೌರ್ಯರ ಕಾಲದಲ್ಲೂ ಗುಹಾಂತರ್ದೇವಾಲಯಗಳು ನಿರ್ಮಾಣವಾದುವು. ಈ ವಿಚಾರವಿಷ್ಟಕ್ಕೆ ಇಲ್ಲಿ ಸಾಕು. ಶಾಸ್ತ್ರವಿಚಾರ ನಿರ್ಣಯದಲ್ಲಿ ಹೇಗೋ ಹಾಗೆಯೇ ಸಂಸ್ಕೃತಿ ವಿಚಾರದಲ್ಲೂ ಸತ್ಯೈಕ ದೃಷ್ಟಿ ಬೇಕು; ಸಂಕುಚಿತ ಮತ್ತು ಪ್ರಾಂತೀಯ ದುರಭಿಮಾನವನ್ನು ದೂರಮಾಡಬೇಕು. ಈ ದೃಷ್ಟಿಯಿಂದ ಐಹೊಳೆ, ಪಟ್ಟದಕಲ್ಲು, ಬಾದಾಮಿ, ವಾಸ್ತುಶಿಲ್ಪ ಅವಶೇಷಗಳ ಪರೀಕ್ಷೆಯಾಗಬೇಕಾಗಿದೆ. ದೇವಾಲಯಗಳು ೭೦ ಅಲ್ಲ ನೂರಿರಲಿ; ಅವುಗಳೊಂದೊಂದನ್ನು ಅಗ್ನಿ ಪರೀಕ್ಷೆಗೆ ಗುರಿಪಡಿಸಬೇಕು. ಈ ಪರೀಕ್ಷೆಯ ಅನಂತರ ಏನು ಹೊರಬೀಳುತ್ತದೋ ಅದನ್ನು ಪರಿಪ್ರಶ್ನೆ ಅಥವಾ ಪ್ರತಿಪ್ರಶ್ನೆ ಮಾಡದೆ ಅಂಗೀಕರಿಸಬೇಕು. ಇದೇ ಸರ್ವಜನ, ಸರ್ವಕಾಲ, ಸಮ್ಮತವಾದ ಮಾರ್ಗ.

ವಾಸ್ತುಶಿಲ್ಪದ ಮಾಹಾತ್ಮ್ಯದ ಕೂಡಲಿ ಐಹೊಳೆ, ಪಟ್ಟದಕಲ್ಲುಗಳೆರಡೂ ಭಾರತದ ತೀರ್ಥ ಕ್ಷೇತ್ರಗಳಿರಬಾರದ ಕಾಶಿ ರಾಮೇಶ್ವರಗಳಂತೆ ಭಾಸವಾಗುತ್ತದೆ. ಇವೆರಡೂ ವಿಜಾಪುರ ಜಿಲ್ಲೆಯ ಹುನಗುಂದ ಮತ್ತು ಬಾದಾಮಿ ತಾಲ್ಲೂಕುಗಳಲ್ಲಿವೆ. ಒಂದು ಕಾಲದಲ್ಲಿ ಅವು ರಾಜನಗರಿಗಳು! ಸಾಮ್ರಾಜ್ಯ ರಾಜಧಾನಿಗಳು! ಇಂದಾದರೋ ಅವು ಹಾಳು ಸುರಿಯುತ್ತಿರುವ ಕಶ್ಮಲಕೂಪಗಳು; ಭಗ್ನಾವಶೇಷಗಳ ಕಸದ ರಾಶಿಗಳು. ನೂರಾರು ವರ್ಷಗಳಿಂದ ಅವು ನಿರ್ಲಕ್ಷಿಸಲ್ಪಟ್ಟಿವೆ; ಹಲವರೇ ಬಿಡಾಡುವ ಹಳ್ಳಿಗಳಾಗಿವೆ. ಮಂಗುತ್ತಿಯ ಗುಡ್ಡ; ಕೆಳಗೆ ಐಹೊಳೆ; ಅದರ ಸುತ್ತ ಕುಸಿದುಬಿದ್ದು ಮಣ್ಣಾಗುತ್ತಿರುವ ಕೋಟೆಗೋಡೆಗಳು. ಆ ಗೋಡೆಗಳೊಳಗೆ ಕಣ್ಣಿಗೆ ಬೀಳುವ, ಬಿದ್ದೂ ಬೀಳದಂತಿರುವ, ಅರೆ ನಿಂತಿರುವ ಹತ್ತಾರು ದೇವಾಲಯಗಳು. ಪ್ರಾಚೀನ ವಾಸ್ತುಶಿಲ್ಪ ಅವಶೇಷ ಶಾಖಾಧಿಕಾರಿಗಳಾಗಿದ್ದ ಹೆನ್ರಿ ಕಜನ್ಸ್ ಎಂಬ ಮಹಾಶಯರು ಆ ಸ್ಥಳಕ್ಕೆ ಹೋಗಿ, ಶೋಚನೀಯವಾದ ಸ್ಥಿತಿಯನ್ನು ಕಂಡು, ಮನನೊಂದು ಹೀಗೆ ಬರೆದಿದ್ದಾರೆ:

> "ಜೀರ್ಣವಾಗಿ, ಚೂರ್ಣವಾಗುತ್ತಿರುವ ಗೋಡೆಗಳ ಒಳಗೆ, ೫೦೦ ಗಜಗಳಷ್ಟು ಪ್ರದೇಶದಲ್ಲಿ ಮುವತ್ತಕ್ಕೂ ಮೀರಿದ ಪ್ರಾಚೀನ ಶಿಲಾನಿರ್ಮಿತ ದೇವಾಗಾರಗಳಿವೆ. ಅವೆಲ್ಲ ಸ್ಥಳಕ್ಕಾಗಿ, ಇಕ್ಕಟ್ಟಿಗೆ ಸಿಕ್ಕಿ, ಧಕ್ಕಾಧಿಕ್ಕಿಯಾಗಿ ಒಂದರ ಮೇಲೊಂದು ಬಿದ್ದು ಒದ್ದಾಡುತ್ತಿವೆ. ಒತ್ತಾದ ಹಳ್ಳಿ ನಿವಾಸಿಗಳ ಮಧ್ಯೆ ಇವೆಲ್ಲ ಹೂತುಹೋಗಿವೆ. ಸಾಮಾನ್ಯವಾಗಿ ಎಲ್ಲ ದೇವಾಲಯಗಳೂ ಅಪವಿತ್ರವಾಗಿ, ಹಾಳಾಗಿ ಹೋಗಿವೆ. ಅವುಗಳಲ್ಲೆಷ್ಟೋ ವಾಸಗೃಹಗಳಾಗಿವೆ; ದನಗಳ ಕೊಟ್ಟಿಗೆಗಳಾಗಿವೆ. ಹಳ್ಳಿಯ ಜನರೇ ಹಲವು ದೇವಾಲಯಗಳನ್ನು, ಊಹಿಸಲಾಗದಂತಹ ಶೌಚಕೂಪಗಳನ್ನಾಗಿ ಮಾಡಿಕೊಂಡಿದ್ದಾರೆ. ಹಿಂದೊಂದು ಕಾಲದಲ್ಲಿ ಈ ಮಂದಿರಗಳು ಈ ನಾಡಿನ ಜನರ ದೇವ ದೇವತೆಗಳ ಆವಾಸ ಸ್ಥಾನಗಳಾಗಿದ್ದುವು. ಒಂದಾನೊಂದು ಕಾಲದಲ್ಲಿ ರಾಜವೀಧಿಗಳೆಲ್ಲ ಹಾಸುಗಲ್ಲುಗಳಿಂದ ರಾರಾಜಿಸುತ್ತಿದ್ದುವು. ಈಗಲೂ ಧ್ವಜಸ್ತಂಭಗಳು ಹರಕು ಮುರುಕಾಗಿ, ಚೆಲ್ಲಾಪಿಲ್ಲಿಯಾಗಿ, ಬಿದ್ದಿವೆ. ಕಳ್ಳಕಾಕರ ಕೈಗವು ಇನ್ನೂ ಬಿದ್ದಿಲ್ಲ. ಇವೆಲ್ಲ ಪ್ರಗತಿಗೆ ಅಡ್ಡಿಯಾಗಿವೆ. ಹಳ್ಳಿಯ ಸುತ್ತಮುತ್ತ, ಗೋಡೆಗಳ ಹೊರಗೆ ಹಾಳುದೇಗುಲಗಳೆಷ್ಟೋ ಇವೆ. ದೂರದ

> ಪೊಲಿಗಳಲ್ಲಿ. ಹೇಳಿ ಕೇಳುವವರಿಲ್ಲದೆ ಬಿದ್ದಿವೆ. ಕಟ್ಟಿದ ದೇವಾಲಯಗಳಲ್ಲದೆ ಎರಡು ಗುಹಾಂತರ್ದೇವಾಲಯಗಳಿವೆ. ಒಂದು ಜನಾಲಯ; ಇನ್ನೊಂದು ಬ್ರಾಹ್ಮಣ ದೇವಾಲಯ. ಇನ್ನೊಂದು ಕಲ್ಮನೆಯನ್ನು ಅರ್ಧ ಕೊರೆದಿದ್ದಾರೆ; ಅರ್ಧ ಕಟ್ಟಿದ್ದಾರೆ. ಎರಡಂತಸ್ತಿನ ರಚನೆ."

ಐಹೊಳೆಯಲ್ಲಿ ಎಪ್ಪತ್ತು ದೇವಾಲಯಗಳಿಗೆ ಮೇಲಿವೆ. ಅವುಗಳಲ್ಲಿ ಬಹಳ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ:

೧ ಲಾಡ್‌ಖಾನ್ ದೇವಾಲಯ; ಅತ್ಯಂತ ಪ್ರಾಚೀನ
೨ ದುರ್ಗಾದೇವಾಲಯ; ಕಾಲಮಾನದಿಂದ ಎರಡನೆಯದು.
೩ ಮೇಗುತಿಗುಡಿ; ಕ್ರಿ.ಶ. ೬೩೪ರಲ್ಲಿ ಕವಿ ರವಿಕೀರ್ತಿ ಎಂಬವ ಕಟ್ಟಿಸಿದ.
೪ ಹುಚ್ಚಿಮಲ್ಲಿಯ ಗುಡಿ
೫ ಮಂಗಣ ದೇವಾಲಯ
೬ ಜೈನ ಬಸದಿ
೭ ವಿರೂಪಾಕ್ಷ ದೇವಾಲಯ
೮ ನಾರಾಯಣ ದೇವಾಲಯ
೯ ಕೊಂಟಿಗುಡಿ
೧೦ ಗಳಗನಾಥ ದೇವಾಲಯ

ಅನೇಕ ದೇವಾಲಯಗಳ ನಿಜವಾದ ಹೆಸರುಗಳೇನೆಂಬುದೇ ತಿಳಿಯುವ ಹಾಗಿಲ್ಲ. ಯಾರು ಯಾರು ಅವುಗಳನ್ನಾಕ್ರಮಿಸಿ, ಸುಖಿವಸತಿಗಳನ್ನಾಗಿ ಮಾಡಿಕೊಂಡರೋ ಅವರ ಹೆಸರುಗಳೆಲ್ಲ ಗೊತ್ತಿಲ್ಲ. ಈ ವ್ಯಾಪಾರಕ್ಕೆ ಲಾಡ್‌ಖಾನ್ ದೇವಾಲಯ ಅತ್ಯುತ್ತಮವಾದ ಉದಾಹರಣೆ. ನಿಜವಾಗಿಯೂ ಅದು ವಿಷ್ಣುದೇವಾಲಯ. ದ್ವಾರಬಂಧದ ಮೇಲಿನ ಅಡ್ಡಗಲ್ಲಿನ ಕೆತ್ತಿರುವ ಗರುಡನ ಮೂರ್ತಿಯೇ ಇದಕ್ಕೆ ಸಾಕ್ಷಿ. ಆ ದೇವಾಲಯದಲ್ಲಿ ಸ್ಥಾಪಿತವಾಗಿದ್ದು ವಿಷ್ಣುವಿನ ಯಾವ ಅವತಾರದ ಯಾವ ಮೂರ್ತಿಯೋ ಗೊತ್ತಿಲ್ಲ.

ಲಾಡ್‌ಖಾನ್ ದೇವಾಲಯ

ಐಹೊಳೆಯ ದೇವಾಲಯಗಳಲ್ಲೆಲ್ಲ ಈಗಿನ ತಿಳಿವಳಿಕೆಯಲ್ಲಿ ಲಾಡ್‌ಖಾನ್ ದೇವಾಲಯವೇ ಪ್ರಾಚೀನವಾದದ್ದು. ಎಷ್ಟು ಪ್ರಾಚೀನವಾದದ್ದು. ಅದನ್ನು ಯಾರು ಕಟ್ಟಿದ್ದು, ಇವೇ ಮೊದಲಾದ ಅಂಶಗಳನ್ನು ಸ್ಪಷ್ಟವಾಗಿ ತಿಳಿಸುವ ಶಿಲಾಶಾಸನಗಳು ಯಾವುವೂ ಇಲ್ಲ. ಎಂಟು ಅಥವಾ ಒಂಬತ್ತನೆಯ ಶತಮಾನದ ಶಾಸನವೊಂದು ಅದರ ಗೋಡೆಯ ಮೇಲಿದೆ. ಆರ್ಯಪುರದ ಐನೂರ್ವರಿಗೆ, ಚತುರ್ವೇದಿಗಳಿಗೆ, ದಾನ ಮಾಡಿದ ಸಂಗತಿಯು ಅದರಿಂದ ತಿಳಿದುಬರುತ್ತದೆ. ಆದರೆ ಈ ದೇವಾಲಯಕ್ಕೂ, ಈ ಶಾಸನಕ್ಕೂ, ಯಾವ ಸಂಬಂಧವೂ ಇಲ್ಲ. ಈ ದೇವಾಲಯದ ರೂಪರಚನೆಗಳಿಂದ ಇದು ಕ್ರಿ.ಶ. ಐದನೆಯ ಶತಮಾನಕ್ಕೆ ಸೇರಿದ್ದೆಂದು ಅನುಮಾನ ಮಾಡಬಹುದು.

> There is no temple at Aihole, not elsewhere that I know of, which impress one so much with its cave like character. Its general massiveness, the simplicity of its construction, and its plan and details, have much more in common with cave-architecture than with that of later mediaeval temples and with cave-architecture not

of the the latest. It is peculiarly wooden-looking in its construction making allowance for the more morssive nature of stone work"[7]

"ನನಗೆ ತಿಳಿದಿರುವ ಮಟ್ಟಿಗೆ ಐಹೊಳೆಯಲ್ಲೇ ಆಗಲಿ, ಮತ್ತೆಲ್ಲೇ ಆಗಲಿ, ಕಲ್ಪನೆ (ಗುಹಾಂತರ್ದೇವಾಲಯ)ಯನ್ನು ಹೋಲುವ ಮತ್ತು ಪ್ರಭಾವ ಬೀರುವ ದೇವಾಲಯ ಇನ್ನೊಂದಿಲ್ಲ. ಅದರ ಅಗಾಧ ಪ್ರಮಾಣ, ಅದರ ರಚನೆಯ ಸರಳತೆ, ಅದರ ವಿನ್ಯಾಸ-ವಿವರಗಳು, ಇವೆಲ್ಲ ಗುಹಾ ವಾಸ್ತುಶಿಲ್ಪದಂತೆಯೇ ಇವೆ. ಮಧ್ಯಯುಗದ ದೇವಾಗಾರಗಳ ರಚನೆಯಂತಾಗಲಿ, ಕಲ್ಪನೆಯ ದೇವಾಲಯಗಳಂತಾಗಲಿ, ಇಲ್ಲ. ಅಲ್ಲದೆ ದೇವಾಲಯದ ರಚನೆ ನೋಡಿದಾಗ ಮರದಲ್ಲಿ ಕೆತ್ತಿದ್ದೋ ಅನ್ನಿಸುತ್ತದೆ. ದೇವಾಲಯದ ಅಗಾಧ ಸ್ವರೂಪ ಮತ್ತು ದೊಡ್ಡ ದೊಡ್ಡ ಶಿಲಾಕರ್ಮಗಳನ್ನು ಗಮನಕ್ಕೆ ತೆಗೆದುಕೊಂಡು. ಸಾಕಷ್ಟು ಅವಕಾಶ ಕೊಟ್ಟು ನೋಡಿದಾಗ"

ಎಂಬದಾಗಿ ಹೆನ್ರಿ ಕಜನ್ಸ್‌ರವರು ಹೇಳಿದರು.

ದೇವಾಲಯಗಳ ರಚನೆಯ ಸಂಪ್ರದಾಯ

ಕಲ್ಪನೆಯ ಗುಡಿಗಳನ್ನು ಕೊರೆದ ಮೇಲೆ ಕಡಿದ ಕಲ್ಲುಗಳಿಂದ ದೇವಾಲಯಗಳನ್ನು ನಿರ್ಮಾಣ ಮಾಡುವ ಸಂಪ್ರದಾಯ ಮೊದಲಾಯಿತು. ಇವೆರಡು ಮಾರ್ಗಗಳಿಗೆ ಮಧ್ಯೆ ಮರದಲ್ಲಿ ದೇವಾಲಯಗಳನ್ನು ನಿರ್ಮಿಸುವ ಸಂಪ್ರದಾಯವೊಂದಿತ್ತೆಂದು ಹೇಳಲು ಸಾಕಷ್ಟು ಕಾರಣಗಳಿವೆ. ಲಾಡ್‌ಖಾನ್ ದೇವಾಲಯವು ದಾರುಕರ್ಮದ ದೇವಾಲಯವನ್ನು ಹೋಲುತ್ತದೆಂದು ಹೇಳುವಾಗ ಅದು ಬಹಳ ಪ್ರಾಚೀನ ಕಾಲದ್ದೆಂದು ಸೂಚಿಸಿದಂತಾಯಿತು. ದಾರುಕರ್ಮದಿಂದ ಬಿಡಿಕಲ್ಲಿನ ಕರ್ಮದ ಕೆಲಸ ಐಹೊಳೆಯಲ್ಲೇ ಮೊದಲಾಯಿತೆಂದು ಹೇಳಲಾಗದು. ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನ, ಮಳವಳ್ಳಿಯ ಪ್ರಣವೇಶ್ವರ ದೇವಾಲಯವು ಇಂದು ಶಿಥಿಲಾವಸ್ಥೆಯಲ್ಲಾದರೂ ಇದ್ದು, ನೋಡಲು ಸಿಕ್ಕಿದರೆ ಅದೇ ಬಹಳ ಮಾಡಿ ಕನ್ನಡನಾಡಿನ ಪ್ರಾಚೀನತಮ ದೇವಾಲಯವೆನಿಸುತ್ತಿತ್ತೊ ಏನೋ. ಏಕೆಂದರೆ ಅದು ಚುಟುಕುಲಾನಂದ ಶಾಖೆಯ ಶಾತವಾಹನರ ಕಾಲದ್ದು. ನಮ್ಮ ದೌರ್ಭಾಗ್ಯ ಆ ದೇವಾಲಯ ಇಂದಿಲ್ಲ; ಹೆಸರು ಮಾತ್ರ ಉಳಿದಿದೆ.

ಗುಹಾವಾಸ್ತುಶಿಲ್ಪದಿಂದ ದಾರುಕರ್ಮಮಾರ್ಗಕ್ಕೆ ಬಂದು, ದಾರುಕರ್ಮದಿಂದ ಬಿಡಿಗಲ್ಲಿನ ಬೃಹದಾಕಾರದ ದೇವಾಲಯಗಳ ನಿರ್ಮಾಣವಾಗಬೇಕಾಗಿದ್ದರೆ ಮಧ್ಯಭಾಗದಲ್ಲಿ ನಾನಾ ಪ್ರಯೋಗಗಳಾಗಿರಬೇಕು. ಮೊದಲು ಮೊದಲು ಸಣ್ಣ ಸಣ್ಣ ದೇವಾಲಯಗಳ ನಿರ್ಮಾಣವಾಗಿರಬೇಕು. ಹೀಗಾಗುವುದು ಶಾಸ್ತ್ರೀಯ ಮತ್ತು ಕ್ರಮಪ್ರಾಪ್ತ. ಏನೇ ಆಗಲಿ ನಮ್ಮ ಅದೃಷ್ಟದಿಂದ ಐಹೊಳೆಯಲ್ಲಿ ಐವತ್ತು ಚದರ ಅಡಿಗಳ ವಿಸ್ತಾರದ ದೇವಾಲಯವೊಂದು ಇನ್ನೂ ಉಳಿದಿದೆ. ಅದನ್ನು ಚಿತ್ರದಲ್ಲಿ ನೋಡಬಹುದು. ಹದಿನಾರು ಕಂಬಗಳ ಮೇಲೆ ನಿಂತಿದೆ ಚಾವಣಿ. ಉತ್ತರ, ಪಶ್ಚಿಮ, ದಕ್ಷಿಣ, ಈ ಮೂರು ದಿಕ್ಕುಗಳಲ್ಲಿ ಗೋಡೆಗಳಿವೆ. ಪೂರ್ವದಲ್ಲಿ ಮುಖಮಂಟಪವಿದೆ. ದೇವಾಲಯದ ಗೋಡೆಗಳ ರಚನೆಯೇ ಒಂದು ರೀತಿ. ಗೋಡೆಯ ಉದ್ದಕ್ಕೂ ಸಣ್ಣ ಸಣ್ಣ ಕಂಬಗಳು; ಕಂಬ ಕಂಬಗಳ ಮಧ್ಯೆ ಕಲ್ಲುಹಲಗೆಗಳು. ಮಧ್ಯದ ಕಲ್ಲು ಹಲಗೆಗಳಾದರೋ ನಾನಾ ಕಲಾಕೆತ್ತನೆಗಳಿಂದ ಕೊರೆದಿಟ್ಟ ಜಾಲಂಧ್ರಗಳು. ಈ ಕೌಶಲದಿಂದ ರಚನೆಗೆ ಸೌಂದರ್ಯ ಲಬ್ಧವಾದದ್ದಲ್ಲದೆ ದೇವಾಲಯದೊಳಕ್ಕೆ ಗಾಳಿ-ಬೆಳಕು ಸಾಕಷ್ಟು ಬರುವಂತಾಯಿತು. ಚಿತ್ರದಲ್ಲಿ ಜಾಲಂಧ್ರಗಳ ವೈವಿಧ್ಯ ಮತ್ತು ಕೌಶಲವನ್ನು ನೋಡಬಹುದು. ಒಳಕಂಬಗಳ ಮೇಲೆ ಬೋದಿಗೆಗಳಿವೆ. ಪಕ್ಕದ ಅಂಗಣಗಳ ಚಾವಣಿಗಳೆಲ್ಲ ಇಳಿಜಾರಾಗಿವೆ–ಉಪ್ಪಾರಿನಂತೆ. ಈ ಲಕ್ಷಣವು ಗುಹಾಂತರ್ದೇವಾಲಯಗಳ ಒಂದು ಉದಾಹರಣೆ. ಕಾಲಕ್ರಮದಲ್ಲಿ ಇಳಿಜಾರು ಚಾವಣಿ–

---

[7] Henry Cousens: *The Chalukyan Architecture*, p.32

ಒಪ್ಪಾರು ಸಮಜಾವಣೆಯಾಯಿತು. ನಾಲ್ಕುಮುಖಿಗಳ ಕಂಬಗಳ ಗಾತ್ರವನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ.

ಮಧ್ಯದ ನಾಲ್ಕು ಕಂಬಗಳ ಉದ್ದ ೯ ಅಡಿ, ೭ ಅಂಗುಲ; ೭ ಅಡಿ, ೫ ಅಂಗುಲ ಚದರ. ಕಲ್ಮನೆಗಳ ರಚನೆಯಲ್ಲಿ ಕಂಬಗಳು ಭಾರವಾದ ಬಂಡೆಗಳನ್ನು ಹೊರಬೇಕಾಗಿದ್ದ ಕಾರಣ ಕಂಬಗಳು ಅಸಾಧಾರಣ ಗಾತ್ರದವುಗಳಾಗಿದ್ದುವು. ಬಿಡಿಕಲ್ಲುಗಳ ದೇವಾಲಯ ನಿರ್ಮಾಣ ಮಾಡುವಾಗಲೂ ದಪ್ಪವಾದ ಕಂಬ ಗಳನ್ನೇ ನಿಲ್ಲಿಸಿದರು. ಹಾಗೆಯೇ ಅವುಗಳ ಮೇಲೆ ಚಾಚು ಬೋದಿಗೆಗಳನ್ನಿಟ್ಟರು (Bracket-Capitals) ಅವುಗಳಲ್ಲಿ ಹೆಚ್ಚೇನೂ ಕಲಾಕೌಶಲ ತೋರಿಸಲಿಲ್ಲ. ಆದರೆ ಕಂಬಗಳ ಮೇಲೆ ಸರಳ-ಸುಂದರ ಪಟ್ಟಿಕಾಕರ್ಮವನ್ನೂ, ವರ್ತುಳ, ಅರ್ಧ ಚಂದ್ರಾಕಾರದ ರೇಖೆಗಳ ಒಳಗೆ ಚಿತ್ರಕರ್ಮದ ಪ್ರತಿಭೆಯನ್ನು ಪ್ರಕಟಿಸಿದರು.

ಮುಖಮಂಟಪದ ಕಂಬಗಳ ಮೇಲೆ ಕಡೆದ ಮೂರ್ತಿಗಳಿವೆ; ಕುಂಭ ಅಥವಾ ಕಲಶಗಳಿವೆ. ಮಂಟಪದ ಒಳಭಾಗದಲ್ಲಿ ಸುತ್ತ ಜಗಲಿ ಇದೆ. ಇದರ ಮುಖದ ಮೇಲೂ ಚಿತ್ರಕರ್ಮ ಕಂಡುಬರುತ್ತದೆ.

ಮುಖಮಂಟಪದ ಮುಂಭಾಗದ ಕಂಬಗಳ ಮೇಲೂ, ಅತ್ತ ಪಟ್ಟಿಯ ಮೇಲೂ ಕಂಡು ಬರುವ ಶಿಲ್ಪ ಕರ್ಮವು ನಯನಮನೋಹರವಾಗಿದೆ. ನೂರು ಮಾತುಗಳಿಂದ ವರ್ಣಿಸಿದರೂ ಮೂಲದ ಒಂದು ನೋಟಕ್ಕೆ ಸಾಟಿಯಲ್ಲ.

ಗಂಗಾಯಮುನಾ ದಿವ್ಯಮೂರ್ತಿಗಳು

ಮುಖಮಂಟಪದ ದಕ್ಷಿಣದ ಕಡೆಯ ಕಂಬದ ಮೇಲೆ ಜೀವ ಪ್ರಮಾಣದ ಮೂರ್ತಿಯು ಕಮಠದ ಮೇಲೆ ನಿಂತಿದೆ. ಈ ಮೂರ್ತಿ ಯಮುನಾ. ಉತ್ತರದ ಕಡೆಯ ಕಂಬದ ಮೇಲಿನ ಮೂರ್ತಿ ಗಂಗಾ; ವಾಹನ ಮಕರ. ಗಂಗಾ ಯಮುನಾ ನದಿಗಳಲ್ಲಿ ಮಿಂದು, ಪವಿತ್ರ ದೇಹಿಗಳಾಗಿ, ಭಕ್ತರು ದೇವಾಲಯ ಪ್ರವೇಶ ಮಾಡಿದಂತಾಯಿತೆಂಬುದೀ ಮೂರ್ತಿಗಳ ಸಂಕೇತಾರ್ಥ. ಈ ಭಾವಾರ್ಥ ಸಂಕೇತದ ಸಂಪ್ರದಾಯ ಚಾಳುಕ್ಯ, ಹೊಯ್ಸಳ, ವಿಜಯನಗರ, ರಾಜವಂಶೀಯರ ಕಾಲದ ದೇವಾಲಯ ಗಳಲ್ಲಿ ಕಂಡುಬರುತ್ತದೆ. ಮಹಾದ್ವಾರದ ಎಡಬಲ ದ್ವಾರಪಟ್ಟಿಗಳ ಮೇಲೆ ಗಂಗಾ ಯಮುನಾ ಮೂರ್ತಿ ಗಳಿರುತ್ತವೆ. ಸಾಮಾನ್ಯವಾಗಿ ಗಂಗಾ ಮಕರ ವಾಹನೆ. ಯಮುನಾ ನಕ್ರ ವಾಹನೆ. ಇಂದಿಗೂ ಗಂಗಾ ಮೀನುಗಳಿಗೆ ಹೇಗೆ ಹೆಸರಾಂತಿದೆಯೋ ಯಮುನಾ ಮೊಸಳೆಗಳಿಗೆ ಪ್ರಖ್ಯಾತಳಾಗಿದ್ದಾಳೆ!

ಈ ದೇವಾಲಯದ ಮತ್ತೊಂದು ಗಮನಾರ್ಹವಾದ ಲಕ್ಷಣವೆಂದರೆ ದೇವಾಲಯದ ಮೇಲೆ ಶಿಖರವೇ ಇಲ್ಲ. ಮಧ್ಯದ ನಾಲ್ಕು ಕಂಬಗಳ ಮೇಲೆ ಒಂದು ಸಣ್ಣ ಮನೆ ಇದೆ. ಈ ಮನೆಯನು ಮೂಲ ದೇವಾಲಯ ನಿರ್ಮಾಣಾನಂತರ ಬಹಳ ಕಾಲದ ಮೇಲೆ ಬೆಳಕಿಗಾಗಿ ಕಟ್ಟಿಸಿರಬೇಕು. ಮುಖ್ಯ ಕಟ್ಟಡಕ್ಕೂ ಇದಕ್ಕೂ ಲೇಶವೂ ಸಂಬಂಧವಿಲ್ಲ.

ಲಾಡ್‌ಖಾನ್ ದೇವಾಲಯದಲ್ಲಿ ಈಗ ಲಿಂಗವಿದೆ. ಲಿಂಗಾಯಿತರು ಇತ್ತೀಚೆಗೆ ಅದನ್ನು ಸ್ಥಾಪಿಸಿರ ಬೇಕು. ಮಂಟಪದ ಮಧ್ಯೆ ನಂದಿಯ ಶಿಲ್ಪವಿದೆ. ಮುಸಲ್ಮಾನರ ಆಳ್ವಿಕೆಯ ಕಾಲದಲ್ಲಿ ಅಧಿಕಾರಿಯೊಬ್ಬ ಈ ದೇವಾಲಯವನ್ನು ತನ್ನ ವಾಸಗೃಹವನ್ನಾಗಿ ಮಾಡಿಕೊಂಡ!

ಮೂಲ ದೇವಾಲಯದಲ್ಲಿದ್ದ ಮೂರ್ತಿ ಯಾವುದು? ಈ ಪ್ರಶ್ನೆಗೆ ಸುಲಭವಾಗಿ ಉತ್ತರ ಕೊಡಲು ಸಾಧನಗಳಿವೆ. ದೇವಾಲಯದ ದ್ವಾರ ಪಟ್ಟಿಗಗಳೆರಡರ ಮೇಲೂ ಗದಾಧಾರಿಗಳಾದ ದ್ವಾರಪಾಲಕ ಮೂರ್ತಿಗಳಿವೆ. ಇದರಿಂದ ಇದು ವಿಷ್ಣುದೇವಾಲಯವೆಂದು ನಿರ್ಧಾರವಾಗಿ ಹೇಳಬಹುದು.

ಕೊಂಟಗುಡಿ

ರಚನೆಯಲ್ಲಿ ಕೊಂಟಿಗುಡಿಗೂ, ಲಾಡ್‌ಖಾನ್ ದೇವಾಲಯಕ್ಕೂ, ಹೆಚ್ಚು ವ್ಯತ್ಯಾಸವಿಲ್ಲ. ಲಾಡ್‌ಖಾನ್ ದೇವಾಲಯ ಅಗಾಧ ರಚನೆ; ಕೊಂಟಿಗುಡಿ ಸಣ್ಣದು. ಆದರೆ ಕಂಬಗಳು ಗಾತ್ರವಾಗಿವೆ.

ಈ ದೇವಾಲಯವೂ ಚದರವಾಗಿದೆ. ಮಧ್ಯೆ ಕಂಬಗಳು ನಾಲ್ಕು. ದೇವಾಲಯ ಪಶ್ಚಿಮಾಭಿಮುಖವಾಗಿದೆ. ಸಭಾಮಂಟಪ ದ್ವಾರವಾದರೋ ಉತ್ತರಕ್ಕಿದೆ. ಮಧ್ಯದ ನಾಲ್ಕು ಕಂಬಗಳ ಮೇಲಿನ ಚಾವಣಿ ಚಪ್ಪಟೆಯಾಗಿದೆ. ಪಕ್ಕದ ಅಂಕಣಗಳ ಚಾವಣಿ ಇಳಿಜಾರಾಗಿ, ಗೋಡೆಗಳ ಮೇಲೆ ಕೂಡುತ್ತದೆ.

ನಾಲ್ಕು ಕಂಬಗಳ ಮೇಲಿನ ಚಪ್ಪಟೆ ಚಾವಣಿಯ ಒಳಭಾಗದಲ್ಲಿ ಅಷ್ಟದಿಕ್ಪಾಲಕರ ಶಿಲ್ಪಕರ್ಮವಿದೆ. ಚಾವಣಿಯ ಮೇಲೆ ಮೊದಲು ಶಿಖರವಿರಲಿಲ್ಲ. ಅನಂತರ ಹೊಸದಾಗಿ ಶಿಖರವೊಂದನ್ನು ನಿರ್ಮಿಸಿದ್ದಾರೆ. ಚಾವಣಿಯ ಒಳಮೈಯಲ್ಲಿ ಅಷ್ಟ ದಿಕ್ಪಾಲಕರ ಬಂಧ ಬಿಡಿಸುವ ಕೆಲಸ ಚಾಳುಕ್ಯರ ಹೊಯ್ಸಳ ಮಾರ್ಗದ ವಾಸ್ತುಶಿಲ್ಪದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಅವರ ಕಾಲಕ್ಕೆ ಇವು *ಭುವನೇಶ್ವರಿಗಳೆಂಬ ಹೆಸರಿನಿಂದ ಖ್ಯಾತಿ ಪಡೆದುವು. ಶಿಖರವನ್ನೇರಿಸಿದ ಕಾಲದಲ್ಲೇ ಈ ಭುವನೇಶ್ವರಿ ಕಲ್ಪನೆ–ರಚನೆ ಆಗಿರಬೇಕೆಂಬುದು ಹೆನ್ರಿ ಕಜನ್ಸರ ಅಭಿಪ್ರಾಯ.[8]

ಶಿಖರದ ಮೊದಲನೆಯ ಹಂತ ಐದು ಅಡಿಗಳ ವಿಸ್ತಾರವಾಗಿದೆ. ನಾಲ್ಕು ಮುಖಗಳಲ್ಲೂ ನಾಲ್ಕು ಮೂರ್ತಿಗಳ ಗೂಡುಗಳಿವೆ. ಪೂರ್ವದಲ್ಲಿ ವಾಮನಾವತಾರ ಮೂರ್ತಿ, ದಕ್ಷಿಣದಲ್ಲಿ ಭೈರವಮೂರ್ತಿ, ಪಶ್ಚಿಮದಲ್ಲಿ ವರಾಹಮೂರ್ತಿ, ಉತ್ತರದಲ್ಲಿ ತಾಂಡವ ಶಿವಮೂರ್ತಿ. ಪೂರ್ವ ಪಶ್ಚಿಮ ಗೂಡುಗಳಲ್ಲಿ ವಿಷ್ಣುಮೂರ್ತಿಗಳಿವೆ. ದ್ವಾರಬಂಧದ ಮೇಲೆ ಗರುಡನ ಮೂರ್ತಿ ಕಂಡು ಬರುತ್ತದೆ. ಈ ಕಾರಣಗಳಿಂದ ಇದು ಮೂಲತಃ ವಿಷ್ಣು ದೇವಾಲಯವೇ ಆಗಿತ್ತೆಂಬುದರಲ್ಲಿ ಸಂಶಯವಿಲ್ಲ. ದೇವಾಲಯ ಶಿಥಿಲವಾದ ಮೇಲೆ ಇತ್ತೀಚಿನವರು ಅದಕ್ಕೆ ಕೊಂಟಿಗುಡಿಯೆಂದು ಹೆಸರಿಟ್ಟರು. 'ಕೊಂಟಿ' ಅಂದರೆ ತ್ರಿಶೂಲ; ಶಿವನ ಆಯುಧಗಳಲ್ಲೊಂದು. ನವರಾತ್ರಿಯ ಕಾಲದಲ್ಲಿ ಗ್ರಾಮದ ಗಡಿಗೆ ಪ್ರತಿವರ್ಷವೂ ಒಬ್ಬ ತ್ರಿಶೂಲವನ್ನು ಒಯ್ಯುತ್ತಿದ್ದ. ಅವನು ಈ ಗುಡಿಯನ್ನು ತನ್ನ ವಸತಿಯನ್ನಾಗಿ ಮಾಡಿಕೊಂಡಿದ್ದ. ಅವನು ತೀರಿಕೊಂಡಮೇಲೂ ಆ ತ್ರಿಶೂಲ, ಅಥವಾ ಕೊಂಟಿಯೆನ್ನೋ ಅಲ್ಲೇ ಇದೆ. ಆದ ಕಾರಣ ಅದಕ್ಕೆ ಕೊಂಟಿಗುಡಿಯೆಂದು ಹೆಸರಾಯಿತು.

ಗುಡಿಯೊಳಗೆ ಮಧ್ಯದಲ್ಲಿರುವ ನಾಲ್ಕು ಕಂಬಗಳು ಲಾಡ್‌ಖಾನ್ ದೇವಾಲಯದ ಕಂಬಗಳಿಗಿಂತ ಕೊಂಚ ಪ್ರಗತಿ ಹೊಂದಿದ ಲಕ್ಷಣಗಳಿಂದ ಕೂಡಿವೆ. ಆದರೆ ಬಾದಾಮಿ ಮೂರನೆಯ (ವಿಷ್ಣು) ಕಲ್ಮನೆಯ ಕಂಬಗಳಿಗಿಂತ ಹಿಂದಿನ ಕಾಲದ್ದೆಂದು ಶಿಲ್ಪ ಕರ್ಮ ನೋಡಿದರೆ ಗೊತ್ತಾಗುತ್ತದೆ. ಕಂಬಗಳು ಕೆಳಗಿನಿಂದ ಮೇಲಿನವರೆಗೂ ಚತುರಸ್ರಾಕಾರದಿಂದಿವೆ. ಕೆಳಗೆ ಪೀಠ ವೇದಿಕೆ ಇಲ್ಲ. ಮೇಲ್ಗಡೆ ಚಕ್ರಾಕಾರದಲ್ಲಿ ಛದ್ರವಾಗಿ ಕೂಡು ಬೋದಿಗೆಗಳಿವೆ. ಬೋದಿಗೆಗಳ ಮೇಲೆ ದೂಲಗಳು ಕೂಡುತ್ತವೆ. ಬೋದಿಗೆ–ದೂಲಗಳನ್ನು ಕಟ್ಟಿಕೊಂಡಂತೆ ಚಾಚುಗಲ್ಲುಗಳಿವೆ. ಇವೂ ಒರಟೊರಟಾಗಿಯೇ ಇವೆ. ಕಲ್ಮನೆಗಳ ಚಾಚುಗಲ್ಲುಗಳಲ್ಲಿ ಕಂಡು ಬರುವ ಕಲೆ ಇಲ್ಲಿಲ್ಲ. ದೇವಾಲಯದ ಹೊರಮೈಮೇಲೆ ಮೂಲ ಶಿಲ್ಪಿಗಳು ಯಾವ ಮೂರ್ತಿಗಳನ್ನೂ ಕಡೆದಿಟ್ಟಂತೆ ಕಂಡು ಬರುವುದಿಲ್ಲ. ಆದರೆ ದೇವಾಲಯದ ಸುತ್ತ ಹರಿಯುವ ಪಟ್ಟಿಕೆಗಳಲ್ಲಿ ಲತಾಕೃತಿಗಳಿವೆ; ವಜ್ರಾಕೃತಿಯ ಆಭರಣಗಳಿವೆ; ಮಣಿಮಾಲೆಗಳ ಶಿಲ್ಪಕರ್ಮವಿದೆ.

ಕೊಂಟಿ ಗುಡಿಗೆ ಸೇರಿ ಸೇರದಂತೆ ಪೂರ್ವಾಭಿಮುಖವಾಗಿರುವ ಗುಡಿಯೊಂದಿದೆ. ಇದೊಂದು ವರಾಂಡಾ, ಕೈಸಾಲೆ. ಉದ್ದಕ್ಕೂ ಕಂಬಗಳಿವೆ. ಇವು ಲಾಡ್‌ಖಾನ್ ದೇವಾಲಯದ ಕಂಬಗಳನ್ನು ಹೋಲುತ್ತವೆ. ಇದು ಕೊಂಟಿ ಗುಡಿಯಿಂದ ಪ್ರತ್ಯೇಕವಾದ ಒಂದು ದೇವಾಲಯವೇ ಇರಬೇಕು. ಇದಕ್ಕೆ ದಕ್ಷಿಣದಲ್ಲಿ ಕೆಲವು ಗಜಗಳ ದೂರದಲ್ಲೇ ಇನ್ನೊಂದು ಸಣ್ಣ ಗುಡಿ ಇದೆ. ಇದರಲ್ಲೂ ವರಾಂಡದ ರಚನೆಯೇ ಕಂಡುಬರುತ್ತದೆ. ಮೊದಲನೆಯದಕ್ಕೂ, ಇದಕ್ಕೂ ವ್ಯತ್ಯಾಸವಿಷ್ಟೆ–ಮೊದಲನೆಯ ಮಂಟಪದಲ್ಲಿ ಒಂದೇ; ಮಧ್ಯೆ ಗೋಡೆ ಇಲ್ಲ. ಎರಡನೆಯದರಲ್ಲಿ ಮಂಟಪ ವಿಭಾಗ ಮಾಡುವ ಅಡ್ಡ ಗೋಡೆಯೊಂದಿದೆ. ಅಂದರೆ ಮಂಟಪವನ್ನೂ, ಮುಖಮಂಟಪದಿಂದ ಪ್ರತ್ಯೇಕಗೊಳಿಸಿದ ಹಾಗಾಯಿತು.

ಈ ದೇವಾಲಯದ ದ್ವಾರದ ಮೇಲ್ಗಲ್ಲಿನಲ್ಲಿ ಯಥಾ ಪ್ರಕಾರ ಗರುಡನ ಮೂರ್ತಿ ಇದೆ. ಈ ಗುಂಪಿನ ನಾಲ್ಕು ಗುಡಿಗಳಲ್ಲಿ ಇವೇ ಹಳೇ ಗುಡಿಗಳು. ಈ ಗುಡಿಯ ದ್ವಾರದಲ್ಲಿ ಅಸಾಧ್ಯ ಶಿಲ್ಪಕರ್ಮ

[8] *Ibid.*, p. 35

ಕೌಶಲ ಕಂಡು ಬರುತ್ತದೆ. ಕೊಂಟಿಗುಡಿ ಪಕ್ಕದ ದೇವಾಲಯ ದ್ವಾರಪಾಲಕರಲ್ಲಿ ಹರಿಹರ ಲಾಂಛನಗಳನ್ನು ನೋಡುತ್ತೇವೆ. ದ್ವಾರಪಾಲಕರಿಗೆ ಚತುರ್ಭುಜಗಳಿವೆ. ಮೂಲೆಯ ಎರಡೂ ಕಡೆಗಳಲ್ಲೂ ಪದ್ಮಾಸನಾಸೀನ ಮೂರ್ತಿಗಳಿವೆ. ಎಲ್ಲೋರ ಕೈಲಾಸ ದೇವಾಲಯದ ಒಂದು ದ್ವಾರದ ಕೆಳಗಡೆ ಕಂಡು ಬರುವ ಮೂರ್ತಿಗಳನ್ನಿವು ಹೋಲುತ್ತವೆ. ದ್ವಾರಬಂಧಗಳ ಮೇಲೆ ಗಜ ಲಕ್ಷ್ಮಿ ಇದೆ; ಗರುಡನಂತೂ ಇದ್ದೇ ಇದ್ದಾನೆ. ಇತ್ತೀಚೆಗೆ ಯಾವನೋ ಒಬ್ಬ ಇದರಲ್ಲಿ ಸೇರಿಕೊಂಡ: ಅಂದಿನಿಂದ ಇದಕ್ಕೆ ಜನರು ಸಾರಂಗ ಗುಡಿಯೆಂದು ಹೆಸರಿಟ್ಟರು.

ಮೇಲೆ ಹೇಳಿದಂತೆ ಈ ನಾಲ್ಕು ಗುಡಿಗಳೂ ಐಹೊಳೆಯ ಪ್ರಾಚೀನ ದೇವಾಲಯಗಳು. ಮೇಗುಡಿ ದೇವಾಲಯಕ್ಕಿಂತ ಒಂದು ಒಂದೂವರೆ ಶತಮಾನಗಳ ಹಿಂದಿನವಾದರೂ ಆಗಿರಬೇಕೆಂಬುದು ಹೆನ್ರಿ ಕಜನ್ಸರ ಮತ.

ದುರ್ಗ ದೇವಾಲಯ

ದೇವಾಲಯ ನಿರ್ಮಾಣ ಕಾರ್ಯದಲ್ಲಿ ಐಹೊಳೆಯ ದುರ್ಗದೇವಾಲಯ ಎರಡನೆಯ ಪ್ರಯತ್ನವೆಂದು ಸ್ವರ್ಗವಾಸಿ ಬಿ. ವೆಂಕೋಬರಾಯರು ಹೇಳುತ್ತಾರೆ.[9] ಐಹೊಳೆಯ ದುರ್ಗ ದೇವಾಲಯದ ಮೇಲೂ, ಪಟ್ಟದಕಲ್ಲಿನ ಪಾಪನಾಥೇಶ್ವರ ದೇವಾಲಯದ ಮೇಲೂ, ಶಿಖರಗಳಿವೆ. ಈ ಶಿಖರಗಳ ರೂಪರಚನೆಗಳಾದರೂ ಔತ್ತರೇಯ ಲಕ್ಷಣಗಳಿಂದ ಕೂಡಿವೆ. ಬೌದ್ಧಗುಹಾಂತರ್ದೇವಾಲಯಗಳ ಚಿತ್ರದಂತಿದೆ. ಅದರ ತಲವಿನ್ಯಾಸ: ಚೈತ್ಯದಲ್ಲಿ ದಾಗಬ ಇದ್ದ ಭಾಗ ದುರ್ಗದೇವಾಲಯದ ಗರ್ಭಗೃಹವಾಯಿತು. ದೇವಾಲಯದ ಹಿಂಭಾಗ ಅರ್ಧವರ್ತುಳಾಕಾರ (ಗಜಪೃಷ್ಠ)ವಾಗಿದೆ. ಗರ್ಭಗೃಹದ ಮುಂದೆ ಸಭಾ ಮಂಟಪ; ಪಕ್ಕಗಳಲ್ಲಿ ಎರಡು ಸಾಲುಗಂಬಗಳು. ಅಂದರೆ ಸಭಾಮಂಟಪದಲ್ಲಿ ಮಧ್ಯರಂಗ, ಎರಡು ಶಾಖೆಗಳು, ಹೀಗೆ ಮೂರು ಭಾಗಗಳಾಗಿ ವಿಂಗಡವಾಗಿದೆ. ಉದ್ದ ೬೪ ಅಡಿಗಳು, ಅಗಲ ೩೬ ಅಡಿಗಳು.

ಕಡಿದ ಕಲ್ಲುಗಳಿಂದ ದೇವಾಲಯ ನಿರ್ಮಾಣ ಮಾಡುವಾಗ ಕೊರೆದ ಗುಹಾಲಯಗಳ ವಾಸ್ತು ವೈಲಕ್ಷಣ್ಯಗಳನ್ನು ತರುವುದು ಸುಲಭದ ಕೆಲಸವಲ್ಲ. ಕೊರೆಯುವಾಗ ಕಲ್ಲಿನಲ್ಲಿ ಕಮಾನನ್ನು ರೂಪುಗೊಳಿಸಬಹುದು; ಕಡಿದ ಕಲ್ಲುಗಳಿಂದ ಕಮಾನನ್ನು ಕಟ್ಟುವ ರಹಸ್ಯ. ಕೌಶಲವಿನ್ನೂ ಹೊರಬಿದ್ದಿರಲಿಲ್ಲ. ಚೈತ್ಯಗಳಲ್ಲಿ ಒಳಮಾಳಿಗೆ ಚಪ್ಪಟೆಯಲ್ಲ, ಲಾಳಾಕಾರ. ಚೌತಿಚಂದ್ರಾಕಾರ. ಕಡಿದ ಕಲ್ಲುಗಳಿಂದ ಒಳ ಮಾಳಿಗೆಗೆ ಲಾಳಾಕಾರ ಕೊಡುವುದಾದರೂ ಹೇಗೆ? ಅಂದಿನ ಶಿಲ್ಪಿಗಳು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ಈ ಸಮಸ್ಯೆಯನ್ನು ಬಿಡಿಸಿದರು. ಮಧ್ಯದ ಮಾಳಿಗೆಯನ್ನು ಎತ್ತರಿಸಿ ಚಪ್ಪಟೆಮಾಡಿದರು. ಪಕ್ಕದ ಮಾಳಿಗೆಗಳ ಎತ್ತರವನ್ನು ಕಡಿಮೆ ಮಾಡಿದರು. ಮಾಳಿಗೆಗಳನ್ನು ಚಪ್ಪಟೆ ಮಾಡದೆ ಇಳಿಜಾರು ಮಾಡಿದರು. ಮೊದಲನೆಯ ನೋಟಕ್ಕೆ ರಚನೆ ಚೈತ್ಯದಂತೆಯೇ ಕಾಣಬಂತು. ಈ ದೇವಾಲಯದ ಸಾಲು ಕಂಬಗಳ ಮೇಲೆ ಎತ್ತರದ ಮಧ್ಯರಂಗದ ಮಾಳಿಗೆಯಷ್ಟೆ. ಇಳಿಜಾರು ಮಾಳಿಗೆಯಿಂದ ನಾಲ್ಕಡಿ ಎತ್ತರ ಮಧ್ಯಮಾಳಿಗೆ. ಈ ಎತ್ತರಿಸಿರುವ ಭಾಗದಲ್ಲಿ ನಾನಾ ಚಿತ್ರಕರ್ಮದ ಪಟ್ಟಿಗಳಿವೆ: ಲತೆಗತಿ. ಮೂರ್ತಿಗತಿ. ವಿಲಕ್ಷಣ ಚಿತ್ರಗತಿ! ಈ ಕಂಬಗಳ ರಚನೆಯು ಅಜಂತ ೨೬ನೆಯ ಗುಹೆಯ ನೆನಪನ್ನುಂಟು ಮಾಡುತ್ತದೆ. ದುರ್ಗಗುಡಿಯ ತಳವಿನ್ಯಾಸವನ್ನೂ, ಅಜಂತದ ೧೯ನೆಯ ಗುಹೆಯ ತಳವಿನ್ಯಾಸವನ್ನೂ ಹೋಲಿಸಿನೋಡಬೇಕು. ಒಂದನ್ನೊಂದು ಹೋಲುವ ಲಕ್ಷಣವು ಆಶ್ಚರ್ಯವನ್ನುಂಟು ಮಾಡುತ್ತದೆ. ಪ್ರತ್ಯಂಗದಲ್ಲೂ ಅಜಂತಾ–ಐಹೊಳೆ ಎರಡೂ ಒಂದೇ ಅನ್ನಿಸುತ್ತದೆ! ಒಂದು ಕಲ್ಲಿನಲ್ಲಿ ಕೊರೆದದ್ದು! ಒಂದು ಕಲ್ಲಿನಲ್ಲಿ ಕಟ್ಟಿದ್ದು! ಕಲ್ಲಿನಲ್ಲಿ ಕೊರೆಯುವುದಕ್ಕೂ, ಕಲ್ಲುಗಳಿಂದ ಕಟ್ಟುವುದಕ್ಕೂ, ಮಧ್ಯೆ ಮರದಲ್ಲಿ ದೇವಾಲಯ ನಿರ್ಮಿಸುವ ಅವಸ್ಥೆ ಅಥವಾ ಹಂತವಿತ್ತೆಂಬುದು ದುರ್ಗದೇವಾಲಯ ರಚನೆಯಲ್ಲಿ ಸೂಚಿತವಾಗುತ್ತದೆ.

ಕಂಬಗಳೆಲ್ಲ ಚದರ. ಸರಳ. ಲಾಡ್‌ಖಾನ್ ದೇವಾಲಯದ ಕಂಬಗಳಿಗಿಂತ ಸಣ್ಣ. ತಳಪಾಯದ ಕಲ್ಲುಗಳಿಲ್ಲ. ಆದರೆ ಕಂಬಗಳ ಮೇಲೆ ಸರಳ ಬೋದಿಗೆಗಳಿವೆ. ಚಾಚು ಬೋದಿಗೆಗಳು (Bracket)

9 ಮೈಸೂರು ದೇಶದ ವಾಸ್ತುಶಿಲ್ಪ, ಪುಟ ೬೮

ದೇವಾಲಯದ ಮುಂಭಾಗದ ಕಂಬಗಳೆಲ್ಲ ಮೂರ್ತಿದ್ವಯಗಳಿಂದ ಅಲಂಕೃತವಾಗಿವೆ. ಹೊರಮುಖ ಗಳಲ್ಲಿ ಮಾತ್ರ ಚೆನ್ನಾಗಿ ಎದ್ದು ಕಾಣುವ ಮೂರ್ತಿಗಳನ್ನು ಕಲ್ಪಿಸಲಾಗಿದೆ. ದೇವಾಲಯದೊಳಗಿನ ಹಲವು ಕಂಬಗಳಾದರೋ ಪಟ್ಟಿಕಾ ಚಿತ್ರಕರ್ಮದಿಂದಲೂ. ಕಂಬಗಳ ಮುಖ್ಯ ಮಧ್ಯದ ವರ್ತುಳ ಮಧ್ಯದಲ್ಲಿ ನಾನಾ ವಿಚಿತ್ರ ಚಿತ್ರ ಕರ್ಮಗಳಿಂದಲೂ. ಶೋಭಿತವಾಗಿವೆ. ಪುರುಷ ಮೂರ್ತಿಗಳೆಲ್ಲ ಕಂಬಗಳಿಂದ ಅಲಂಕೃತವಾಗಿವೆ. ದೇವಾಲಯ ದ್ವಾರದ ಮೇಲಿನ ಅಡ್ಡಗಲ್ಲಿನಲ್ಲಿ ಗರುಡಮೂರ್ತಿ: ಆ ಮೂರ್ತಿಯ ಕೈಗಳಲ್ಲಿ ನಾಗನ ಬಾಲಗಳು. ನಾಗಗಳಾದರೋ ಎಡ ಬಲ ದ್ವಾರಪಟ್ಟಿಗಳ ಮೇಲೆ ಹರಿದು. ಮನುಷ್ಯಾಕಾರದಿಂದ ನಿಲ್ಲುತ್ತವೆ! ದ್ವಾರ ಲಕ್ಷಣಗಳೆಲ್ಲ ಅಜಂತದ ವಿಹಾರಗಳನ್ನೇ ಹೋಲುತ್ತವೆ.

ಹೊರ ಕೈಸಾಲೆ (ವರಾಂಡ)ಯ ಸುತ್ತುಗೋಡೆಯಲ್ಲಿ ಮೂರ್ತಿಗಳನ್ನು ಕೂಡಿಸಲು ಗೂಡುಗಳಿವೆ. ಹಲವರ ಧ್ಯಾನವರಿಯದ ಮೂರ್ತಿಗಳ ಕೂಟವಿದು! ನರಸಿಂಹ, ವರಾಹ, ಅರ್ಧನಾರೀಶ್ವರ, ಮಹಿಷಾಸುರ ಮರ್ದಿನೀ! ಗರ್ಭಗೃಹವಿಂದು ಶೂನ್ಯಗೃಹ. ಅಲ್ಲಿನ ಕೆಲವು ಸೂಚನೆಗಳಿಂದ ಅದು ಸೂರ್ಯನಾರಾಯಣನ ದೇವಾಲಯವಾಗಿರಬೇಕೆಂದು ಅನುಮಾನಮಾಡಲಾಗಿದೆ.

ದುರ್ಗಗುಡಿಯ ಶಿಖರ ವೈಶಿಷ್ಟ್ಯ

ಈ ದೇವಾಲಯದ ಮತ್ತೊಂದು ವೈಶಿಷ್ಟ್ಯವೆಂದರೆ ಅದರ ಮೇಲಿನ ಗೋಪುರ ಅಥವಾ ಶಿಖರ. ಇದು ಉತ್ತರ ಭಾರತದ ಮಾದರಿಯದು. ಉತ್ಕಲ ದೇಶದ ಮಹಾ ಪ್ರಾಚೀನ ದೇವಾಲಯಗಳಲ್ಲಿ ಈ ಬಗೆಯ ಶಿಖರಗಳಿವೆ. ದುರ್ಗಗುಡಿಯ ಶಿಖರದ ಮೇಲ್ಭಾಗ ಬಿದ್ದುಹೋಗಿದೆ. ಆದರೆ ಹುಚ್ಚ ಮಲ್ಲಿಗುಡಿಯ ಶಿಖರ ಹಾಗೆಯೇ ಇದೆ. ಅದರ ಶಿಖರ ಪೂರ್ಣವಾಗಿದೆ. ಲಾಡ್‌ಖಾನ್ ದೇವಾಲಯದ ಪಕ್ಕದಲ್ಲೇ ಇನ್ನೊಂದು ದೇವಾಲಯವುಂಟು. ಅದರ ಮೇಲೂ ಇದೇ ಬಗೆಯ ಶಿಖರವಿದೆ. ಈ ದೇವಾಲಯದ ಶಿಲ್ಪಕರ್ಮದಲ್ಲಿ ಎಲ್ಲಿ ನೋಡಿದರೂ ಕಲಶಗಳೆ! ಜಲಕುಂಭಗಳೆಂದು ಕೆಲವರು ಅವು ಗಳನ್ನು ಕರೆದರೆ ಮತ್ತೆ ಕೆಲವರು ಅಮೃತಕಲಶಗಳೆಂದು ಕರೆಯುತ್ತಾರೆ! ಗರುಡನೇ ಅಲ್ಲವೇ ಅಮೃತ ವನ್ನು ಸ್ವರ್ಗದಿಂದ ತಂದವನು!

ಶಿಖರಮುಖದಲ್ಲಿ ವರ್ತುಲ ರೇಖೆಯೊಳಗೆ ಹುಚ್ಚಮಲ್ಲಿ ಗುಡಿಯ ಶಿಖರದಲ್ಲಿ ತಾಂಡವ ಶಿವಮೂರ್ತಿಯು ಕಂಡುಬರುತ್ತದೆ. ದುರ್ಗಗುಡಿಯ ಶಿಖರಮುಖದಲ್ಲಿ ಚಿತ್ರವಿಲ್ಲ: ಶಿಥಿಲವಾಗಿ ಹೋಗಿದೆ. ಮೂರ್ತಿಯನ್ನು ಕಡೆದಿರುವ ಶಿಲಾಫಲಕಗಳನ್ನು ಶಿಖರದ ಗೂಡುಗಳಲ್ಲೇ ಸ್ಥಾಪಿಸಿಲ್ಲ. ಆ ಫಲಕಗಳನ್ನು ಶಿಖರಕ್ಕೆ ಅಂಟಿಸಿ ಇಡಲಾಗಿದೆ. ಅದ ಕಾರಣವೇ ಬಿಡಿಯಾದ ಆ ಮೂರ್ತಿಯ ಹಲಗೆಗಳು ಈಗ ಮಾಯವಾಗಿವೆ. ಈ ದೇವಾಲಯದ ಗೋಡೆಗಳಲ್ಲಿ ಕೊರೆದ ಕಲ್ಲು ಹಲಗೆಗಳ ಜಾಲಂಧ್ರಗಳ ಮಾದರಿಗಳು ಒಂದು ವೈಶಿಷ್ಟ್ಯ. ಈ ಜಾಲಂಧ್ರಗಳ ಮಾದರಿಗಳು ಚಿತ್ರವಿಚಿತ್ರವಾಗಿವೆ. ಗೋಡೆಗಳಲ್ಲಿ ಅಳವಡಿಸಿರುವ ಕಲಾತ್ಮಕ ಜಾಲಂಧ್ರಗಳು ದೇವಾಲಯದೊಳಕ್ಕೆ ಬೆಳಕನ್ನು ಬಿಡುತ್ತವೆ. ಸಾಕಷ್ಟು ಗಾಳಿಯ ಸಂಚಾರಕ್ಕೂ ಅವಕಾಶ ಕೊಡುತ್ತವೆ. ಅವು ಚೌಕ. ಚದರ. ವರ್ತುಳಾಕಾರಗಳಾಗಿದ್ದು ಅವು ಗಳೊಳಗೆ ಸ್ವಸ್ತಿಕಾ. ಕಮಲ. ಹೀಗೆ ನಾನಾ ಚಿತ್ರಗಳಿರುತ್ತವೆ. ನಯನಾನಂದದಾಯಕ ದೃಶ್ಯ!

ದುರ್ಗ ದೇವಾಲಯವೆಂದು ಇದಕ್ಕೆ ಹೆಸರು ಬರಲು ಕಾರಣ ದೇವಾಲಯದ ಸುತ್ತಲೂ ಜೀರ್ಣಾವಸ್ಥೆಯ ಕೋಟೆಯ ಗೋಡೆಗಳು ಕಾಣಬರುತ್ತವೆ. ಈ ಕಾರಣದಿಂದ ದುರ್ಗ ಎಂಬ ಹೆಸರಿನಿಂದ ಇದನ್ನು ಕರೆದಿರಬಹುದೆಂದು ಊಹೆ. ಈ ದೇವಾಲಯದ ಮೂಲ ಅರ್ಚನಾ ಮೂರ್ತಿ ದುರ್ಗಿಯಲ್ಲ

ಹುಚ್ಚಿಮಲ್ಲಿಗುಡಿ

ಹುಚ್ಚಿಮಲ್ಲಿಯ ಗುಡಿ ಐಹೊಳೆ ಗ್ರಾಮದ ಉತ್ತರಕ್ಕಿರುವ ಹೊಲದಲ್ಲಿದೆ. ಅಗಾಧವಾದ ಗುಡಿ: ಅಷ್ಟು ಸರಳ ಶೈಲಿಯಲ್ಲಿ ರೂಪುಗೊಂಡಿದೆ. ಈ ಕಾರಣದಿಂದ ಈ ಗುಡಿಯು ದುರ್ಗ ಗುಡಿಗಿಂತ ಪ್ರಾಚೀನ ವೆಂದೂ, ಮೇಗುಟಿಗುಡಿಗಿಂತ ಬಹಳ ಪ್ರಾಚೀನವೆಂದೂ ಕಂಡು ಬರುತ್ತದೆ. ಮೂಲ ಮೂರ್ತಿ ಸ್ಥಾನ, ಅಥವಾ ಗರ್ಭಗುಡಿಯು ಸಭಾ ಮಂಟಪದ ಮಧ್ಯೆ, ಪೂರ್ವದ ಕಡೆಗಿದೆ. ಆದರೆ ಪ್ರದಕ್ಷಿಣಕ್ಕೆ ಅಡಚಣೆ

ಇಲ್ಲ. ಈ ಲಕ್ಷಣದ ದೃಷ್ಟಿಯಿಂದ ಈ ದೇವಾಲಯವು ಎಲಿಫೆಂಟಾ ಅಥವಾ ಘರಪುರದ ಗುಹೆಯ ದೇವಾಲಯವನ್ನೂ, ಎಲ್ಲೋರಿನ ದುಮರ್ಲೇನಾ ದೇವಾಲಯವನ್ನೂ, ಹೋಲುತ್ತದೆ.

ಇದರ ಶಿಖರವೂ ದುರ್ಗಗುಡಿಯ ಶಿಖರದಂತೆಯೇ ಉತ್ತರ ಭಾರತದ ಮಾದರಿ. ಶಿಖರ ಕೆಲಸದ ವಿವರಗಳನ್ನು ನೋಡುತ್ತ ಹೋದರೆ ದುರ್ಗಗುಡಿಯ ಶಿಖರಕ್ಕಿಂತ ಹಳೆಯದೆಂದೇ ಹೇಳಬೇಕು. ಉತ್ಕಲ ದೇಶದ ಭುವನೇಶ್ವರದಲ್ಲಿರುವ ಪರಶುರಾಮೇಶ್ವರ ದೇವಾಲಯಕ್ಕೂ, ಐಹೊಳೆಯ ಹುಚ್ಚಿಮಲ್ಲಿ ಗುಡಿಗೂ, ಶಿಖರ ರಚನೆಯಲ್ಲಿ ವಿಶೇಷ ಸಾಮ್ಯವಿದೆಯೆಂದು ಫರ್ಗ್ಯುಸನ್ನರು ಹೇಳಿದ್ದಾರೆ. ಅವರ ವಿಚಾರದಂತೆ ಈ ದೇವಾಲಯ ಶಿಖರದ ಕಾಲ ಸುಮಾರು ಕ್ರಿ.ಶ. ೬೫೦. ಇನ್ನೂ ಕೆಲವು ವಿದ್ವಾನ್ ವಿಮರ್ಶಕರು ಅದರ ಕಾಲವನ್ನು ಎರಡು ಮೂರು ಶತಮಾನಗಳ ಈಚೆಗೆ ತರುತ್ತಾರೆ. ಅಪ್ರತ್ಯಕ್ಷ ಸಾಧನಗಳಿಂದ ಮಾಡುವ ಅನುಮಾನಗಳಿವು. ಸಾಕಷ್ಟು ಸಂಶೋಧನೆಯು ಐಹೊಳೆ ಕ್ಷೇತ್ರದಲ್ಲಿ ನಡೆದಾಗ ಅಪ್ರಕಟಿತ ಪ್ರತ್ಯಕ್ಷ ಸಾಧನಗಳು ಕಾಲ ನಿರ್ಣಯಕ್ಕೆ ದಾರಿ ಸುಗಮವಾದೀತು. ಸದ್ಯ ಸ್ಥಿತಿಯಲ್ಲಿ ಐಹೊಳೆಯ ನಾನಾ ಕಾಲಗಳ, ನಾನಾ ದೇವಾಲಯಗಳು ಅಧ್ಯಯನಕ್ಕೆ ಸಾಕಷ್ಟು ಸಾಧನಗಳಾಗಿವೆ.

ಹುಚ್ಚಿಮಲ್ಲಿಗುಡಿಯ ತಳವಿನ್ಯಾಸ, ನವರಂಗ, ಕಂಬಗಳ ಸಾಲು, ಎತ್ತರದ ನವರಂಗ, ಪಾರ್ಶ್ವಗಳ ಕೆಳಮಾಳಿಗೆ ಈ ಲಕ್ಷಣಗಳಿಂದ ಮಾತ್ರ ಆ ದೇವಾಲಯದ ಕಾಲ ನಿರ್ಣಯ ಮಾಡುವುದು ಸರಿಯಲ್ಲ. ದುರ್ಗದೇವಾಲಯ, ಹುಚ್ಚಿಮಲ್ಲಿ ದೇವಾಲಯ ಇವೆರಡನ್ನೂ, ಜತೆಯಲ್ಲೇ ಸೂಕ್ಷ್ಮಪರೀಕ್ಷೆಗೆ ಒಳಪಡಿಸಬೇಕು. ಆಗ ಉತ್ತರ ಭಾರತ, ದಕ್ಷಿಣ ಭಾರತಗಳ ದೇವಾಲಯ ರಚನೆಯ ಲಕ್ಷಣಗಳಲ್ಲಿ, ಯಾವ ಯಾವ ಲಕ್ಷಣಗಳು, ಎಷ್ಟೆಷ್ಟು ಪ್ರಮಾಣದಲ್ಲಿವೆಯೆಂಬುದು ಸುರಿಸುಮಾರಾಗಿ ಅನುಮಾನ ಮಾಡಲು ಅನುಕೂಲವಾದೀತು. ಹುಚ್ಚಿಮಲ್ಲಿ ಗುಡಿಯನ್ನು ಕುರಿತು ಸ್ವರ್ಗವಾಸಿ ಬಿ. ವೆಂಕೋಬ ರಾಯರು ಹೇಳಿರುವ ಈ ವಚನವನ್ನು ಗಮನದಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯಕ.

> "ವಿನ್ಯಾಸವು ಗಜಪೃಷ್ಠದಂತೆ ಇರದೆ ಚತುರಸ್ರವಾಗಿದೆ. ಇದರಲ್ಲಿನ ಒಂದು ವಿಶೇಷವೇನೆಂದರೆ ಗರ್ಭಗೃಹಕ್ಕೂ, ನವರಂಗಕ್ಕೂ, ಸುಕನಾಸಿ ಅಥವಾ ಅಂತರಾಳವಿದೆ. ದೇವಸ್ಥಾನದ ವಿನ್ಯಾಸದಲ್ಲಿ ಸುಕನಾಸಿಯು ಬಂದಿರುವುದು ಇದೇ ಮೊದಲು."10

ಈ ವೈಲಕ್ಷಣ್ಯದಿಂದ ಹುಚ್ಚಿಮಲ್ಲಿ ಗುಡಿಯು ದೇವಾಲಯ ವಾಸ್ತುಶಿಲ್ಪ ವಿದ್ಯಾರ್ಥಿಗಳಿಗೆ ಅಮೂಲ್ಯವಾದದ್ದು.

ದೇವಾಲಯದ ಒಳಭಾಗವು ಬಹಳ ಸರಳವಾಗಿದೆ. ಗರ್ಭಗೃಹ ದ್ವಾರದ ಎಡಬಲಗಳ ಪಟ್ಟಿಕಾ ಮೂರ್ತಿದ್ವಯದ ಕರ್ಮಕೌಶಲ ಮೆಚ್ಚತಕ್ಕದ್ದಾಗಿದೆ. ಸಣ್ಣಸಣ್ಣದಾದ ಚೌಕಟ್ಟುಗಳಲ್ಲಿ ಮೂರ್ತಿಗಳನ್ನು ಕಣ್ಡರಿಸಲಾಗಿದೆ. ಹಲವಾದರೋ ಕಾಮಶಾಸ್ತ್ರ ವಿವರಣಾತ್ಮಕ ರೂಪಗಳಾಗಿವೆ. ಹಲವರು ಈ ಚಿತ್ರಗಳನ್ನು ನೋಡಿ 'ಇದೇನು ಅಶ್ಲೀಲ, ಅಸಹ್ಯ' ಎಂದು ಟೀಕೆ ಮಾಡುತ್ತಾರೆ. ಕಾಲಧರ್ಮ ಮತ್ತು ಮಾನವನ ಸಹಜ ದೌರ್ಬಲ್ಯಗಳನ್ನು ಗಣನೆಗೆ ತೆಗೆದುಕೊಂಡು ಈ ಬಗೆಯ ಚಿತ್ರಕರ್ಮದ ಔಚಿತ್ಯ-ಅನೌಚಿತ್ಯ ವಿಚಾರ ಮಾಡಬೇಕು. ಅದು ದೇವಾಲಯವೆಂಬ ಪ್ರಜ್ಞೆ ಇದ್ದರೆ ಉಳಿದೆಲ್ಲ ಕೀಳು ಭಾವನೆಗಳೂ ಮಂಜಿನಂತೆ ಮಾಯವಾಗಿ, ಮನಸ್ಸು ನಿರ್ಮಲವಾಗುತ್ತದೆ. ಶ್ರವಣಬೆಳ್ಗೊಳದ ಗೋಮಟೇಶ್ವರನ ಮುಂದೆ ನಿಂತಾಗ ನಗ್ನತೆಯೆಂಬ ನರನ ಕಶ್ಮಲ ಕಲ್ಪನೆಯೇ ಮನಸ್ಸಿಗೆ ತಾಕುವುದಿಲ್ಲ. ಎಲ್ಲ ನಿರ್ಮಲ, ಎಲ್ಲ ಪವಿತ್ರ! ಕಶ್ಮಲ ಕೂಪದಲ್ಲಿ ಕಾಲುಗಳೂರಿದ್ದರೂ ನಿರ್ಮಲ ಸ್ವರ್ಗಸೀಮೆಯಲ್ಲಿ ತಲೆಯು ವಿಹರಿಸುತ್ತಿರುತ್ತದೆ!

ಈ ಗುಡಿಯ ಮುಂಭಾಗದ ದ್ವಾರ ಪಟ್ಟಿಗಳ ಕೆಲಸವಾದರೂ ತಲೆದೂಗಿಸುವಂತಹುದು. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯದ ಮುಂದಿನ ಮಂಟಪ ನಾಲ್ಕು ಕಂಬಗಳ ಮೇಲೆ

---

10 ಅದೇ, ಪುಟ, ೬೮

ನಿಂತಿವೆ. ಈ ಮಂಟಪದ ಇಕ್ಕೆಲಗಳಲ್ಲೂ ಜಗಲಿಗಳಿದ್ದು ದೊಡ್ಡ ಕಲಶಗಳಿಂದ ಚಿತ್ರಿತವಾಗಿದೆ. ಲಾಡ್‌ಖಾನ್ ದೇವಾಲಯದ ಈ ಭಾಗದಲ್ಲೂ ಇದೇ ಬಗೆಯ ಕೆಲಸವಿದೆ. ಈ ಮಂಟಪದ ಛಾವಣಿ (ಒಳಮಾಳಿಗೆ)ಯಲ್ಲಿ ನವಿಲಿನ ಮೇಲೆ ಕೂತಿರುವ ಕಾರ್ತಿಕೇಯ ಮೂರ್ತಿಯನ್ನು ನೋಡುತ್ತೇವೆ. ಕಾರ್ತಿಕೇಯ ಮೂರ್ತಿಯ ಬಲಗೈಯಲ್ಲಿ ಈಟಿ ಇದೆ; ಎಡಗೈಯಲ್ಲಿ ಹೂ ಇದೆ. ಸುತ್ತ ಕಾರ್ತಿಕೇಯನ ಪರಿವಾರದವರು ಪ್ರಮುಖ ಭಕ್ತಗಣ ಕಾಣಿಕೆಗಳನ್ನರ್ಪಿಸುತ್ತಿದ್ದಾರೆ. ನವಿಲಿನ ಪಾದಗಳ ಬಳಿ ಬಾಕು ಗುರಾಣಿಗಳನ್ನು ಧರಿಸಿದ ಮೂರ್ತಿಯೊಂದು ದೀರ್ಘದಂಡ ನಮಸ್ಕಾರ ಮಾಡುತ್ತಿರುವ ಹಾಗಿದೆ. ಇಲ್ಲಿ ಕಾರ್ತಿಕೇಯನನ್ನು ಒಂದೇ ಮುಖದಿಂದ ತೋರಿಸಲಾಗಿದೆ; ಷಣ್ಮುಖನಿವನು; ಆರು ತಲೆಗಳನ್ನು ತೋರಿಸಬೇಕಾಗಿತ್ತು. ಬನವಾಸಿ ಕದಂಬರೂ, ಬಾದಾಮಿಯ ಚಾಳುಕ್ಯರೂ "ಕಾರ್ತಿಕೇಯ ಮಹಾಸೇನ ಪಾದಾನುಧ್ಯಾತರು" ಈ ದೇವಾಲಯದ ಎದುರಿಗೆ ಶಿಲಾಶಾಸನದ ಕಲ್ಲಿದೆ. ಕ್ರಿ. ಶ. ೭೦೮ರಲ್ಲಿ ಚಾಳುಕ್ಯ ವಿಜಯಾದಿತ್ಯನು ದೇವರಿಗೆ ಏನೋ ದಾನ ಮಾಡಿದನೆಂದು ಈ ಶಾಸನದಿಂದ ತಿಳಿದು ಬರುತ್ತದೆ. ಅಂದರೆ ದೇವಾಲಯವು ವಿಜಯಾದಿತ್ಯನ ಕಾಲಕ್ಕಿಂತ ಹಳೆಯದೆಂಬುದು ಸ್ಪಷ್ಟವಾಯಿತು.

ಮೇಗುಟಿ ದೇವಾಲಯ

ಐಹೊಳೆಗೆ ಪೂರ್ವದಿಕ್ಕಿನಲ್ಲಿರುವ ಗುಡ್ಡದ ಮೇಲಿದೆ ಈ ದೇವಾಲಯ. ಗುಡ್ಡದ ಮೇಲಿನ ಗುಡಿ ನಿಜವಾಗಿಯೂ 'ಮೇಲ್ಗುಡಿ' ಅಥವಾ 'ಮೇಗುಡಿ' ಎಂದಾಗಬೇಕಾಗಿತ್ತು. ಜನರ ಬಾಯಲ್ಲಿಂದು 'ಮೇಗುಟಿ' ಎಂದಾಗುತ್ತಿದೆ. ದೇವಾಲಯದ ಶಿಖರ, ದೇವಾಲಯದ ಕೆಳಭಾಗವೆಲ್ಲ ಬಿದ್ದು ನಾಶವಾಗಿ ಹೋಗಿದೆ. ದೇವಾಲಯದ ಪೂರ್ವದ ಕಡೆ ಕಲ್ಲಿನ ಹಲಗೆಯ ಮೇಲೊಂದು ಶಾಸನ ಸುಂದರವಾಗಿ ಕೆತ್ತಲ್ಪಟ್ಟಿದೆ. ಅದು ಸಂಸ್ಕೃತದಲ್ಲಿದೆ. ಇಮ್ಮಡಿ ಪುಲಿಕೇಶಿಯ ಆಳ್ವಿಕೆಯ ಕಾಲದಲ್ಲಿ, ಕ್ರಿ.ಶ. ೬೩೪ರಲ್ಲಿ, ರವಿಕೀರ್ತಿಯು ಈ ದೇವಾಲಯವನ್ನು ಕಟ್ಟಿಸಿದನೆಂದು ಈ ಶಾಸನವು ಸಾರುತ್ತಿದೆ.

ಮೇಗುಟಿಯ ದೇವಾಲಯದ ತಳವಿನ್ಯಾಸ ಚೌಕ; ಉದ್ದವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಅಥವಾ ನವರಂಗ, ಹೀಗೆ ಮೂರು ಭಾಗಗಳಾಗಿ ವಿಂಗಡವಾಗಿದೆ. ಗರ್ಭಗೃಹಕ್ಕೆ ಪ್ರದಕ್ಷಿಣಾಲಯವಿದೆ. ಚಚ್ಚೌಕದ ದೇವಾಲಯದ ಸುತ್ತ ಎತ್ತರದ ಗೋಡೆಗಳ ಪ್ರಾಕಾರವಿದೆ. ಇದು ಶುದ್ಧ ದ್ರಾವಿಡ ಶೈಲಿಯ ರಚನೆಯೆಂಬುದು ಪ್ರತ್ಯಕ್ಷ, ಪ್ರತ್ಯಂಗದಲ್ಲೂ ಕಂಡುಬರುತ್ತದೆ. ಶಿಥಿಲಾವಸ್ಥೆಯಲ್ಲಿರುವ ದೇವಾಲಯದ ಮೇಲೆ ಕೋಣೆಯಂತಿರುವ ಸಣ್ಣ ದೇವಾಲಯವಿದೆ. ಈ ರಚನೆಯ ಮೇಲೆ ಶಿಖರವಿತ್ತು. ಮಾಳಿಗೆಯ ಮೇಲೊಂದು ದೇವಾಲಯದ ರಚನೆ ಪ್ರಾಚೀನ ದೇವಾಲಯಗಳ ಒಂದು ಲಕ್ಷಣ.

ದೇವಾಲಯದ ಒಳಭಾಗ ಕತ್ತಲು ಗವಿಯಂತಿದೆ. ದೇವಾಲಯದೊಳಗೆ, ಒಂದು ಗೋಡೆಯ ಬಳಿ ಪೀಠದ ಮೇಲೆ ದೊಡ್ಡ ಜಿನಬಿಂಬವೊಂದು ನಿಂತಿದೆ. ಪ್ರದಕ್ಷಿಣ ಮಾರ್ಗದಲ್ಲಿ, ಪಶ್ಚಿಮದ ಕಡೆ ಅಂಬಾದೇವಿಯ ಮೂರ್ತಿಯನ್ನು ಕೆತ್ತಿರುವ ಶಿಲಾಫಲಕವಿದೆ. ದೇವಿಯ ಎರಡೂ ಪಾರ್ಶ್ವದಲ್ಲಿ ಸೇವಕರು ಮಗುವನ್ನು ಹಿಡಿದು ನಿಂತಿದ್ದಾರೆ. ಶಾಸನದಲ್ಲಾದರೋ ದೇವಿಯು ಸಿಂಹದ ಮೇಲೆ ಕೂತಿರುವ ಹಾಗೂ, ಆಕೆಯ ಎರಡೂ ತೊಡೆಗಳ ಮೇಲೆ ಎರಡು ಮಕ್ಕಳು ಮಂಡಿಸಿರುವ ಹಾಗೂ ವರ್ಣಿತವಾಗಿದೆ. ಗರ್ಭಗೃಹದ್ವಾರವೂ, ಮೂಲಮೂರ್ತಿಯೂ ನಿರಾಲಂಕೃತವಾಗಿವೆ; ಸರಳ ಸುಂದರವಾಗಿವೆ. ಮೂಲ ಜಿನಮೂರ್ತಿಯನ್ನು ಕಡೆದಿರುವ ಕಲ್ಲನ್ನು ನೋಡಿದರೆ ದ್ವಾರ ನಿರ್ಮಾಣಕ್ಕೆ ಮೊದಲೇ ಅದನ್ನೊಳಗೆ ಇಟ್ಟಿರಬೇಕೆಂದು ಹೇಳಬೇಕಾಗುತ್ತದೆ; ಅಷ್ಟು ದಪ್ಪವಾಗಿದೆ ಆ ಕಲ್ಲು. ದೇವಾಲಯದ ಹೊರಗೋಡೆಗಳ ಮೇಲಾವ ಚಿತ್ರಕರ್ಮವೂ ಇಲ್ಲ. ಬರೀ ಗೋಡೆಯ ಕಣ್ಣೇನೆ ತಪ್ಪಿಸಲು ಚಾಚು ಗಂಬಗಳನ್ನಿಡಲಾಗಿದೆ. ಹೀಗೆ ವಿಭಾಗವಾದ ಗೋಡೆಯ ಒಂದೊಂದು ವಿಭಾಗದಲ್ಲೂ ಗೂಡುಗಳಿವೆ. ಅವುಗಳಲ್ಲಿ ನಾನಾ ಮೂರ್ತಿಗಳನ್ನಿಟ್ಟು ಅಲಂಕರಿಸಬೇಕೆಂಬುದು ಉದ್ದಿಷ್ಟ. ಗೂಡುಗಳನ್ನಲಂಕರಿಸಬೇಕಾಗಿದ್ದ ವಿಗ್ರಹಗಳೊಂದೆರಡು ದೇವಾಲಯದ ಹೊರಗಡೆ ಬಿದ್ದಿವೆ. ದೇವಾಲಯದ ಪೀಠ ಭಾಗದ ಸುತ್ತ ಪಟ್ಟಿಯಲ್ಲಿ ನಾನಾ ಬಗೆಯ ಬೊಂಬೆಗಳನ್ನು ಕೆತ್ತಲಾಗಿದೆ. ಅಪೂರ್ಣವಾಗಿ ಮಾಡಿಬಿಟ್ಟಿರುವ

ಸಣ್ಣ ಸಣ್ಣ ಚೈತ್ಯದ ಕಿಟಕಿಗಳನ್ನು ಕಂಡರೆ ದೇವಾಲಯದ ನಿರ್ಮಾಣ ಪೂರ್ತಿಯಾಯಿತೋ ಇಲ್ಲವೋ ಎಂಬ ಸಂಶಯ ಉಂಟಾಗುತ್ತದೆ. ಅರೆಬರೆ ಕೆಲಸವಾಗುತ್ತಿದ್ದಾಗಲೇ ಕಾರಣಾಂತರಗಳಿಂದ ಮುಕ್ತಾಯದ ಕೆಲಸ ನಿಂತು ಹೋಗಿರಬೇಕೆಂದು ಅನುಮಾನ ಮಾಡಬೇಕಾಗುತ್ತದೆ.

ಗುಡ್ಡದ ಕೆಳಗೆ ಮೇಗುಟಿ ದೇವಾಲಯಕ್ಕೆ ನೇರವಾಗಿ ಎರಡಂತಸ್ತಿನ ಗುಡಿಯೊಂದಿದೆ. ಅರ್ಧ ಕಲ್ಪನೆ, ಕೊರೆದದ್ದು: ಉಳಿದರ್ಧ ಕಲ್ಲುಗಳಿಂದ ಕಟ್ಟಿದ್ದು. ಎರಡೂ ಅಂತಸ್ತುಗಳಲ್ಲೂ ಉದ್ದನೆಯ ಕೈಸಾಲೆಗಳಿವೆ. ಇವಾದರೂ ಮುಂಭಾಗದಲ್ಲಿ ನೋಡಿದಾಗ ಬಲವೂ, ಭಾರಿಯೂ, ಆದ ಕಂಬಗಳ ಮೇಲೆ ನಿಂತಿವೆ. ಮೇಲಂತಸ್ತಿನ ಕೈಸಾಲೆಯ ಒಳಮಾಳಿಗೆಯಲ್ಲಿ ಮುಕ್ಕೊಡೆಯ ಜಿನಬಿಂಬವೊಂದನ್ನು ಬಿಡಿಸಲಾಗಿದೆ. ಮೂರ್ತಿಯಾದರೋ ಪೀಠದಲ್ಲಿ ಪದ್ಮಾಸನಸ್ಥವಾಗಿದೆ.

ಹರಿಹರಮೂರ್ತಿಯ ದೇವಾಲಯವಾಗಿರಬಾರದೇಕೆ?

ಐಹೊಳೆ ಗ್ರಾಮಕ್ಕೆ ದಕ್ಷಿಣದಲ್ಲಿ (ರೆವಿನ್ಯೂ ಸರ್ವೆ ೨೭೦ನೆ ನಂಬರು ಹೊಲದಲ್ಲಿ) ಒಂದು ದೇವಾಲಯವಿದೆ. ಅನೇಕ ಅಂಶಗಳಲ್ಲಿ ಇದು ಹುಚ್ಚಿಮಲ್ಲಿ ಗುಡಿಯನ್ನು ಹೋಲುತ್ತದೆ. ಅಲ್ಲಿರುವಂತೆಯೇ ಇಲ್ಲೂ ಭಾರಿ, ಅಗಾಧವಾದ ಕಂಬಗಳಿವೆ. ಗರ್ಭಗೃಹವೆಂದು ಪ್ರತ್ಯೇಕ ಒಳಗುಡಿ ಇಲ್ಲ. ಸಭಾಮಂಟಪದಲ್ಲೇ ಮೂಲಮೂರ್ತಿ ಸ್ಥಾನವಿದೆ. ಗೋಡೆಗಳ ಹೊರಮೈ ಸಹ ಹುಚ್ಚಿಮಲ್ಲಿ ಗುಡಿಯನ್ನೇ ಹೋಲುತ್ತದೆ. ಶಿಖರದ ರಚನೆಯಲ್ಲಿ ಮಾತ್ರ ಹುಚ್ಚಿಮಲ್ಲಿ ಗುಡಿಯಲ್ಲಿ ರೇಖೆಗಳು ನೇರವಾಗಿದ್ದರೆ ಈ ದೇವಾಲಯದಲ್ಲಿ ರೇಖೆಗಳು ಬಾಗಿ, ಅರ್ಧಚಂದ್ರಾಕೃತಿಯಾಗುತ್ತವೆ.

ದೇವಾಲಯವು ಪೂರ್ವಾಭಿಮುಖವಾಗಿದೆ. ಮಧ್ಯೆ ಮುಖ್ಯಮೂರ್ತಿ ಗೃಹದಲ್ಲಿ ನರಸಿಂಹಾಕೃತಿಯ ಶಿಲ್ಪವಿದೆ. ಉತ್ತರದ ಗೂಡಿನಲ್ಲಿ ಭೈರವ ಮೂರ್ತಿ ಇದೆ. ದಕ್ಷಿಣ ಭಾಗದ ಗೂಡಿನ ಮೂರ್ತಿಯು ಮಾಯವಾಗಿದೆ. ಅಂದರೆ ಇದು ವಿಷ್ಣುಗೇಹವಾಗಿರಬಹುದೆಂದು ಹೇಳಬಹುದು. ಪೂರ್ವದ್ವಾರದ ಮುಂದೆ ಮುಖಮಂಟಪವೊಂದಿದೆ. ನಾಲ್ಕು ಬಲವಾದ ಕಂಬಗಳೀ ಮಂಟಪವನ್ನು ಹೊತ್ತುನಿಂತಿವೆ. ಲಾಡ್‌ಖಾನ್ ದೇವಾಲಯದ ಮುಖಮಂಟಪದ ಕಂಬಗಳಿಗೂ, ನರಸಿಂಹ ದೇವಾಲಯದ ಮುಖಮಂಟಪದ ಕಂಬಗಳಿಗೂ, ಹೆಚ್ಚು ಸಾಮ್ಯವಿದೆ. ಎರಡೂ ದೇವಾಲಯಗಳ ಮುಖ ಮಂಟಪಗಳ ಕಂಬಗಳ ಮುಖಗಳ ಮೇಲೂ ನಿಂತಭಂಗಿಯ ಜೋಡು ವಿಗ್ರಹಗಳಿವೆ. ಭುವನೇಶ್ವರಿಯ ಶಿಲಾಫಲಕ (ಮುಖ ಮಂಟಪ)ದಲ್ಲಿ ಶಿವ ತಾಂಡವ ಮೂರ್ತಿಯನ್ನು ಬಿಡಿಸಲಾಗಿದೆ. ಮುಖಮಂಟಪದ ಸೂರುಗಳು, ಚೂಳಿ ಕಲಾಕೃತಿಗಳು, ಲತಾಕರ್ಮ ಇವೇ ಮೊದಲಾದವುಗಳನ್ನು ಕಂಡಾಗ ಎಲ್ಲೋರದ ಕೈಲಾಸನಾಥ ದೇವಾಲಯದ ನೆನಪಾಗುತ್ತದೆ. ಅಲ್ಲಿನ ಕರ್ಮಕೌಶಲವನ್ನಿಲ್ಲಿ ನೋಡಬಹುದು.

ದೇವಾಲಯದ ಮಹಾಮಂಟಪವು ಮೂರು ಭಾಗಗಳಾಗಿ ವಿಂಗಡವಾಗಿದೆ. ಮಧ್ಯ ಭಾಗದ ಮಾಳಿಗೆ ಅಥವಾ ಮೇಲ್ಹಾವಣಿ ಚಪ್ಪಟೆಯಾಗಿದೆ. ಎರಡೂ ಪಕ್ಕಗಳ ಮಾಳಿಗೆಯ ಮೇಲೆ ಹಾಸಿರುವ ಕಲ್ಲು ಚಪ್ಪಡಿಗಳು ಗೋಡೆಗಳ ಮೇಲೆ ಇಳಿಜಾರಾಗಿ ನಿಲ್ಲುತ್ತವೆ. ಈ ದೇವಾಲಯಗಳಲ್ಲೆಲ್ಲ ಬಳಸಿರುವುದು ಮೃದುವಾದ, ಒಂದು ಜಾತಿಯ ಬಳಪದಕಲ್ಲು. ಈ ಬಗೆಯ ಇಳಿಜಾರು ಕಲ್ಪನೆಯು ದೇವಾಲಯದ ಪ್ರಾಚೀನತೆಯ ಒಂದು ಲಕ್ಷಣ ಮತ್ತು ದೇವಾಗಾರ ನಿರ್ಮಾಣ ಕೌಶಲದಲ್ಲಿ ಒಂದು ಹಂತ.

ಮುಖ್ಯದ್ವಾರ ದಾಟಿದ ಕೂಡಲೆ ತಲೆ ಮೇಲಕ್ಕೆತ್ತಿದರೆ ಭುವನೇಶ್ವರಿ: ಅಲ್ಲಿ ವಿಷ್ಣುವಿನ ನಾನಾ ಅವತಾರಗಳು. ಮಧ್ಯಾಂಕಣದ ಭುವನೇಶ್ವರಿಯಲ್ಲಿ ಅಷ್ಟ ದಿಕ್ಪಾಲಕರು. ಗರ್ಭಗೃಹದ ಹತ್ತಿರ ಸಾಗಿದಾಗ ತಲೆ ಮೇಲಕ್ಕೆತ್ತಿದರೆ ಅಲ್ಲೇನೂ ಇಲ್ಲ. ಶಿಲ್ಪಿಯು ಆ ಕೆಲಸವನ್ನು ಪೂರ್ಣ ಮಾಡಲಿಲ್ಲವೋ ಏನೋ. ಅಲಂಕಾರ ಕಂಬಗಳ ಕೆಳಭಾಗ, ಮೇಲ್ಭಾಗಗಳ ಸುತ್ತುವರಿಯುವ ಪಟ್ಟಿಕೆಗಳಲ್ಲಿ ಲತಾಲೋಕ, ಪತ್ರಲೋಕ, ಸೌಂದರ್ಯ ವೈಭವ. ಬೋದಿಗೆಗಳ ಮೇಲೂ ಇದೇ ಬಗೆಯ ಅಲಂಕಾರ. ಈ ಪಟ್ಟಿಕಾಲಂಕಾರಗಳ ಮೇಲೆ ಶಿವಗಣದ ಸಾಲು. ಕುಬ್ಜಮೂರ್ತಿಗಳ ವೈವಿಧ್ಯತೆ. ನೋಟಕರನ್ನು ಮೂಕರನ್ನಾಗಿ ಮಾಡುತ್ತದೆ. ಗರ್ಭಗೃಹ ದ್ವಾರದ ಮೇಲ್ಪಟ್ಟಿಕೆಯಲ್ಲಿ ಗರುಡಲಾಂಛನ ಕಂಡುಬರುತ್ತದೆ. ಈ ಗರುಡ ಎರಡೂ ಕೈಗಳಲ್ಲೂ ಎರಡು ನಾಗರ ಬಾಲಗಳನ್ನು ಹಿಡಿದಿದ್ದಾನೆ. ಎಡ ಬಲ ದ್ವಾರ ಪಟ್ಟಿಗಳ ಮೇಲೆ ನಾಗ

ಮೂರ್ತಿಗಳಿವೆ. ದ್ವಾರಪಾಲಕ ಮೂರ್ತಿಗಳೊಂದು ಶಿವ ಸಂಕೇತಗಳಿಂದ ಕಾಣುತ್ತಿದ್ದರೆ ಇನ್ನೊಂದು ವಿಷ್ಣು ಸಂಕೇತಗಳಿಂದ ಕಂಡು ಬರುವ ಹಾಗಿದೆ. ಮೂಲಮೂರ್ತಿಯು ಹರಿಹರನಾಥನಾಗಿರಬಾರದೇಕೆ? ಈ ವಿಷ್ಣು ದೇವಾಲಯದ ಮುಂಭಾಗದಲ್ಲಿ ಉತ್ತರದ ಕಡೆ ಈ ಶಾಸನವಿದೆ:

೧ ॥ಸ್ವಸ್ತಿ॥ ಜಂಬುದ್ವೀಪಾನ್ತರೇ ಕಶ್ಚಿತ್
೨ ವಾಸ್ತುಪ್ರಾಸಾದ ತದ್ಗತಃ
೩ ನರಸೊಬ್ಬ ಸಮೋ ವಿದ್ವಾನ್
೪ ನ ಭೂತೋ ನ ಭವಿಷ್ಯತಿ"

ಶಾಸನ ಲಿಪಿಯನ್ನು ನೋಡಿದರೆ ಅದು ಕ್ರಿ.ಶ. ೯ನೆಯ ಶತಮಾನದ್ದೆಂದು ಹೇಳಬಹುದು. ಈ ದೇವಾಲಯವನ್ನು ನಿರ್ಮಿಸಿದವನು ನರಸೊಬ್ಬನೋ. ಅಲ್ಲವೋ. ಹೇಳುವುದು ಕಷ್ಟ. ಆದರೆ ಹೆನ್ರಿ ಕಜನ್ಸ್‌ರವರ

"This is probably the name of the man who had the charge of the work of the restoration of the building when it was first converted to Shaiva worship.[11]

ಈ ವಾಸ್ತುಪ್ರಾಸಾದ ಶಿಲ್ಪಿ ವಿಷ್ಣು ದೇವಾಲಯವನ್ನು ಶಿವಾಲಯವನ್ನಾಗಿ ಪರಿವರ್ತನಗೊಳಿಸುವ ಕಾರ್ಯದಲ್ಲಿ ನಿಯುಕ್ತನಾದವನಾಗಿರಬೇಕು. ಎಂದು ಹೆನ್ರಿ ಕಜನ್ಸರು ಅನುಮಾನ ಮಾಡಿದ್ದಾರೆ. ಹೀಗೆ ಹೇಳಲು ಮತ್ತೆ ಯಾವ ಸಾಕ್ಷ್ಯ ಸಾಧನಗಳು ಅವರಿಗಿದ್ದುವೋ ನಮಗೆ ಗೊತ್ತಿಲ್ಲ. ಈ ಶಾಸನಕ್ಕೊಂದು ವಿಶೇಷವುಂಟು. ಐಹೊಳೆ ಕ್ಷೇತ್ರದಲ್ಲಿ ನರಸೊಬ್ಬನೆಂಬ ಶಿಲ್ಪಿಯೊಬ್ಬನಿದ್ದ. ಅವನಿಗೆ ಸಮನಾದ ವಾಸ್ತುಪ್ರಾಸಾದಗಳನ್ನು ನಿರ್ಮಿಸಬಲ್ಲವನು ಭರತಖಂಡದೊಳಗೇ ಇಲ್ಲ.

ಚಾಳುಕ್ಯ ಮಾರ್ಗದ ಅವತಾರ ಸ್ಥಾನ

ಕೊಂಚ ಹೆಚ್ಚು ಕಡಿಮೆ ವಿಷ್ಣು ದೇವಾಲಯವನ್ನೇ ಹೋಲುವ ಗುಡಿಯೊಂದು ಗಳಗನಾಥ ದೇವಾಲಯದ ಬಳಿ ಇದೆ. ಬಹಳ ಮಟ್ಟಿಗೆ ಶಿಥಿಲವಾಗಿದೆ. ಉಳಿದಿರುವುದು ಮಹಾದ್ವಾರ. ಮೂಲಮೂರ್ತಿಯು ಲೀನ. ದ್ವಾರಪಟ್ಟಿಯ ಮೇಲ್ಭಾಗದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದೇವಾಲಯದ ಶಿಖರವು ಹಂತ ಹಂತವಾಗಿ. ಮೆಟ್ಟಿಲು ಮೆಟ್ಟಿಲಾಗಿ. ಏರುತ್ತದೆ. ಉತ್ತರ ಭಾರತದ ಶಿಖರದ ಲಕ್ಷಣಗಳಿವೆ. ಗರ್ಭಗೃಹದ್ವಾರದ ಮೇಲೆ ಗರುಡ ಶಿಲ್ಪವಿದೆ. ದ್ವಾರದ ಎಡಬಲ ಶಿಲಾಗಂಬಗಳ ಮೇಲೆ ಗಂಗಾ ಯಮುನಾ ಮೂರ್ತಿಗಳಿವೆ. ಮೂಲಮೂರ್ತಿಯ ಸ್ಥಾನದಲ್ಲಿ ಲಿಂಗವಿದೆ. ಇದು ಶಿವಾಲಯವಾದಾಗ ಗುಂಡುಕಲು ಸುವಿಚ್ಛಿತ್ತಿ ಮೊದಲಾದವು ಮುಟ್ಟಿಕೊಂಡವು. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಹೊರಗೆ ಸಪ್ತಮಾತೃಕಾ ಫಲಕವೊಂದಿದೆ.

ಲಾಡ್‌ಖಾನ್ ದೇವಾಲಯದ ಎದುರಿಗೆ ಐದು ದೇವಾಲಯಗಳಿವೆ: ಎದುರಿಗೇ ನಾಲ್ಕಿವೆ. ಪಕ್ಕಿಯ ಈಶಾನ್ಯ ಮೂಲೆಯಲ್ಲಿ ಮತ್ತೊಂದಿದೆ. ಅದಕ್ಕೇ ಒಂದು ದೇವಾಲಯವನ್ನು ಜೋಡಿಸಿದ್ದಾರೆ. ಸಭಾ ಮಂಟಪವು ಚದರವಾಗಿದೆ. ಮಧ್ಯೆ ನಾಲ್ಕು ಕಂಬಗಳಿವೆ. ಭವ್ಯವಾದ ಮಾಳಿಗೆ ಎತ್ತರವಾಗಿದೆ. ಮಾಳಿಗೆಯ ಎತ್ತರದಷ್ಟೇ ಉತ್ತರದ ಗೋಡೆ ಏರುತ್ತದೆ. ಉಳಿದ ಮೂರು ದಿಕ್ಕುಗಳಲ್ಲೂ ಗೋಡೆಗಳು ತಗ್ಗಾಗಿದ್ದು ಮಾಳಿಗೆ ಇಳಿಜಾರಾಗಿದೆ. ಪಶ್ಚಿಮದ ಗೋಡೆಯಲ್ಲಿ ಅಗಲವಾದ ದ್ವಾರವಿದೆ. ಇದರಿಂದಾಚೆ ಮಹಾದ್ವಾರವಿದೆ. ಲಾಡ್‌ಖಾನ್ ದೇವಾಲಯದಲ್ಲಿರುವ ಹಾಗೆಯೇ ಹಿಂದಿನ ಗೋಡೆಯ ಮೇಲೆ ಸೂರ್ಯನ ಶಿಲ್ಪವಿದೆ. ಸಭಾಮಂಟಪದ ದ್ವಾರದ ರಚನೆ ಸರಳವಾಗಿದ್ದರೂ ಐಹೊಳೆಯ ಇತರ ದೇವಾಲಯಗಳಿಂದ ಭಿನ್ನವಾಗಿದೆ. ದ್ವಾರಪಟ್ಟಿಗಳ ಮೇಲೆ ಗಂಗಾ ಯಮುನಾ ಮೂರ್ತಿಗಳಿವೆ.

---

[11] *Chalukyan Architecture*,, p. 44

ಐಹೊಳೆಯ ನೈರುತ್ಯ ಮೂಲೆಯಲ್ಲಿ ವಿರೂಪಾಕ್ಷ ದೇವಾಲಯವಿದೆ. ಗಳಗನಾಥ ದೇವಾಲಯ ಅದರ ಬಳಿ ಎರಡು ಮೂರು ಗುಡಿಗಳಿವೆ. ಜೈನ ಬಸ್ತಿಗಳಿವೆ. ವಿರೂಪಾಕ್ಷ ದೇವಾಲಯವೆಂದು ಈಗ ಅದನ್ನು ಕರೆಯುತ್ತಿದ್ದರೂ ಐಪಳ ಮಾಡಿ ಅದೂ ಜೈನ ಬಸ್ತಿಯೇ ಆಗಿರಬೇಕೆಂದು ಕಂಡುಬರುತ್ತದೆ. ಗುಂಡು ಕಂಬಗಳು: ಕೆಳಭಾಗ ನಾಲ್ಕು ಮುಖ. ಮೇಲಕ್ಕೇರುತ್ತ, ಏರುತ್ತ ಚಕ್ರಾಕಾರ: ಅವರಲ್ಲಿ ನಾನಾ ತರದ ಚಿತ್ರಕರ್ಮ; ಬಳ್ಳಿವರಿದ ಸುತ್ತುಪಟ್ಟಿಗಳು. ಸಭಾ ಮಂಟಪದಲ್ಲಿ ನಾಲ್ಕು ಕರಿಯ ಕಂಬಗಳು. ಈ ಕಂಬಗಳ ತುಂಬ ಶಿಲ್ಪ ಕೌಶಲ ಕಂಡು ಬರುತ್ತದೆ. ಈ ದೇವಾಲಯದ ಕಂಬಗಳನ್ನು ನೋಡಿದರೆ ಚಾಳುಕ್ಯ ಮಾರ್ಗದ ಶಿಲ್ಪಕರ್ಮದ ಮುದ್ರೆ ಸ್ಪಷ್ಟವಾಗಿ ಕಂಡುಬರುತ್ತದೆ. ಪಶ್ಚಿಮದ ಕಡೆ ಕುಂಬಾರ ಗೇರಿಯಲ್ಲಿ ದೇವಾಲಯವೊಂದಿದೆ. ರಾಚಿಗುಡಿಯೆಂದು ಜನರು ಅದನ್ನು ಕರೆಯುತ್ತಾರೆ.

ಒಟ್ಟಿನಲ್ಲಿ ಐಹೊಳೆ ದೇವಾಲಯಗಳಲ್ಲಿ ಮುಖ್ಯವಾದವುಗಳನ್ನು, ಪ್ರಾಚೀನವಾದವುಗಳನ್ನು, ತಿಳಿಸಿ, ಅವುಗಳ ಲಕ್ಷಣಗಳನ್ನು ಸೂಕ್ಷ್ಮವಾಗಿ ತಿಳಿಸಲಾಗಿದೆ. ವಿವರಗಳಿಗಾಗಲಿ, ವಿಸ್ತಾರ ವರ್ಣನೆಗಾಗಲಿ ಇದು ಸ್ಥಳವಲ್ಲ. ಸ್ಥೂಲವಾಗಿ ಉತ್ತರ ಮಾರ್ಗ ಮತ್ತು ದಕ್ಷಿಣ ಮಾರ್ಗದ ವಾಸ್ತುಶಿಲ್ಪವು ದೇವಾಲಯದ ರೂಪರಚನೆಯಲ್ಲಿ ಬೆರೆತು, ಚಾಳುಕ್ಯ ಅಥವಾ ಕರ್ನಾಟಕಮಾರ್ಗವೆಂಬ ಮೂರನೆಯ ಮಾರ್ಗದ ವಾಸ್ತುಶಿಲ್ಪದ ಅವತಾರ ಹೇಗಾಯಿತೆಂಬುದನ್ನು ತೋರಿಸಲಾಗಿದೆ.

ಪಟ್ಟದಕಲ್ಲಿನ ಹತ್ತು ದೇವಾಲಯಗಳು

ದೇವಾಲಯಗಳ ನಿರ್ಮಾಣದ ವಿಕಾಸಾಧ್ಯಯನಕ್ಕೆ ಐಹೊಳೆಯನ್ನು ಬಿಟ್ಟರೆ ಎರಡನೆಯ ಕ್ಷೇತ್ರ ಪಟ್ಟದಕಲ್ಲು. ಇಲ್ಲೂ ಅನೇಕ ದೇವಾಲಯಗಳು ಜೀರ್ಣಾವಸ್ಥೆಯ ನಾನಾ ಸ್ಥಿತಿಗಳಲ್ಲಿವೆ. ಅವುಗಳಲ್ಲಿ ಹತ್ತು ದೇವಾಲಯಗಳಾದರೂ ಕಲಾಭ್ಯಾಸಿಗಳ ಅಧ್ಯಯನಕ್ಕೆ ಅರ್ಹವಾದವುಗಳು.

> *"ಪಾಪನಾಥ, ಜಂಬುಲಿಂಗೇಶ್ವರ, ಕರಿಸಿದ್ದೇಶ್ವರ, ಕಾಶೀನಾಥ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ, ಗಳಗನಾಥ, ಸಂಗಮೇಶ್ವರ ಮತ್ತು ಬಸದಿ ಸಂಗಮೇಶ್ವರ ದೇವಾಲಯಗಳು ಪ್ರಾಚೀನವಾದುವು. ವಿರೂಪಾಕ್ಷ ದೇವಾಲಯವಾದರೋ ಅತ್ಯಂತ ದೊಡ್ಡದು. ಇವುಗಳಲ್ಲಿ ಮೊದಲಿನ ನಾಲ್ಕು ಔತ್ತರೇಯ ಶಿಖರಗಳನ್ನು ಹೊಂದಿವೆ. ಉಳಿದ ಆರರಲ್ಲಿ ದ್ರಾವಿಡ ಶೈಲಿಯ ಶಿಖರಗಳಿವೆ. ಪಾಪನಾಥ ದೇವಾಲಯವು ಔತ್ತರೇಯ ರೀತಿಗೂ, ವಿರೂಪಾಕ್ಷ ದೇವಾಲಯವು ದ್ರಾವಿಡ ರೀತಿಗೂ, ಒಳ್ಳೆಯ ಉದಾಹರಣೆಗಳು. ಪಾಪನಾಥ ದೇವಾಲಯವು ಏಳನೆಯ ಶತಮಾನದ್ದು; ವಿರೂಪಾಕ್ಷ ದೇವಾಲಯವು ಎಂಟನೆಯ ಶತಮಾನಕ್ಕೆ ಸೇರಿದ್ದು."12

ವಿಜಯಾದಿತ್ಯ ಸತ್ಯಾಶ್ರಯನ ಕಾಲದಲ್ಲಿ (೬೯೬–೭೩೩) ಪಾಪನಾಥ, ಸಂಗಮೇಶ್ವರ ದೇವಾಲಯಗಳ ನಿರ್ಮಾಣವಾಯಿತು. ಇಮ್ಮಡಿ ವಿಕ್ರಮಾದಿತ್ಯನ ಪಟ್ಟದರಸಿ ಲೋಕ ಮಹಾದೇವಿಯು (ಕಿ.ಶ. ೭೪೨) ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿದಳು. ಇದು ಬಹಳ ಸುಂದರವಾಗಿದೆ. ಚಪ್ಪಡಿ ರೇವಡಿ ಬಸವಜ್ಜನು ಈ ದೇವಾಲಯವನ್ನು ನಿರ್ಮಿಸಿದ ಶಿಲ್ಪಿಯೆಂದು ತಿಳಿದು ಬರುತ್ತದೆ. ಸರ್ವಸಿದ್ಧಿ ಆಚಾರ್ಯರ ಗುಂಪಿಗೆ ಸೇರಿದ ಶಿಲ್ಪಿ ಇವನೆಂದೂ ಹೇಳಲಾಗಿದೆ. ಇವನು ತಮಿಳುನಾಡಿನವನೆಂದು ಒಂದು ವಾದ. ಕೀರ್ತಿಶೇಷ ಬಿ. ವೆಂಕೋಬರಾಯರು ಈ ವಾದವನ್ನೊಪ್ಪುವುದಿಲ್ಲ. ಅವರ ಅಭಿಪ್ರಾಯದಲ್ಲಿ

> "ವಿಕ್ರಮಾದಿತ್ಯನು ಕಾಂಚೀಪುರವನ್ನು ಮುತ್ತಿ, ಅದನ್ನು ವಶಪಡಿಸಿಕೊಂಡ ಮೇಲೆ ಅಲ್ಲಿದ್ದ ಕೈಲಾಸನಾಥ ದೇವಾಲಯವನ್ನು ಕಟ್ಟಿ, ಅಲ್ಲಿ ಕೆಲಸ ಮಾಡುತ್ತಿದ್ದ ಸ್ಥಪತಿಗಳನ್ನೂ, ರೂವಾರಿಗಳನ್ನೂ, ಕನ್ನಡನಾಡಿನಲ್ಲಿ ದೇವಾಲಯಗಳನ್ನು ಕಟ್ಟುವುದಕ್ಕಾಗಿ ಕರೆಸಿಕೊಂಡನೆಂದು ತಿಳಿದು ಬರುತ್ತದೆ."

12 ಮೈಸೂರು ದೇಶದ ವಾಸ್ತುಶಿಲ್ಪ, ಪುಟ ೭೦

ಪಟ್ಟದಕಲ್ಲಿನ ದೇವಾಲಯಗಳೂ ಹಲವು ಶಿಲ್ಪಿಗಳೂ

ನೃಪತುಂಗನು ಹೇಳುವ 'ಕಿಸುವೊಳಲ್' ಇಂದು ಪಟ್ಟದಕಲ್ಲು; ಮಲಪ್ರಭಾ ನದಿಯ ದಡದಲ್ಲಿದೆ. ಐಹೊಳೆಯ ಅನಂತರ ಪ್ರಾಚೀನ ವಾಸ್ತುಶಿಲ್ಪದ ಮಾದರಿಗಳಿಗೆ ಪಟ್ಟದಕಲ್ಲಿಗೇ ಬರಬೇಕು. ಇಲ್ಲೂ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ೮–೧೦ ದೇವಾಲಯಗಳನ್ನು ಮಾತ್ರ ಆರಿಸಿಕೊಂಡು ಕೆಲವಂಶಗಳನ್ನು ಹೇಳಲಾಗುತ್ತದೆ.

೧ ಸಂಗಮೇಶ್ವರ ಅಥವಾ ವಿಜಯೇಶ್ವರ
೨ ವಿರೂಪಾಕ್ಷ ಅಥವಾ ಲೋಕೇಶ್ವರ
೩ ಮಲ್ಲಿಕಾರ್ಜುನ ದೇವಾಲಯ
೪ ಪಾಪನಾಥ ದೇವಾಲಯ
೫ ಗಳಗನಾಥ ದೇವಾಲಯ
೬ ಕಾಶಿ ವಿಶ್ವನಾಥ ದೇವಾಲಯ
೭ ಕರಿಸಿದ್ಧೇಶ್ವರ ದೇವಾಲಯ
೮ ಜಂಬುಲಿಂಗೇಶ್ವರ ದೇವಾಲಯ
೯ ಚಂದ್ರಶೇಖರ ದೇವಾಲಯ
೧೦ ಜೈನ ಬಸ್ತಿ

ಈ ದೇವಾಲಯಗಳಲ್ಲೆಲ್ಲ ಸಂಗಮೇಶ್ವರ ದೇವಾಲಯವೇ ಪ್ರಾಚೀನವಾದುದು. ಚಾಳುಕ್ಯ ವಿಜಯಾದಿತ್ಯ ಸತ್ಯಾಶ್ರಯನು (ಕ್ರಿ. ಶ. ೬೯೬–೭೩೩) ಈ ದೇವಾಲಯವನ್ನು ಕಟ್ಟಿಸಿ, ಅದಕ್ಕೆ "ವಿಜಯೇಶ್ವರ" ದೇವಾಲಯವೆಂದು ಹೆಸರಿಟ್ಟನು.

ವಿಜಯೇಶ್ವರ ದೇವಾಲಯಕ್ಕೆ ದಕ್ಷಿಣದಲ್ಲಿ ಸುಮಾರು ನೂರುಗಜಗಳ ದೂರದಲ್ಲಿ ವಿರೂಪಾಕ್ಷ ದೇವಾಲಯವಿದೆ. ಇದಕ್ಕೆ ಲೋಕೇಶ್ವರ ದೇವಾಲಯವೆಂದೂ ಹೆಸರು. ಪಟ್ಟದಕಲ್ಲಿನ ದೇವಾಲಯಗಳಲ್ಲೆಲ್ಲ ಇದೇ ದೊಡ್ಡದು. ವಿಜಯಾದಿತ್ಯನ ಮಗ ಚಾಳುಕ್ಯ ಇಮ್ಮಡಿ ವಿಕ್ರಮಾದಿತ್ಯನ ಪಟ್ಟದರಸಿ ಲೋಕ ಮಹಾದೇವಿಯು ಈ ದೇವಾಲಯದ ನಿರ್ಮಾಣಕ್ಕೆ ಕಾರಣಕರ್ತಳು.

ಲೋಕಮಹಾದೇವಿಯ ತಂಗಿ ತ್ರೈಲೋಕ್ಯ ಮಹಾದೇವಿ. ಈಕೆ ಇಮ್ಮಡಿ ವಿಕ್ರಮಾದಿತ್ಯನ ಕಿರಿಯರಸಿ. ಮಲ್ಲಿಕಾರ್ಜುನ ದೇವಾಲಯವನ್ನು ಈಕೆ ಕಟ್ಟಿಸಿದಳು. ಇದು ವಿರೂಪಾಕ್ಷ ದೇವಾಲಯದ ವಾಯುವ್ಯ ಮೂಲೆಯಲ್ಲಿದೆ.

ಈ ಮೂರೂ ದೇವಾಲಯಗಳ ಕಥೆಗಳೂ ಒಂದೇ ಸೂತ್ರದಲ್ಲಿ ಪೋಣಿಸಿದಂತಿದೆ. ವಿರೂಪಾಕ್ಷ ದೇವಾಲಯಕ್ಕೆ ಉತ್ತರದಲ್ಲಿ, ಮಲ್ಲಿಕಾರ್ಜುನ ದೇವಾಲಯಕ್ಕೆ ಎದುರಾಗಿರುವ 'ಲಕ್ಷ್ಮಿಕಂಭ'ದ ಮೇಲಿನ ಶಾಸನದಲ್ಲಿ[13] ಈ ಮೂರೂ ದೇವಾಲಯಗಳ ವಿಚಾರವಿದೆ. ಮೂರು ದೇವಾಲಯಗಳ ಮಧ್ಯರಂಗದಲ್ಲಿ ಈ ಕಂಭವನ್ನು ಸ್ಥಾಪಿಸಲಾಯಿತೆಂದು ಆ ಶಾಸನದಿಂದ ತಿಳಿದು ಬರುತ್ತದೆ. ಈ ಕಂಭವನ್ನು ಸ್ಥಾಪಿಸಿದವನು ಶಿಲ್ಪಿ ಶುಭದೇವ. ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ ಕ್ರಿ.ಶ. ೭೫೪ರಲ್ಲಿ, ಉತ್ತರ ದೇಶದ, ಗಂಗಾ ಉತ್ತರ ದಡದ, ಮೃಗ ತಣಿಕಾಹಾರ ವಿಷಯದಿಂದ ಬಂದ ಆಚಾರ್ಯ ಜ್ಞಾನ ಶಿವನಿಗಾಗಿ ಇದನ್ನು ಮಾಡಲಾಯಿತು.

ಇಷ್ಟೇ ಅಲ್ಲದೆ ಈ ಮೂರೂ ದೇವಾಲಯಗಳಲ್ಲಿ ಅನೇಕ ಶಿಲಾಶಾಸನಗಳಿವೆ. ಅವುಗಳೆಲ್ಲವುಗಳ ಸಹಾಯದಿಂದ ಈ ದೇವಾಲಯಗಳ ಕಾಲವನ್ನು ಯಾವ ಸಂಶಯಕ್ಕೂ ಆಸ್ಪದವಿಲ್ಲದಂತೆ ಹೇಳಬಹುದು. ಅಷ್ಟೇ ಅಲ್ಲ; ಕೆಲವು ಶಾಸನಗಳು ಶಿಲ್ಪಿಗಳ ಹಲವರ ಹೆಸರುಗಳನ್ನೂ ಕೊಡುತ್ತವೆ. ವಿರೂಪಾಕ್ಷ

[13] *Epigraphia Indica*, Vol. III, p. 1

ದೇವಾಲಯದ ಪೂರ್ವ ಮಹಾದ್ವಾರದ ಬಳಿ ಇರುವ ಕಂಬದ ಮೇಲೆ ಹತ್ತು ಪಾದಗಳ ಶಾಸನವೊಂದಿದೆ. ಅದರ ಆರಂಭದ ಆರು ಪಾದಗಳಿವು[14]

೧ ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಶ್ರೀ
೨ ಪೃಥ್ವೀವಲ್ಲಭ ಮಹಾದೇವಿ
೩ ಯರಾ ದೇಗುಲಮಾನ್ ಮಾಡಿದ ಸೂತ್ರಧಾರಿ
೪ ಶ್ರೀ ಗುಣ್ಡನ್ ಅನಿವಾರಿತಾಚಾರಿ
೫ ಗೆ ಮೂಮೆ ಪೆರ್ಜಜಿಪು ಪಟ್ಟಮು ತ್ರಿಭುವನಾಚಾರಿ
೬ ಯೆನ್ದು ಪೆಸರಿತ್ತು ಪ್ರಸಾದಜ್ಗೆಯ್ದೊ

ವಿರೂಪಾಕ್ಷ ದೇವಾಲಯವನ್ನು 'ಮಾಡಿದ'ವನು ಸೂತ್ರಧಾರಿ, ವಾಸ್ತುಶಿಲ್ಪಿ, ಅನಿವಾರಿತಾಚಾರಿ ಶ್ರೀ ಗುಣ್ಡನ್. ಅವನಿಗೆ ಮಹಾದೇವಿ ಲೋಕಮಹಾದೇವಿಯರು 'ತ್ರಿಭುವನಾಚಾರಿ' ಎಂಬ ಬಿರುದನ್ನು ಕೊಟ್ಟು ಬಹುಮಾನಿಸಿದರು. ಶಾಸನವೀ ಅಂಶವನ್ನು ಆಚಂದ್ರಾರ್ಕಸ್ಥಾಯಿಯಾಗಿ ಸಾರುತ್ತಿದೆ.

ಪೂರ್ವ ಮಹಾದ್ವಾರದ ಬಳಿಯ ಮತ್ತೊಂದು ಶಾಸನದ ಪಾತ ಈ ರೀತಿಯಾಗಿದೆ.

೧ ಸ್ವಸ್ತಿ ಶ್ರೀ ವಿಕ್ರಮಾದಿತ್ಯ
೨ ಭಟಾರ ಮ್ಮೊಮೆ ಕನ್ಚಿಯನೊಮ್ಮೆ ಪರಾ
೩ ಜಿಸಿ ದೊರಾ ಶ್ರಿಲೋಕಮಹಾದೇವಿಯರಾ
೪ ಈ ಲೋಕೇಶ್ವರ ಮಾಡಿದ ಸೂತ್ರಧಾರಿಗೆ
೫ ಮೂಮೆಪೆರ್ಜೆಜಿಪು ಗೆಯ್ದು ಬಳಿಕ್ಕೆ ಈ ವಿಷ
೬ ಯದ ವಿನ್ನಾಲಿಗಳಾ ಬಳ್ಳಿನ ವಾರ್ತೆಯನು ಮಿ
೭ ಟಿದ ಆಚಾರಿಯ ಹೆಸರಿನ ನಜುಮಿ
೮ ಸ್ವಸ್ತಿ ಶ್ರೀ ಸರ್ವಸಿದ್ಧಿ ಆಚಾರಿ ಸಕಲ ಗುಣಾಶ್ರಯ
೯ ಅನೇಕ ಪುರವಾಸ್ತು ಪಿತಾಮಹನ್ ಸಕಲ ನಿಷ್ಕಲ ಸ್ತೂ
೧೦ ಕ್ಷ್ಮಾತಿ ಭಾ[ಭೂ]ಷಿತನ್ ವಸ್ತು ಪ್ರಾಸಾದಾಯಾನಾಸನ ಸ(ಶ)ಯ
೧೧ ನ ಮಣಿ ಮಕುಟ ರತ್ನ ಚೂಡಾಮಣಿ ತೆಂಕಣದಿ
೧೨ ಶೆಯಾ ಸ್ತೂತ್ರಧಾರಿ

ಪಾಪನಾಥೇಶ್ವರ ದೇವಾಲಯದ ಪೂರ್ವಮುಖದ ಶಿಲಾಶಾಸನವೊಂದು ರೇವಡಿ ಒವಜ್ಜನೆಂಬ ಶಿಲ್ಪಿಯನ್ನು ಕುರಿತು ಹೀಗೆ ಹೇಳುತ್ತದೆ:

೧ ಸ್ವಸ್ತಿ ಶಿಲೆಮುದ್ದರ
೨ ಮಮ್ಮಗ ಸರ್ವಸಿದ್ಧಿ ಆ
೩ ಚಾಯ್ರ್ಯರ ಚಟ್ಟರ ರೇವ
೪ ಡಿ ಒವಜ್ಜರ್ ತೆಂಕ
೫ ಣ ದೆಶೆ ಮಾಡಿದೊರ್

ಬೋದಮ್ಮ, ಆದಿತ್ಯ, ಮೊದಲಾದ ಶಿಲ್ಪಿಗಳ ಹೆಸರುಗಳೂ ಶಾಸನಗಳಲ್ಲಿ ಕಂಡುಬರುತ್ತವೆ. ಈ ಶಿಲ್ಪಿಗಳೆಲ್ಲ ದಕ್ಷಿಣ ದೇಶದಿಂದ ಬಂದವರೆಂದು ಹಲವರು ವಾದಿಸುತ್ತಾರೆ.

> "It seems likely, that then, Vikramaditya was so struck with the Kanchi temples that induced some of the best architects of the capital to return with him."

[14] *Ind. Ant.*, Vol. X. p. 170.

> "ಕಾಂಚೀಪುರದ ದೇವಾಲಯಗಳನ್ನು ನೋಡಿ ವಿಕ್ರಮಾದಿತ್ಯನು ಬಹಳವಾಗಿ ಪ್ರಭಾವಿತನಾಗಿ, ಮೆಚ್ಚಿದನು. ಆ ನಗರದ ಅತ್ಯುತ್ತಮ ವಾಸ್ತುಶಿಲ್ಪಿಗಳು ಹಲವರನ್ನು ಬರಿಸಿ. ಬಿಟ್ಟಿ. ಅವರು ತನ್ನನ್ನು ಹಿಂಬಾಲಿಸುವಂತೆ ಮಾಡಿದನೆಂದು ಕಂಡುಬರುತ್ತದೆ"[15]

ಎಂಬುದಾಗಿ ಹೆನ್ರಿ ಕಜನ್ಸರು ಅಭಿಪ್ರಾಯ ಪಟ್ಟಿರು.

> "ವಿರೂಪಾಕ್ಷ ಅಥವಾ ಲೋಕೇಶ್ವರ ದೇವಾಲಯವನ್ನು ಕಟ್ಟಿಸಿದವನು ಪಟ್ಟದ ರೇವಡಿ ಓವಜ್ಜನೆಂದೂ. ಆತನು ಸರ್ವಸಿದ್ಧಿ ಆಚಾರ್ಯರ ಗುಂಪಿಗೆ ಸೇರಿದವನೆಂದೂ ಹೇಳಿದೆ. ಈತನು ತಮಿಳುನಾಡಿನಿಂದ ಬಂದಿರಬೇಕದೆಂದು ಊಹಿಸಲಾಗಿದೆ. ಆದರೆ ತಮಿಳುನಾಡಿನ ದ್ರಾವಿಡಶೈಲಿಯ ಅನುಕರಣವೇನೂ ಈ ದೇವಸ್ಥಾನದಲ್ಲಿ ಕಂಡುಬರುವುದಿಲ್ಲ. ಅಲ್ಲದೆ ಇಲ್ಲಿ ಕೆತ್ತಿರುವ ವಿಗ್ರಹಗಳೇ ಆಗಲಿ. ಇತರ ಚಿತ್ರ ಕೆಲಸಗಳೇ ಆಗಲಿ. ಕನ್ನಡನಾಡಿನ ರೂಪ ಲಾವಣ್ಯಗಳನ್ನೇ ವ್ಯಕ್ತಪಡಿಸುತ್ತವೆ."

ಎಂಬುದಾಗಿ ಸ್ವರ್ಗವಾಸಿ ಬಿ. ವೆಂಕೋಬರಾಯರು ಹೇಳಿದ್ದಾರೆ.[16]

ಕಾಂಚೀಪುರದ ಪ್ರಾಚೀನ ದೇವಾಲಯಗಳನ್ನು ನಿರ್ಮಿಸಿದ ಶಿಲ್ಪಿಗಳ ಪರಂಪರೆಯವರೇ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವನ್ನು ಕಟ್ಟಿದರೆಂದೂ. ಈ ವಿರೂಪಾಕ್ಷ ದೇವಾಲಯ ಕಟ್ಟಿದ ಶಿಲ್ಪಿಗಳ ಕೈವಾಡವೇ ಎಲ್ಲೋರದ ಕೈಲಾಸ ಕಲ್ಪನೆಯ ದೇವಾಲಯದಲ್ಲೂ ಕಂಡುಬರುವುದೆಂದೂ ಹೆನ್ರಿ ಕಜನ್ಸರವರು ಹೇಳಿದ್ದಾರೆ. ಈ ಮಾತನ್ನು ಸ್ಥಾಪಿಸಲು ಎರಡೂ ದೇವಾಲಯಗಳಲ್ಲೂ ಕಂಡುಬರುವ ಸಾಮ್ಯದ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ.

ವಿದ್ವಾಂಸ-ವಿಮರ್ಶಕರ ಅಭಿಪ್ರಾಯಗಳ ಸತ್ಯಾಸತ್ಯತೆಯು. ಸಂಭವ-ಅಸಂಭವಗಳ ಶಾಸ್ತ್ರೀಯವಾದ ಪರೀಕ್ಷೆ ನಡೆಯಬೇಕಾಗಿದೆ. ಕಜನ್ಸರು ಒಂದಭಿಪ್ರಾಯಕ್ಕೆ ಬಂದ ಹತ್ತಾರು ವರ್ಷಗಳ ಅಧ್ಯಯನ-ಅನುಮಾನಂತರ ರಾಯರು ರೇವಡಿ ಓವಜ್ಜನೂ. ಸರ್ವಸಿದ್ಧಿ ಆಚಾರ್ಯರ ಗುಂಪಿನವರೂ ತಮಿಳುನಾಡಿನವರಾದರೆ ಅವರು ದ್ರಾವಿಡ ಶೈಲಿಯ "ಅನುಕರಣ" ಮಾಡದಿರಲು ಕಾರಣವೇನಿದೆ? ಎಂದು ಕೇಳುತ್ತಾರೆ.

ವಿಜಯೇಶ್ವರ ದೇವಾಲಯ

ಚಾಳುಕ್ಯ ವಿಜಯಾದಿತ್ಯನ ಆಳ್ವಿಕೆಯ ಕಾಲದಲ್ಲಿ (೬೯೬–೭೩೩) ಈ ದೇವಾಲಯ ನಿರ್ಮಾಣವಾಯಿತು. ಐಹೊಳೆಯ ಮೇಗುಟಿಯ ದೇವಾಲಯ ಕಟ್ಟಿದ ೬೩೪ರಿಂದ ೧೦೦ವರ್ಷಗಳೊಳಗಿನ ಅಂತರದಲ್ಲಿ ಈ ದೇವಾಲಯದ ನಿರ್ಮಾಣವಾಯಿತು. ಸಭಾ ಮಂಟಪದ ಕಂಬವೊಂದರ ಉತ್ತರ ಮುಖದಲ್ಲಿ "ಶ್ರೀ ವಿದ್ಯಾಶಿವರ ಕಂಬ" ಎಂಬುದಾಗಿ ಕನ್ನಡ ಅಕ್ಷರಗಳಲ್ಲಿ ಬರೆದಿದೆ. ವಿದ್ಯಾಶಿವನೂ ಶಿಲ್ಪಿಯೇ ಆಗಿರಬಹುದು. ಏಕೆಂದರೆ ಇನ್ನೊಂದು ಕಂಬದ ಮೇಲೆ

೧ "ಸ್ವಸ್ತಿ ಶ್ರೀ ಬಿಜಯೇಶ್ವರದ ಮನೆಮಾಡೆ ಬೋದಮ್ಮ
೨ ನೀ ಯೆರಡು ಕಮ್ಬದ ಅಳಂಕಾರ ನಿವ್ವಾಣಕಾರ ಪಾಕ"

ಎಂಬೆರಡು ಪಾದಗಳ ಶಾಸನವಿದೆ. ಎರಡು ಕಂಬಗಳ ಅಲಂಕಾರ ಕಾರ್ಯ ನಿರ್ವಹಿಸಿದವನೊಬ್ಬ ಬೋದಮ್ಮನೆಂಬುದು ಸ್ಪಷ್ಟ. ಬೋದಮ್ಮನ 'ವಿಶೇಷಣ' ಸಂದೇಹಾಸ್ಪದವಾಗಿದೆ.

೧ ಸ್ವಸ್ತಿ ಶ್ರೀ ಬಿಜೇಸ್ವರದ ಸೂಳೆ ಚಲಬ್ಬೆಯ
೨ ಕಮ್ಬು ಮೂಱು

---

15 Cousens. *op. cit*, p 61.

16 ಮೈಸೂರು ದೇಶದ ವಾಸ್ತುಶಿಲ್ಪ, ಪು. ೭೧–೭೨

ಒಂದು ಶಾಸನವೊಂದು ಮೂರನೆಯ ಕಂಬದ ಮೇಲಿದೆ. ಮೂರು ಕಂಬಗಳನ್ನು ಬಿಜ್ಜೇಶ್ವರ ದೇವಾಲಯದ ಸೂಳೆ ದೇವಸ್ಥಾನಕ್ಕೆ ದಾನಮಾಡಿದಳೆಂದಾಯಿತು.

ದೇವಾಲಯದ ಒಳಭಾಗ ಸರಳವಾಗಿದೆ: ದಪ್ಪವಾದ ಕಂಬಗಳು; ಕಂಬಗಳ ಕೆಳಗೆ ಪಾದಪೀಠಗಳಿಲ್ಲ. ಮೇಲಿನ ಚಾಚು ಬೋದಿಗೆಗಳೂ ಸಾದಾ, ಸರಳ. ಮಾಳಿಗೆಯ ಒಳಭಾಗಗಳಲ್ಲೂ ಶಿಲ್ಪಕರ್ಮವೇನೂ ಇಲ್ಲ. ಗರ್ಭಗೃಹದ್ವಾರದ ಮಾತೂ ಅಷ್ಟೆ. ಬಾಗಿಲ ಮೇಲಿನ ಅಡ್ಡಪಟ್ಟಿಯಲ್ಲಿ ಸಂಕೇತ ಮೂರ್ತಿಯ ಸುಳಿವೇ ಇಲ್ಲ. ಗರ್ಭಗೃಹದಲ್ಲಿ ನುಣುಪಾದ ಕರಿಕಲ್ಲಿನ ಲಿಂಗವಿದೆ. ಅದರ ಮೇಲ್ಭಾಗ ಛಿನ್ನವಾಗಿದೆಯಾಗಿ ದೇವರಿಗೆ ಪೂಜೆ ಪುರಸ್ಕಾರಗಳಾವುವೂ ಇಲ್ಲ. ಒಳಗೂ, ಹೊರಗೂ, ಪ್ರದಕ್ಷಿಣೆ ಮಾಡಲು ಅವಕಾಶವಿದೆ. ಪ್ರದಕ್ಷಿಣೆ ಮಾರ್ಗಕ್ಕೆ ಬೆಳಕು ಬರಲು ಮೂರು ಕಡೆಯ ಹೊರಗೋಡೆಗಳಲ್ಲೂ ಮೂರು ಕಿಟಕಿಗಳಿವೆ. ಅವೆಲ್ಲ ಶಿಲಾ ಜಾಲಂಧ್ರಗಳು. ಜ್ಯಾಮಿತಿಯ ಸುಂದರ ನಾನಾ ಮಾದರಿಗಳು. ಗೋಡೆಗಳ ಹೊರಗಡೆ ಕಿಟಕಿಗಳೊಂದರ ಮಧ್ಯೆ ಒಂದೊಂದು ಗೂಡಿದೆ. ಒಂದೊಂದು ಗೂಡಿನಲ್ಲೂ ಒಂದೊಂದು ವಿಗ್ರಹವಿದೆ. ಉತ್ತರದ ಗೋಡೆಯ ಗೂಡುಗಳಲ್ಲಿ ವರಾಹ, ಶಿವ ಮೂರ್ತಿಗಳಿವೆ. ಪಶ್ಚಿಮದ ಗೋಡೆಯ ಗೂಡೊಂದರಲ್ಲಿ ಶಿವ, ಭೃಂಗಿ, ಎರಡನೆಯದರಲ್ಲಿ ಶಿವ, ನಂದಿ, ಮೂರ್ತಿಗಳಿವೆ. ಮೂರನೆಯದರಲ್ಲಿ ಏನೂ ಇಲ್ಲ. ದಕ್ಷಿಣದ ಗೋಡೆಯ ಕಾಣದಂತೆ ಗ್ರಾಮದವರು ಮನೆಗಳನ್ನು ಕಟ್ಟಿದ್ದಾರೆ. ಈ ದೇವಾಲಯದ ಶಿಖರವು ದ್ರಾವಿಡಮಾರ್ಗದ ಪ್ರಾಚೀನ ಮಾದರಿಯೆಂದು ಹೇಳಬೇಕಾಗುತ್ತದೆ.

ವಿಜಯೇಶ್ವರ ದೇವಾಲಯದ ವಾಸ್ತುಕರ್ಮವೈಶಿಷ್ಟ್ಯವನ್ನೂ, ಶಿಲ್ಪಕರ್ಮ ವೈಶಿಷ್ಟ್ಯವನ್ನೂ ಪ್ರತ್ಯೇಕ ಮಾಡಿ, ಸೂಕ್ಷ್ಮ ಪರೀಕ್ಷೆಗೆ ಒಳಪಡಿಸಬೇಕಾದ ಅವಶ್ಯಕತೆ ಇದೆ.

ಲೋಕೇಶ್ವರ ದೇವಾಲಯ

ಈ ದೇವಾಲಯವನ್ನೂ ನಿರ್ಮಿಸಿದವನು "ಪುರವಾಸ್ತು ಪಿತಾಮಹ"ನೆನಿಸಿದ ಸೂತ್ರಧಾರಿ ಗುಂಡ. ಈ ಸೂತ್ರಧಾರಿಯ ನಾಯಕತ್ವದಲ್ಲಿ ಅನೇಕ ಶಿಲ್ಪಿಗಳು ಕೆಲಸ ಮಾಡಿ ಬೃಹದಾಕಾರದ ಈ ದೇವಾಲಯವನ್ನು ಕಟ್ಟಿರಬೇಕು. ಹಳೆಯ ಕಾಲದ, ದ್ರಾವಿಡಮಾರ್ಗದ, ದೇವಾಲಯವಿದು. ಗರ್ಭಗೃಹ: ಮಂಟಪ ಅಥವಾ ಸಭಾಮಂಟಪ: ಅದರಲ್ಲಿ ಸಾಲು ಕಂಬಗಳ ಕೈಸಾಲೆ: ನಂದಿ ಮಂಟಪ: ಅದರಲ್ಲೊಂದು ದೊಡ್ಡ ಬಸವಣ್ಣನ ವಿಗ್ರಹ: ಪೂರ್ವ–ಪಶ್ಚಿಮ ಕೈಸಾಲೆಗಳ ಒಳ ಹೊಗಲು ಪ್ರತ್ಯೇಕ ದ್ವಾರಗಳು. ಸುತ್ತ ರಾಜಾಂಗಣ, ಗೋಡೆ. ರಾಜಾಂಗಣದ ಸುತ್ತು ಗೋಡೆಯೆಂದರೆ ಎರಡು ಮೂರಂಕಣಗಳ ಮಂಟಪಗಳು. ಸುತ್ತಾಲಯವೆಂದಿದನ್ನು ಕರೆಯುವುದುಂಟು. ದೇವಾಲಯ ಮಾತ್ರ ೧೨೦ ಅಡಿಗಳ ಉದ್ದವಾದರೆ, ದೇವಾಲಯ, ಸುತ್ತಾಲಯ, ಮಹಾದ್ವಾರ, ಎಲ್ಲ ಸೇರಿದರೆ ೨೫೦ ಅಡಿಗಳಾಗುತ್ತದೆ.

ಸಭಾ ಮಂಟಪದ ಎತ್ತರಕ್ಕಿಂತ ಗರ್ಭಗೃಹದ ಭಾಗ ಒಂದೊಂದು ಪುಟ್ಟ ಗುಡಿಯಾಗಿ ಏಳುತ್ತದೆ: ಕಡೆಗಿದು ಶಿಖರದ ರೂಪ ತಾಳುತ್ತದೆ. ಹೀಗೆ ಮೂರು ಹಂತಗಳಿವೆ. ಶಿಖರದ ಮುಂಭಾಗದಲ್ಲಿ ಚಾಚು ಗಲ್ಲಿನ ಮೇಲೆ ಶಿವ ತಾಂಡವ ಮೂರ್ತಿಯ ಮನೋಹರವಾದ ಶಿಲ್ಪವಿದೆ.

ವಿರೂಪಾಕ್ಷ ಅಥವಾ ಲೋಕೇಶ್ವರ ದೇವಾಲಯದ ಕಿಟಕಿಗಳು ಈ ದೇವಾಲಯ ಸೌಂದರ್ಯದ ಹಿರಿಮೆಯನ್ನು ಸಾರುತ್ತಿವೆ. ಕಲ್ಲಿನ ಹಲಗೆಗಳಲ್ಲಿ, ಚಿತ್ರವಿಚಿತ್ರವಾಗಿ, ನಯನಾಕರ್ಷಕವಾಗಿ, ಕೊರೆದ ಜ್ಯಾಮಿತಿಯಾಕೃತಿಗಳು, ಪ್ರಕೃತಿಯ ಲತಾಪುಷ್ಪಗಳು, ಬಂದವರನ್ನೆಲ್ಲ ಸ್ವಾಗತಿಸುತ್ತಿವೆ. ಜಾಲಂಧ್ರವೆಂಬುದು ಪಾರಿಭಾಷಿಕ ಶಬ್ದ. ಇದೇ ಜಾತಿಯ ಜಾಲಂಧ್ರಗಳನ್ನು ಸಂಗಮೇಶ್ವರ ಅಥವಾ ವಿಜಯೇಶ್ವರ ದೇವಾಲಯದಲ್ಲೂ ನೋಡಬಹುದು. ಎಲ್ಲೋರದ ಕೈಲಾಸ ದೇವಾಲಯದಲ್ಲೂ ನೋಡಬಹುದು. ವಿಜಯೇಶ್ವರ ದೇವಾಲಯದಲ್ಲಿ ಇವು ಲೋಕೇಶ್ವರ ದೇವಾಲಯಗಳಿಗಿಂತ ಸರಳವಾಗಿವೆ. ಕೈಲಾಸ ದೇವಾಲಯದಲ್ಲಾದರೋ ಇವು ಕಲಾಕೌಶಲದಲ್ಲಿ ವಿರೂಪಾಕ್ಷ ದೇವಾಲಯದ ಜಾಲಂಧ್ರಗಳ ಕೆಲಸವನ್ನು ಮೀರಿಸುತ್ತವೆ.

ಗೋಡೆಗಳಲ್ಲಿ ನಾನಾ ದೇವ ದೇವಿಯರ ಮೂರ್ತಿಗಳನ್ನೂ ನೋಡುತ್ತೇವೆ. ಪೂರ್ವದ ಗೋಡೆ ಅಥವಾ ದೇವಾಲಯದ ಮುಂಭಾಗದಲ್ಲಿ ಅರ್ಧನಾರೀಶ್ವರ, ನಾಮನಾರಾಯಣ, ವಿಷ್ಣು ಮೂರ್ತಿಗಳಿವೆ.

ಉತ್ತರದ ಗೋಡೆಯಲ್ಲಿ ಶಿವ-ಪಾರ್ವತಿ, ತಾಂಡವಮೂರ್ತಿ, ಹರಿಹರ, ಭೈರವ, ವರಾಹ ಮೂರ್ತಿಗಳಿವೆ. ಒಳಭಾಗ ಅಥವ ಪಶ್ಚಿಮದ ಗೋಡೆಯಲ್ಲಿ ಶಿವ ವಿಷ್ಣುಗಳ ಮೂರ್ತಿಗಳು ನಾನಾ ರೂಪದಲ್ಲಿವೆ. ದಕ್ಷಿಣದ ಗೋಡೆಯಲ್ಲಾದರೋ ಲಕುಲೀಶ, ನಾನಾ ರೂಪಗಳ ಶಿವ, ವಿಷ್ಣು, ನರಸಿಂಹ ಮೂರ್ತಿಗಳಿವೆ. ಈ ಮೂರ್ತಿಗಳೆಲ್ಲ ಪ್ರಾಚೀನ ಕಾಲದ ಸಹಜವೂ, ಜೀವಶಕ್ತಿಯುತವೂ ಆದ ಭಂಗಿಗಳಿಂದಲೂ ಕೂಡಿವೆ. ಮಧ್ಯಯುಗದ ಕಡೆಗಾಲದ ಸಿಲೆದು ಕಾಣುವ ನಿರ್ಜೀವ, ಜಡ-ಚೇತನ-ಈ ಬದಲಾವಣೆಯ ಕಾಲಕ್ಕೆ ಸೇರಿವೆ.

ಮುಖಮಂಟಪದ ಛಾವಣಿಯಲ್ಲಿ ಸಪ್ತಾಶ್ವಾರೂಢನಾದ ಸೂರ್ಯದೇವನ ಶಿಲ್ಪವನ್ನು ನೋಡುತ್ತೇವೆ. ಸಭಾಮಂಟಪದ ಮಾಳಿಗೆ ಹದಿನಾರು ಭಾರಿ ಕಂಬಗಳ ಮೇಲೆ ನಿಂತಿದೆ. ಕಂಬಗಳಲ್ಲಿ ಚಚ್ಚೌಕ ಕಂಬದ ಸಾಲುಗಳು ಪೂರ್ವ-ಪಶ್ಚಿಮ. ನಾಲ್ಕು ಸಾಲುಗಳ ಮಧ್ಯದ ಎರಡು ಸಾಲುಗಳಲ್ಲಿ ಐದೈದು ಕಂಬಗಳಿವೆ. ಕಂಬಗಳೆಲ್ಲ ಒಂದೇ ರೀತಿಯಾಗಿದೆ. ಆದರೆ ಅವುಗಳ ಮುಖದ ಮೇಲೆ ಕಂಡು ಬರುವ ಶಿಲ್ಪ ಕರ್ಮದ ವಸ್ತು ಬೇರೆ ಬೇರೆ. ಕಂಬಗಳ ಬೋದಿಗೆಗಳ ಮೇಲೆ ಕೂತಿರುವ ತೊಲೆಗಳ ಆಳ ಬಲ ಹಿಡಿದಿವೆ ಅವುಗಳು; ಪೂರ್ವ ಪಶ್ಚಿಮವಾಗಿ ಹಾಯುವ ತೊಲೆಗಳು ಮಾಳಿಗೆಯನ್ನೆಲ್ಲ ಸಾಲು ಸಾಲಿನ ಹಜಾರಗಳನ್ನಾಗಿ ವಿಭಾಗಿಸುತ್ತವೆ. ಕಂಬಗಳ ಕೆಳಗೆ ಪೀಠಗಳಿಲ್ಲ. ಅದರ ಮೇಲೆ ಚಾಚು ಬೋದಿಗೆಗಳಿವೆ. ಅವುಗಳ ಮೇಲೆ ತೊಲೆಗಳು ಕೂತಿವೆ. ಚಾಚುಗಳ ಕಮಾನುಗಳು ಇಳಿಜಾರಾಗಿರುವುದು ಮಾತ್ರವಲ್ಲ. ಭಾರಿ ಅಲಂಕೃತವಾಗಿದೆ. ಮಧ್ಯದ ಕೀರ್ತಿಮುಖಗಳೇ ಚಿತ್ರವಲ್ಲರಿಗಳನ್ನೊಂದುಗೂಡಿಸಿ, ನೃತ್ಯಮಯವನ್ನಾಗಿ ಮಾಡುತ್ತವೆ. ಕಂಬಗಳ ಕೆಳಮುಖಗಳಲ್ಲಿ ಅರ್ಧಚಂದ್ರಾಕೃತಿಯ ರೇಖೆಯೊಳಗಾಗಿದೆ ಚಿತ್ರಕರ್ಮ. ಮೇಲ್ಭಾಗದ ಚೌಕಮುಖಗಳಲ್ಲಿ ರಾಮಾಯಣ, ಮಹಾಭಾರತದಿಂದ ಆರಿಸಿಕೊಂಡ ಕಥೆಗಳ ಸನ್ನಿವೇಶಗಳನ್ನು ಶಿಲ್ಪಕ್ಕೆ ಪರಿವರ್ತನಗೊಳಿಸಲಾಗಿದೆ. ಚೌಕ ಮುಖದ ಮೇಲೊಂದು ಅರ್ಧಚಂದ್ರಾಕೃತಿ. ಒಂದು ಕಂಬವನ್ನು ಕಂಡಲ್ಲದೆ ಅದರ ಸ್ವರೂಪವನ್ನಾಗಲಿ, ಅದರ ಮೇಲಿನ ಚಿತ್ರ ವೈವಿಧ್ಯವನ್ನಾಗಲಿ, ಬಿಟ್ಟು ಸೊಬಗನ್ನಾಗಲಿ, ಗ್ರಹಿಸಲು ಸಾಧ್ಯವಿಲ್ಲ.

ವಿರೂಪಾಕ್ಷ ದೇವಾಲಯಕ್ಕೂ, ಎಲ್ಲೋರದ ಕೈಲಾಸಕ್ಕೂ, ಬಹಳ ಮಟ್ಟಿಗೆ ಹೋಲಿಕೆ ಇದೆಯೆಂದು ಹೇಳುತ್ತ ಹೆನ್ರಿ ಕಸಿನ್ಸರವರು ಹೀಗೆ ಅಭಿಪ್ರಾಯ ಪಡುತ್ತಾರೆ:

> "When we thus find rare and unusual figures and compositions, in more or less natural attitudes confined to these temples, which themselves are alike in design, we can come to no other conclusion than that the one building has been the model for the other; and of the two it is easy to see the Kailas is the copy of Lokeswara, with its advance in the lighter and more graceful treatment of its details, and a greater profusion of rich ornament. It is even possible that some of the same men worked on both."

"ಈ ದೇವಾಲಯಗಳಲ್ಲಿ ಅಪೂರ್ವ ಮತ್ತು ಅಸಾಧರಣ ಚಿತ್ರಗಳೂ, ಚಿತ್ರಕೂಟಗಳೂ ಇವೆ. ಇವೆಲ್ಲವುಗಳ ಭಂಗಿಗಳೂ, ಕೊಂಚ ಹೆಚ್ಚು ಕಡಿಮೆ ಸಹಜವಾಗಿವೆ. ಅವುಗಳ ರೂಪ ರಚನೆಗಳಾದರೂ ಒಂದೇ. ಇದನ್ನೆಲ್ಲ ನಾವು ನೋಡುವಾಗ ಒಂದು ದೇವಾಲಯ ಇನ್ನೊಂದು ದೇವಾಲಯಕ್ಕೆ ಮಾದರಿಯಾಗಿಹರೆಯೆಂಬ ನಿಶ್ಚಯಕ್ಕೆ ಬರಬೇಕಲ್ಲದೆ ಬೇರೆ ದಾರಿಯೇ ಇಲ್ಲ. ಇವೆರಡರಲ್ಲಿ ಕೈಲಾಸ ದೇವಾಲಯವು ಲೋಕೇಶ್ವರ (ವಿರೂಪಾಕ್ಷ)

ದೇವಾಲಯದ ಪ್ರತಿಯೆಂದು ಸುಲಭವಾಗಿ ಹೇಳಿಬಿಡಬಹುದು. ಲಘುಕರ್ಮ ಕೌಶಲದಲ್ಲಿ, ವಿವರಗಳನ್ನು ಚಿತ್ರಿಸುವುದರಲ್ಲಿ, ಕೈಲಾಸದಲ್ಲಿ ಗಾಂಭೀರ್ಯದಿಂದ ಕೂಡಿದ ರಮಣೀಯತೆ ಇದೆ: ಅಲಂಕರಣೋದ್ಯಮದಲ್ಲಿ ಸಿರಿಯೂ, ವಿಪರೀತವೂ, ಇದೆ. ಎರಡೂ ದೇವಾಲಯಗಳ ರಚನೆಯಲ್ಲೂ ಬಹುಶಃ ಸಮಾನ ಶಿಲ್ಪಿಗಳ ಕೈವಾಡವಿದೆಯೆಂದೂ ಹೇಳಬಹುದು."[17]

ತ್ರೈಲೋಕ್ಯೇಶ್ವರ ದೇವಾಲಯ

ಇಮ್ಮಡಿ ವಿಕ್ರಮಾದಿತ್ಯನ ಕಿರಿಯ ರಾಣಿ ತ್ರೈಲೋಕ್ಯ ಮಹಾದೇವಿಯು ಕಟ್ಟಿಸಿದ ದೇವಾಲಯವಿದು. ಲೋಕೇಶ್ವರ ದೇವಾಲಯ ನಿರ್ಮಾಣ ಮುಗಿದ ಮೇಲೆಯೇ ಮಲ್ಲಿಕಾರ್ಜುನ ದೇವಾಲಯವಾರಂಭವಾಗಿರಬೇಕು. ರಚನೆ ಪೂರ್ಣವಾಗುವ ಮೊದಲೇ ವಿಕ್ರಮಾದಿತ್ಯನು ಕಾಲವಾದನಾಗಿ ದೇವಾಲಯದ ಹಲವು ಭಾಗಗಳು ಅಪೂರ್ಣವಾಗಿಯೇ ಉಳಿದುವು.

ರೂಪ ರಚನಾ ವಿಧಾನದಲ್ಲಿ ಇದಕ್ಕೂ, ವಿರೂಪಾಕ್ಷ ದೇವಾಲಯಕ್ಕೂ, ಹೆಚ್ಚು ವ್ಯತ್ಯಾಸವಿಲ್ಲ. ಮಲ್ಲಿಕಾರ್ಜುನ ದೇವಾಲಯ ಚಿಕ್ಕದು: ವಿರೂಪಾಕ್ಷ ದೇವಾಲಯ ದೊಡ್ಡದು. ಎರಡರಲ್ಲೂ ದಪ್ಪ ಕಂಭಗಳು; ಆ ಕಂಬಗಳ ಮೇಲೆ ಪಟ್ಟಿಕಾ ಶಿಲ್ಪಗಳು. ಗರ್ಭಗೃಹದ ಎರಡು ಪಾರ್ಶ್ವಗಳಲ್ಲೂ ಎರಡು ಸಣ್ಣ ಗುಡಿಗಳು. ಕಂಬಗಳ ಮೇಲಿನ ಪಟ್ಟಿಕಾ ಶಿಲ್ಪಗಳಲ್ಲಿ ದೇವಾಸುರರು ಸಮುದ್ರ ಮಥನ ಮಾಡುತ್ತಿರುವುದೊಂದು; ಪಾರ್ವತೀಪರಮೇಶ್ವರರ ವಿವಾಹವಿನ್ನೊಂದು; ಗೋವರ್ಧನೋದ್ಧಾರ ಮತ್ತೊಂದು; ಬಲರಾಮ ಧೇನುಕಾಸುರನನ್ನು ಕೊಲ್ಲುತ್ತಿರುವುದು ಮಗದೊಂದು; ವಾಮನಾವತಾರ ಹೀಗೆ ನಾನಾ ಪುರಾಣ ಸನ್ನಿವೇಶಗಳನೇಕ ಶಿಲ್ಪಕರ್ಮದಲ್ಲಿ ಕಂಡುಬರುತ್ತದೆ.

ಇವೆರಡೂ ದೇವಾಲಯಗಳ ಶಿಖರಗಳಲ್ಲೂ ವ್ಯತ್ಯಾಸವೇನೂ ಇಲ್ಲ. ಆದರೆ ಶಿಖರದ ಮೇಲ್ಭಾಗವು ಮಲ್ಲಿಕಾರ್ಜುನ ದೇವಾಲಯದಲ್ಲಿ ಗುಂಡಾಗಿದೆ; ವಿರೂಪಾಕ್ಷ ದೇವಾಲಯದಲ್ಲಿ ಚಚ್ಚೌಕವಾಗಿದೆ. ಇಷ್ಟು ಬಿಟ್ಟರೆ ಎರಡರಲ್ಲೂ ಕಳಶಗಳವರೆಗೂ ಅದೇ ಇದು, ಇದೇ ಅದು; ಎನ್ನುವಂತಿವೆ.

ಹೊರಗೋಡೆಗಳಲ್ಲಿರುವ ವಿಗ್ರಹಗಳೂ, ಕಿಟಕಿಗಳ ಜಾಲಂಧ್ರಗಳೂ, ಎರಡೂ ದೇವಾಲಯಗಳಲ್ಲೂ ಒಂದೇ ಬಗೆಯವಾಗಿವೆ. ಈ ದೇವಾಲಯದ ದ್ವಾರಪಟ್ಟಿಕೆಯ ಮೇಲ್ಭಾಗದಲ್ಲಿ ಗರುಡನ ಶಿಲ್ಪವಿದೆ. ಸಭಾಮಂಟಪದ ಉತ್ತರ ದ್ವಾರಪಟ್ಟಿಕೆಯ ಮೇಲೂ ಗರುಡಮೂರ್ತಿ ಇದೆ. ದಕ್ಷಿಣ ದ್ವಾರಪಟ್ಟಿಕೆಯಲ್ಲಿ ಗರುಡ ವಾಹನನಾಗಿ ವಿಷ್ಣು ಕಾಣುತ್ತಾನೆ. ಈ ದೇವಾಲಯದಲ್ಲಿ ಹರಿಹರರಲ್ಲಿ ಪಕ್ಷಪಾತ ಲೇಶವೂ ಕಂಡುಬರುವುದಿಲ್ಲ. ವೈಷ್ಣವರೂ, ಶೈವರೂ, ಭೇದಬುದ್ಧಿರಹಿತರಾಗಿ ಉದಾರ ಚರಿತರೆನಿಸಿ, ಬಾಳಿದ ರೀತಿಯು ಇವರಿಂದ ಗೊತ್ತಾಗುತ್ತದೆ. ಶಿಖರದ ಮುಂಭಾಗದಲ್ಲಿ ಶಿವತಾಂಡವ ಮೂರ್ತಿ ಇದೆ.

ಸಭಾಮಂಟಪದ ಉತ್ತರ ಪಾರ್ಶ್ವದ ಸಣ್ಣ ಕಂಬದ ಮೇಲೆ ಸತಿಪತಿಗಳಿಬ್ಬರ ಪ್ರೇಮಾಲಿಂಗನ ಸೂಚಕ ಶಿಲ್ಪವಿದೆ. ಬಹಳ ಮಾಡಿ ಈ ಶಿಲ್ಪವು ಇಮ್ಮಡಿ ವಿಕ್ರಮಾದಿತ್ಯ ಮತ್ತು ಕಿರಿಯರಸಿ ತ್ರೈಲೋಕ್ಯ ಮಹಾದೇವಿಯರದು ಇರಬೇಕು. ನಯನಾನಂದದಾಯಕವಾದೀ ಶಿಲ್ಪವು ಅಲ್ಲಲ್ಲಿ ಛಿನ್ನವಾಗಿದ್ದರೂ, ಶಿಲ್ಪದ ಮೇಲ್ಭಾಗವು ಕಲಾವಿದನ ಕಲ್ಪನಾ ಕೌಶಲವನ್ನು ಸಾಕಷ್ಟು ತೋರಿಸುತ್ತದೆ.

---

[17] *op. cit.*, p. 63

ಪಟ್ಟಣಂ ಪಟ್ಟದ ಕಿಸುವೊಳಲ ಚೆಲ್ವದೆಂತೆಂದೊಡೆ

ಕುನ್ತಳದೇಶಕಾನ್ತೆಯ ಲಲಾಟದವೊಲ್ಕಿಸುಕಾಡು ನಾಡುಚೆ
ಲ್ವಿಂ ತಳೆದೊಪ್ಪಿ ರಂಜಿಸುಗುಮಂತದರೊಳ್ ರತ್ನೋನ್ನ ಪಟ್ಟವೆಂ
ದಂತಿರೆ ಪಟ್ಟದಂಕಿಸುವೊಳಲ್ ಸಲೆ ಶೋಭಿಸುತಿರ್ಕ್ಕೆಮಾಪ್ಪರೋ
ಪಾಂತಮಾಳೆಲ್ಪ ಬಂದಿರ್ಪ್ಪದ ಪಾಸುಗೆಯುಂ ನೆರೆಯುಂ ನಿರಂತರಂ ॥

ನೃಗನಹುಷಾಳಪುರೂರವ
ಸಗರಾದಿನೃಪರ್ಗ್ಗೆ ಪಟ್ಟವರ್ಧನನೆಳೆಯುಂ
ಜಗದೊಳೆನಲು ಕಿಸುವೊಳಲಿಂ
ಮಿಗಿಲೆನಿಸುವ ಕ್ಷೇತ್ರಮೊಳವೆಧಾತ್ರೀತಳದೊಳ್ ॥

ಬೆಳಸಿದ ಸಂದಣಾವಳಿಗಳಿಂ ತಿಳಿದೊಪ್ಪುವ ಪೂಗೊಳಗಳಿಂ
ಮಾಳವುರೆಯುಂ ಪೂನ್ಗನೆಯುಂ ಬಳೆದೊಪ್ಪುವ ಕಂಪೊಳಲಂಗಳಿಂ
ಕಳಮವನಂಗಳಿಂದ ಕೋಕಿಳಾರವಚಕೋರಸಾರಿಕಾ
ಕುಳಕಳವಂಗಳಿಂ ಕಿಸುವೊಳಲ್ಪರಮೊಪ್ಪುಗುಮಂತು ಶೋಭ್ಯನಾದಂ ॥

ಭವಭವನಂಗಳಿನಂಬುಜ
ಭವಭವನಂಗಳಿನನೂನನವದೇವತನೂ
ಭವಭವನಂಗಳೇನುದು
ಭವಭವನಮೊಸಂಗೆ ಕಿಸುವೊಳಲ್ ವಸುಮತಿಯೊಳ್ ॥

12ನೆಯ ಶತಮಾನದ ಪಟ್ಟದಕಲ್ಲಿನ ಶಾಸನದಿಂದ

ಬಿ. ವಸಂತ ಶೆಟ್ಟಿ

ಮಧ್ಯಯುಗೀನ ಬಾರಕೂರಿನ ಪೌರಾಡಳಿತದಲ್ಲಿ ಜನತಾ ಪ್ರಾತಿನಿಧ್ಯ

ಹಿನ್ನೆಲೆ

ಅರಬೀ ಸಮುದ್ರದ ಕರಾವಳಿಯಲ್ಲಿ ಸೀತಾನದಿಯ ದಂಡೆಯ ಮೇಲೆ ಇರುವ ಬಾರಕೂರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿಗೆ ಸೇರಿದೆ. ಇತಿಹಾಸ ಕಾಲದಲ್ಲಿ ಬಾರಕೂರು ದೊಡ್ಡ ಪಟ್ಟಣವಾಗಿದ್ದು, ಹಂಗರ ಕಟ್ಟೆಯ ಬಂದರದ ತನಕವೂ ವಿಸ್ತರಿಸಿತ್ತು. ಇತಿಹಾಸದ ಕಾಲಚಕ್ರಕ್ಕೆ ಸಿಲುಕಿ ನಶಿಸಿ ಹೋಗಿ ಇಂದು ಸಂಪೂರ್ಣ ಹಾಳು ಬಿದ್ದಿರುವ ಬಾರಕೂರು ಸುಮಾರು ಆರು ಶತಮಾನಗಳ ವರೆಗೆ ತುಳುನಾಡಿನ ರಾಜಕೀಯ ಕೇಂದ್ರವಾಗಿ ಮೆರೆದ ನಗರ.

ಹನ್ನೆರಡನೆಯ ಶತಮಾನದವರೆಗೆ ಕೇವಲ ಬಂದರು ಹಾಗೂ ವ್ಯಾಪಾರೀ ಕೇಂದ್ರವಾಗಿ ಪ್ರಸಿದ್ಧಿ ಪಡೆದ ಬಾರಕೂರು, ಹನ್ನೆರಡು ಮತ್ತು ಹದಿಮೂರನೇ ಶತಮಾನಗಳಲ್ಲಿ ಆಳುಪರ ರಾಜಧಾನಿಯಾಗಿ ಮೆರೆಯಿತು. ಹೊಯ್ಸಳರ ಸಾಮ್ರಾಜ್ಯ ವಿಸ್ತರಿಸಲ್ಪಟ್ಟಾಗ ಅದರ ಅಂಗವಾಗಿ ಮಾರ್ಪಟ್ಟ ಬಾರಕೂರು ವಿಜಯನಗರದ ಉದಯದೊಂದಿಗೆ ಸುಮಾರು ಕಾಪುವಿನಿಂದ ಭಟ್ಕಳದ ವರೆಗೆ ವಿಸ್ತರಿಸಿದ್ದ 'ಬಾರಕೂರು ರಾಜ್ಯ'ವಾಗಿ ಮಾರ್ಪಟ್ಟು ವಿಜಯನಗರ ಸಾಮ್ರಾಟನಿಂದ ನೇಮಿಸಲ್ಪಡುತ್ತಿದ್ದ ಪ್ರಾಂತಾಧಿಕಾರಿಗಳಿಂದ ಆಳಲ್ಪಡುತ್ತಿತ್ತು. ವಿಜಯನಗರದ ಅಳಿವುಗಾಲ ಪ್ರಾರಂಭವಾದಾಗ 'ಅಮರ ಮಾಗಣೆ'ಯಾಗಿ ಇಕ್ಕೇರಿಯವರ ಕೈಸೇರಿದ ಬಾರಕೂರು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತೆನ್ನಬಹುದು. ಕೆಳದಿ ರಾಜ್ಯದ ಪತನಾನಂತರ ಟಿಪ್ಪು ಸುಲ್ತಾನನ ವಶವಾದ ಬಾರಕೂರು ನಂತರ ಬ್ರಿಟಿಷರ ಕೈ ಸೇರಿ ಸ್ವಾತಂತ್ರ್ಯದ ಪ್ರಾಪ್ತಿಯೊಂದಿಗೆ ಸ್ವತಂತ್ರ ಭಾರತದ ಒಂದು ಹಳ್ಳಿಯಾಗಿ ಮಾರ್ಪಟ್ಟಿತು.

ಜನತಾ ಪ್ರಾತಿನಿಧ್ಯ

ಮಧ್ಯಯುಗದಲ್ಲಿ ರಾಜಧಾನಿಯಾಗಿ ಮೆರೆದ ಬಾರಕೂರು ಪಟ್ಟಣ ಸುಮಾರು ಹತ್ತೊಂಬತ್ತು ಮೈಲುಗಳ ಸುತ್ತಳತೆಯುಳ್ಳದ್ದಾಗಿದ್ದು ಉತ್ತಮ ನಗರಾಡಳಿತ ವ್ಯವಸ್ಥೆಯನ್ನು ಹೊಂದಿತ್ತು. ನಗರದ ಆಡಳಿತ ಸುಲಭವಾಗುವಂತೆ ಬಾರಕೂರನ್ನು ಕೋಟೆಕೇರಿ, ಮಣಿಗಾರಕೇರಿ, ಎರಡುಕೇರಿ, ಮೂರುಕೇರಿ, ಚೌಳಿಕೇರಿ, ಪಟಸಾಲಕೇರಿ, ಭಂಡಾರಕೇರಿ, ಹೊಸಕೇರಿ, ಬಳೆಗಾರಕೇರಿ ಮತ್ತು ರಂಗನಕೇರಿ ಎಂಬ ಹತ್ತು ಕೇರಿಗಳನ್ನಾಗಿ ವಿಭಾಗಿಸಲಾಗಿತ್ತು. ಹನ್ನೊಂದನೇ ಶತಮಾನದ ಒಂದು ಶಾಸನದಲ್ಲಿ ಇಂತಹ ವ್ಯವಸ್ಥೆಗೆ ಉಲ್ಲೇಖವಿದ್ದರೂ[1] ಇದಕ್ಕಿಂತಲೂ ಬಹಳ ಮೊದಲಿನಿಂದಲೇ ಕೇರಿಗಳ ವ್ಯವಸ್ಥೆ ಜಾರಿಯಲ್ಲಿದ್ದಿರಬೇಕು. ಕೋಟೆಕೇರಿ ಎಂಬ ಪ್ರದೇಶವು ಆಳುಪರ ಕೋಟೆಯಿದ್ದ ಸ್ಥಳವಾಗಿದ್ದು ಆಳುಪರ ಸುವ್ಯವಸ್ಥಿತ ಆಡಳಿತ ಜಾರಿಗೆ ಬಂದಾಗಲೇ ಈ ಕೇರಿಗಳ ಕ್ರಮ ಜಾರಿಗೆ ಬಂದಿತೆಂದು ಊಹಿಸಬಹುದು. ತುಳುನಾಡಿನ ಇನ್ನೊಂದು ಪಟ್ಟಣವಾಗಿದ್ದ ಬಸರೂರಿನಲ್ಲಿ ಇಂತಹದೇ ವ್ಯವಸ್ಥೆ ಜಾರಿಯಲ್ಲಿತ್ತೆಂಬುದೂ ಗಮನಾರ್ಹ

[1] *South Indian Inscriptions*, VII, No. 314.

ಬಾರಕೂರು ನಗರವನ್ನು ಹತ್ತು ಕೇರಿಗಳಾಗಿ ವಿಂಗಡಿಸಿ ಅವುಗಳಿಗೆ ನಗರಾಡಳಿತದಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದನ್ನು ಹಾಗೂ ನಖರ, ಸೆಟ್ಟಿಗಾರ, ಹಂಜಮಾನ ಮುಂತಾದ ವರ್ತಕ ಸಂಘಗಳು ಬಾರಕೂರು ನಗರದ ಆಡಳಿತದಲ್ಲಿ ವಹಿಸುತ್ತಿದ್ದ ಪಾತ್ರ ಮತ್ತು ಈ ಸಂಘಗಳಿಗಿದ್ದ ಹಕ್ಕುಬಾಧ್ಯತೆಗಳನ್ನು ವೀಕ್ಷಿಸಿದಾಗ ಬಾರಕೂರಿನ ಪೌರಾಡಳಿತದಲ್ಲಿ ಒಂದು ರೀತಿಯ ಪ್ರಜಾಪ್ರಭುತ್ವದ ತತ್ವ ಪ್ರಚಲಿತವಿತ್ತೆಂಬುದು ವಿದಿತವಾಗುತ್ತದೆ.

ಬಾರಕೂರಿನ ಒಂದೊಂದು ಭಾಗದಲ್ಲಿ ತಮ್ಮದೇ ಆದ ಉದ್ಯೋಗವನ್ನು ಪಾಲಿಸಿಕೊಂಡು ಬರುವ ಒಂದೊಂದು ಪಂಗಡ ವಾಸವಾಗಿದ್ದುದರಿಂದಲೇ ಆ ಪ್ರದೇಶಕ್ಕೆ ಅವರದೇ ಹೆಸರನ್ನಿಟ್ಟು ಒಂದು ಕೇರಿಯನ್ನಾಗಿ ವಿಭಾಗಿಸಿದ್ದಿರಬಹುದು. ಕೆಲವು ಕೇರಿಗಳಿಗಿರುವ ಹೆಸರುಗಳೂ ಇದನ್ನೇ ಸೂಚಿಸುತ್ತವೆ. ಮಣಿಸರಕುಗಳ ತಯಾರಕರು ಹಾಗೂ ಮಾರಾಟಗಾರರದ್ದು ಮಣಿಗಾರಕೇರಿಯಾದರೆ, ಬಳೆಗಾರರದ್ದು ಬಳೆಗಾರಕೇರಿಯೆಂದಾಯಿತು (ಕೆಲವು ಕೇರಿಗಳು ಮಾತ್ರ ಇದಕ್ಕೆ ಅಪವಾದಗಳಾಗಬಹುದು.) ಆದ್ದರಿಂದ ಆ ಕೇರಿಗಳ ಜನರ ಕ್ರಮನಿಯಮಗಳೂ ಬೇರೆ ಬೇರೆ ಇದ್ದು ಪ್ರತಿಯೊಂದು ಕೇರಿಗೂ ಅದರದೇ ಆದ ಕಟ್ಟುಕಟ್ಟಳೆಗಳೂ ಇದ್ದುದು ಸಹಜ.[2] ಈ ಎಲ್ಲಾ ಕೇರಿಗಳಿಗೂ ಸಭೆಯಲ್ಲಿ ಪ್ರಾತಿನಿಧ್ಯ ಇದ್ದಿತೆಂದು ಶಾಸನಗಳಿಂದ[3] ತಿಳಿದು ಬರುತ್ತದಾದ್ದರಿಂದ ಈ ಕೇರಿಗಳಲ್ಲಿನ ಬೇರೆ ಬೇರೆ ಪಂಗಡಗಳವರಿಗೆ ಪ್ರಾತಿನಿಧ್ಯವಿದ್ದಿತೆಂದು ನಾವು ತಿಳಿಯಬಹುದು. ಆದ್ದರಿಂದ ಸಾಮಾನ್ಯ ಮನುಷ್ಯನಿಗೂ ತನ್ನ ಕೇರಿಯ ಪ್ರಾಯಶಃ ಆರಿಸಿ ಬಂದ ಪ್ರತಿನಿಧಿಯ ಮೂಲಕ ಆಡಳಿತದಲ್ಲಿ ಪಾಲ್ಗೊಳ್ಳುವಂತಾಗುತ್ತಿತ್ತು. ಈ ಪ್ರತಿನಿಧಿಗಳ ಮೂಲಕ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಕೇರಿಯ ಜನರಿಗೆ ಸಾಧ್ಯವಿತ್ತು.

ವ್ಯಾಪಾರೀ ಹಾಗೂ ಇನ್ನಿತರ ಸಂಘಗಳಿಗೂ ಪೌರಾಡಳಿತದಲ್ಲಿ ಪ್ರಾತಿನಿಧ್ಯವಿತ್ತೆಂಬುದು ಕೆಲವು ಶಾಸನಗಳಿಂದ ತಿಳಿಯಬರುತ್ತದೆ. ವ್ಯಾಪಾರೀ ಸಂಘಗಳ ಪೈಕಿ ಸೆಟ್ಟಿಕಾರರು, ನಖರ ಮತ್ತು ಹಂಜಮಾನರು ಪ್ರಮುಖರಾಗಿದ್ದರು. ಮೊದಲಿನ ಎರಡು ಸಂಘಗಳವರು ಮೂಲತಃ ತುಳುನಾಡಿನವರೇ ಆಗಿದ್ದು, ಸೆಟ್ಟಿಕಾರರು ಸ್ವದೇಶೀ ಸರಕುಗಳನ್ನೂ, ನಖರದವರು ವಿದೇಶೀ ಸರಕುಗಳನ್ನೂ ಮಾರುವವರಾಗಿದ್ದಿರಬಹುದು.[4] ಹತ್ತು ಕೇರಿಗಳಲ್ಲಿ ನೆಲೆಸಿದ ಬೇರೆ ಬೇರೆ ಸ್ವದೇಶಿ ವ್ಯಾಪಾರಸ್ಥ ಪ್ರತಿನಿಧಿಗಳಾಗಿ ಸೆಟ್ಟಿಕಾರರು ಪೌರಾಡಳಿತದಲ್ಲಿ ಭಾಗವಹಿಸುತ್ತಿದ್ದಿರಬಹುದೆಂಬುದಕ್ಕೆ ಶಾಸನಗಳಲ್ಲಿ ಬರುವ "ಬಾರಕೂರ ಹತ್ತು ಕೇರಿಯ ಹದಿನಾರು ಮಂದಿ ಸೆಟ್ಟಿಕಾರರು", "ಮೂರು ಕೇರಿಯ ಮೂವರು ಸೆಟ್ಟಿಕಾರರು"[5] ಮುಂತಾದ ಉಲ್ಲೇಖಗಳು ಪುಷ್ಟಿಯನ್ನೀಯುತ್ತವೆ. ಈ ಸೆಟ್ಟಿಕಾರರು ಆ ಸಂಸ್ಥೆಗಳ ಮುಖ್ಯಸ್ಥರಿರಬೇಕೆಂಬುದು ಡಾ. ಪಿ. ಗುರುರಾಜ ಭಟ್ಟರ ಅಭಿಪ್ರಾಯ.[6] ಅಂತೂ ಈ ಸೆಟ್ಟಿಕಾರರಿಗೆ ಪೌರಾಡಳಿತದಲ್ಲಿ ಪ್ರಾತಿನಿಧ್ಯವಿದ್ದಿತೆಂಬುದು ವ್ಯಕ್ತವಾಗುತ್ತದೆ.

ಹಂಜಮಾನ ಸಂಘವು ಪರ್ಷಿಯಾ ದೇಶದ ಮುಸ್ಲಿಂ ವರ್ತಕರ ಸಂಘವೆಂದು ಈಗಾಗಲೇ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.[7] ವರ್ತಕ ವೃತ್ತಿಯನ್ನು ಹಿಡಿದು ಭಾರತಕ್ಕೆ ಬಂದು ಕರಾವಳಿ ಪ್ರದೇಶ

---

[2] P. Gururaja Bhat. *The Historic city of Barakuru of Tulunadu.* (Article in Silver Jubilee Souveneir of National Junior College, Barakuru)

[3] *S. I. I.*, VII, No. 340.

[4] ಕೋ. ವೈ. ರಮೇಶ, ತುಳುನಾಡಿನ ಇತಿಹಾಸ, (ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ, ೧೯೭೮) ಪು. ೨೦

[5] *S. I. I.*, VII, No. 350 & 312, 340.

[6] Gururaj Bhat: *Studies in Tuluva History and Culture* (Kallianpur 1975) p. 173.

[7] ರಮೇಶ, ಕೋ.ವೈ. ಮತ್ತು P. Gururaja Bhat ಇವರ ಗ್ರಂಥಗಳಲ್ಲಿ ಕ್ರಮವಾಗಿ ಪು. ೨೦ ಮತ್ತು pp 218 ff

ದಲ್ಲಿ ಅಲ್ಲಲ್ಲಿ ನೆಲೆಸಿದ ಈ ವ್ಯಾಪಾರಿಗಳ ಪಾಳೆಯಗಳು ಇಲ್ಲಿನ ರಾಜರಿಂದಲೂ ವಿಶೇಷ ಸೌಲಭ್ಯಗಳನ್ನು ಪಡೆದುಕೊಂಡಿದ್ದವು. ಅಂತೆಯೇ ವ್ಯಾಪಾರೀ ಕೇಂದ್ರವಾದ ಬಾರಕೂರಿನಲ್ಲಿಯೂ ಇವರ ಪ್ರಾಬಲ್ಯ ವಿದ್ದಿತೆಂಬುದು ಅಲ್ಲಿನ ಶಾಸನಗಳಿಂದ ವಿದಿತವಾಗುತ್ತದೆ. ಪೌರಾಡಳಿತದಲ್ಲಿ ಪಂಜಮಾನ ಸಂಘಕ್ಕೆ ಬೇರೆ ವ್ಯಾಪಾರೀ ಸಂಘಗಳ ಹಾಗೆಯೇ ಸ್ಥಾನಮಾನ, ಪ್ರಾತಿನಿಧ್ಯ ಹಾಗೂ ಅಧಿಕಾರವಿದ್ದುದು ವಿಜಯ ನಗರದ ಎರಡನೆ ಬುಕ್ಕರಾಯನ ಕಾಲದ ಬಾರಕೂರಿನ ಒಂದು ಶಾಸನದಿಂದ ತಿಳಿಯುತ್ತದೆ.[8]

ಯಾವ ಕೇರಿಗಳಲ್ಲಿ ವ್ಯಾಪಾರಸ್ಥರು ಹೆಚ್ಚು ಸಂಖ್ಯೆಯಲ್ಲಿರಲಿಲ್ಲವೋ ಅಲ್ಲಿ 'ಹಲರು' ಪ್ರಮುಖ ಪ್ರತಿನಿಧಿಗಳಾಗಿದ್ದಿರಬೇಕು. ಬೇರೆ ಕೇರಿಗಳಲ್ಲೂ 'ಹಲರು' ಪ್ರತಿನಿಧಿಗಳಾಗಿದ್ದು ಪುರಸಭೆಯ ಸದಸ್ಯ ರಾಗಿದ್ದಿರಬೇಕು. 'ಹತ್ತು ಕೇರಿಯ ಹಲರು' ಮತ್ತು 'ಚೌಳಿಕೇರಿಯ ಐವರು ಹಲರು' ಎಂಬ ಉಲ್ಲೇಖ ಗಳು ಶಾಸನಗಳಲ್ಲಿ ಕಂಡು ಬರುತ್ತವೆ.[9] ಚೌಳಿಕೇರಿಯ ಹಲರು ಹಾಗೂ ಮೂರು ಕೇರಿಯ ಸೆಟ್ಟಿಕಾರ ರರೊಳಗೆ ವ್ಯಾಪಾರಕ್ಕೆ ಸಂಬಂಧಿಸಿ ಬಲವಾದ ಭಿನ್ನಾಭಿಪ್ರಾಯ ಬಂದುದು ಮೂಡುಕೇರಿಯ ಒಂದು ಶಾಸನದಿಂದ ತಿಳಿಯುತ್ತವೆ.[10] ಇಲ್ಲಿ ಎರಡು ಕೇರಿಗಳ ಸೆಟ್ಟಿಕಾರರೊಳಗೆ ವ್ಯಾಪಾರಕ್ಕೆ ಸಂಬಂಧಪಟ್ಟ ಭಿನ್ನಾಭಿಪ್ರಾಯ ಹುಟ್ಟುವ ಬದಲು ಚೌಳಿಕೇರಿಯ ಹಲರು ಹಾಗೂ ಮೂರುಕೇರಿಯ ಸೆಟ್ಟಿಕಾರರೊಳಗೆ ಭಿನ್ನಾಭಿಪ್ರಾಯ ಹುಟ್ಟಿದುದು ಗಮನಾರ್ಹ. ಚೌಳಿಕೇರಿಯಲ್ಲಿ ಸೆಟ್ಟಿಕಾರರು ಇದ್ದರೂ ಸಹ ಹಲರೇ ಆ ಕೇರಿಯಲ್ಲಿ ಪ್ರಮುಖರಾಗಿದ್ದಿರಬೇಕೆಂದು ಊಹಿಸಬಹುದೇನೋ. ಆದರೆ ಸೆಟ್ಟಿಕಾರರು ಹಾಗೂ ಇನ್ನಿತರ ವ್ಯಾಪಾರೀ ಸಂಘಗಳ ಪ್ರತಿನಿಧಿಗಳಿದ್ದಾಗಲೂ, ಅಲ್ಲಿಂದಲೂ 'ಹಲರು' ಪುರಸಭೆಗೆ ಆರಿಸಲ್ಪಡು ತ್ತಿದ್ದಿರಬೇಕು. (ವ್ಯಾಪಾರೀ ಸಂಘಗಳ ಪ್ರತಿನಿಧಿಗಳಿದ್ದಲ್ಲಿ ಆ ಕೇರಿಯಿಂದ ಪುರಸಭೆಗೆ ಆರಿಸಲ್ಪಡುವ ಹಲರ ಸಂಖ್ಯೆ ಕಡಿಮೆಯಿದ್ದಿರಬಹುದು.) ಇಲ್ಲವಾದಲ್ಲಿ "ಹತ್ತು ಕೇರಿಯ ಹಲರು" ಎಂಬ ಉಲ್ಲೇಖ ಶಾಸನದಲ್ಲಿ ಬರುತ್ತಿದ್ದಿಲ್ಲ. ೧೪೦೭ರಲ್ಲಿ ಮಹಾಬಲದೇವ ಒಡೆಯನನ್ನು ಗಾದಿಯಿಂದ ಕೆಳಗಿಳಿಸುವಲ್ಲಿ ಈ ಹಲರು ಪ್ರಮುಖ ಪಾತ್ರವನ್ನು ವಹಿಸಿದುದು ಒಂದು ಶಾಸನದಿಂದ ತಿಳಿದುಬರುತ್ತದೆ.[11] ಅಂತೂ ಹತ್ತು ಕೇರಿಗಳ ಪ್ರತಿನಿಧಿಗಳಾಗಿ ಹಲರು ಪೌರಾಡಳಿತದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದುದನ್ನು ಗಮನಿಸಿದಾಗ ಕೇವಲ ವ್ಯಾಪಾರೀ ಸಂಘಗಳಲ್ಲದೆ ಹತ್ತು ಕೇರಿಯ ಜನರಿಗೂ ಪ್ರಾತಿನಿಧ್ಯ ಇತ್ತೆಂದು ತಿಳಿಯಬಹುದು.

ಅಂತೆಯೇ ಕೋಲು ಬಳಿ ಸಂಘವು ('ಕೋಲಬಳಿ ವೀರ ಪರಿವಾರ') ಸೇನಾನಿಗಳ ಸಂಘವಾಗಿದ್ದು ಅವರೂ ಸಹ ವ್ಯಾಪಾರೀ ಸಂಘಗಳೊಂದಿಗೆ ಪೌರಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರೆಂಬುದು ವಿದ್ವಾಂಸರ ಅಭಿಪ್ರಾಯ.[12] ಹಾಗಿರುವಾಗ ಸೈನಿಕರಿಗೂ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಂತಾಯಿತು. ಅವರು ಮಾತ್ರವಲ್ಲದೆ 'ಎಳಮೆ' ಮತ್ತು 'ಪರಿವಾರ'ಗಳವರೂ ಪೌರಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಹೀಗೆ ಸಮಾಜದ ವಿವಿಧ ಭಾಗಗಳಿಂದ (ಆರಿಸಿ?) ಬಂದ ಸದಸ್ಯರನ್ನೊಳಗೊಂಡ ಪುರಸಭೆಗೆ 'ಸ್ಥಾನಪತಿ' ಅಧ್ಯಕ್ಷನಾಗಿದ್ದು, ಅವನ ಅಧಿಕಾರ ಮತ್ತು ಆಡಳಿತೆಯಲ್ಲಿ ಹಾಗೂ ಸಮಾಜದ ಹಿತರಕ್ಷಣೆ ಮಾಡುವಲ್ಲಿ ಅವನ ಪಾತ್ರ ವಿಶಿಷ್ಟತೆಯುದು ಕಿ.ಶ. ೧೪೦೭ರ ಒಂದು ಶಾಸನದಿಂದ ಸ್ಪಷ್ಟವಾಗುತ್ತದೆ. ಬಾರಕೂರಿನ ರಾಜ್ಯಪಾಲನಾಗಿದ್ದ ಮಹಾಬಳದೇವ ಒಡೆಯನು ಯಾವುದೋ ಕಾರಣಕ್ಕಾಗಿ ರಾಜಧಾನಿ ಪಟ್ಟಣ ಬಾರಕೂರಿನ ಹತ್ತು ಕೇರಿಯ ನಖರ, ಪಂಜಮಾನ ಮುಂತಾದ ವರ್ತಕ ಸಂಘಗಳ ಸೆಟ್ಟಿತನದ

---

[8] *S. I I. VII*, No. 173

[9] *Ibid.*, Nos. 314 and 340

[10] *Ibid.*, No. 309.

[11] Suryanath Kamath: *Tuluva province under Vijayanagara* (Paper presented in Hampi Seminar on VIjayanagara)

12 ರಮೇಶ, ಕೋ. ವೈ. ರವರ ಗ್ರಂಥ, ಪು. ೭೧

'ಅನ್ಯಮಾನ ಸಮಯ ಸಂಕೇತ'ಗಳನ್ನು ತೆಗೆದುಹಾಕಿದ್ದನು. ಈ ವರ್ತನೆಯು ನ್ಯಾಯಸಮ್ಮತವಲ್ಲವೆಂದು ಆಗ ಹತ್ತು ಕೇರಿಯ ಸ್ಥಾನಪತಿಯಾಗಿದ್ದ ಚಿಕ್ಕಣ್ಣನು ಮಹಾರಾಜ ವಿರಪನೆಯ ಬುಕ್ಕರಾಯನಲ್ಲಿ ಮೊರೆಯಿಡಲು ರಾಯನು ಗೋವೆಯ ರಾಜ್ಯಪಾಲನಾಗಿದ್ದ ಬಾಚಣ್ಣನು ಬಾರಕೂರಿಗೆ ಹೋಗಿ ವಿಚಾರಣೆ ನಡೆಸುವಂತೆ ಆಜ್ಞಾಪಿಸಿದನು. ವಿಚಾರಣೆಯ ನಂತರ ಮಹಾಬಲದೇವನ ವರ್ತನೆಯು ನ್ಯಾಯಬಾಹಿರವಲ್ಲ ಎಂದು ತಿಳಿದ ಬಾಚಣ್ಣನು ತೊಂದರೆಗೆ ಈಡಾಗಿದ್ದ ನಖರ, ಹಂಜಮಾನ ಮುಂತಾದ ವರ್ತಕರ ಸಂಘದವರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಪುನಃ ಅವರ ಸ್ವಾಧೀನಪಡಿಸಿ ಅವರು ಅನುಭವಿಸಿದ ಕಷ್ಟನಷ್ಟಗಳಿಗೆ ಪರಿಹಾರವಾಗಿ ಭೂಮಿ ದಾನವನ್ನು ಕೊಟ್ಟನೆಂದು ಮೇಲೆ ಹೇಳಿದ ಶಾಸನದಿಂದ ತಿಳಿದು ಬರುತ್ತದೆ.[13] ಇದರಿಂದ ಬಾರಕೂರಿನ ಜನತೆಗೆ ಆಡಳಿತದ ಮೇಲಿದ್ದ ಹತೋಟಿ. ಹಾಗೂ ಹಕ್ಕು ಸ್ಪಷ್ಟತೆ ತಿಳಿಯುತ್ತದಲ್ಲದೆ. ಸಾಮ್ರಾಟನಿಂದಲೇ ನೇಮಿಸಲ್ಪಟ್ಟ ರಾಜ್ಯಪಾಲನ ವಿರುದ್ಧ ಸಾಮ್ರಾಟನಿಗೇ ದೂರನ್ನು ನೀಡಿ ರಾಜ್ಯಪಾಲನನ್ನು ಕೆಳಗಿಳಿಸುವಷ್ಟು ಸಾಮರ್ಥ್ಯ ಪುರಜನರಿಗಿತ್ತು ಮತ್ತು ಆ ಸ್ಥಳೀಯ ಹಕ್ಕನ್ನು ಯಾರೂ ಕಸಿದುಕೊಳ್ಳುವಂತಿರಲಿಲ್ಲವೆಂಬುದು ವಿದಿತವಾಗುತ್ತದೆ. ರಾಜ್ಯಪಾಲರಿಗೆ ಒಳಾಡಳಿತ ವಿಷಯದಲ್ಲಿ ಪರಿಮಿತ ಅಧಿಕಾರ ಎಂದಿಗೂ ಇರಲಿಲ್ಲ ಮತ್ತು ಅಂತಹ ಅತ್ಯಗತ್ಯ ಪರಿಸ್ಥಿತಿಯಲ್ಲಿ ಮಾತ್ರ ರಾಜ್ಯಪಾಲರು ಪೌರಾಡಳಿತದಲ್ಲಿ ಕೈಹಾಕುತ್ತಿದ್ದರು.[14] ಆದ್ದರಿಂದ ಬಾರಕೂರಿನ ನಗರಾಡಳಿತವು (ಜನರಿಂದಲೇ ಆರಿಸಲ್ಪಟ್ಟ) ಜನರ ಹಿತಕ್ಕಾಗಿ ದುಡಿಯುತ್ತಿದ್ದ ಜನತಾ ಪ್ರತಿನಿಧಿಗಳ ಕೈಯಲ್ಲಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

---

13 ಅದೇ, ಪು. ೮೬, ೮೭

14 Gururaja Bhat ರವರ ಗ್ರಂಥ, p. 175.

ಪುಸ್ತಕಲೋಕ

ಭಾರತದಲ್ಲಿ ಆರ್ಥಿಕ ವ್ಯವಸ್ಥೆ : ಲೇ. ಡಾ: ಟಿ. ಕೆ. ಮೇಟಿ ಮತ್ತು ಇತರರು ; ಪ್ರ : ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾ ನಿಲಯ, ಧಾರವಾಡ (೧೯೭೫).

ಭಾರತದಲ್ಲಿ ಆರ್ಥಿಕ ವ್ಯವಸ್ಥೆ ಎಂಬ ಈ ಗ್ರಂಥವನ್ನು ಪಿ.ಯು.ಸಿ. ಎರಡನೆಯ ವರ್ಷದ ಪಠ್ಯಕ್ರಮಕ್ಕೆ ಅನುಗುಣವಾಗಿ ರಚಿಸಲಾಗಿದೆ. ಭಾರತದ ಆರ್ಥಿಕ ವ್ಯವಸ್ಥೆ, ನೈಸರ್ಗಿಕ ಸಂಪನ್ಮೂಲಗಳು, ಭಾರತದಲ್ಲಿ ಆರ್ಥಿಕ ಯೋಜನೆ, ಕೃಷಿಯ ಅಭಿವೃದ್ಧಿ, ಔದ್ಯೋಗಿಕ ಅಭಿವೃದ್ಧಿ ಔದ್ಯೋಗಿಕ ಶ್ರಮ, ಸಾರಿಗೆ ವ್ಯವಸ್ಥೆ, ವಿದೇಶಿವಾಣಿಜ್ಯ, ಭಾರತದ ಬ್ಯಾಂಕು ವ್ಯವಸ್ಥೆ ಮತ್ತು ಸರಕಾರದ ಹಣಕಾಸು–ಇವು ಈ ಪುಸ್ತಕದಲ್ಲಿ ನಿರೂಪಿಸಲ್ಪಟ್ಟಿವೆ.

ಭಾರತದ ಆರ್ಥಿಕತೆಯ ಪರಿಚಯ ಮಾಡಿಕೊಡುವ ಯಾವ ಪುಸ್ತಕವಾದರೂ ಅದು ಆದಷ್ಟು ಇತ್ತೀಚಿನ ಬೆಳವಣಿಗೆ ಮತ್ತು ಅಂಕಿಅಂಶಗಳನ್ನು ಒಳಗೊಂಡಿರುವುದು ಅತ್ಯಗತ್ಯ. ಈ ದೃಷ್ಟಿಯಿಂದ ನೋಡಿದರೆ ಈ ಪುಸ್ತಕ ಬಹಳ ಹಿಂದಿದೆ ಎಂದು ಹೇಳಬಹುದು. ಪುಸ್ತಕದ ಪ್ರಕಟಣೆ 1975ರಲ್ಲಿ ಆಗಿದ್ದರೂ ಐದನೆಯ ಯೋಜನೆಯ ಕರಡಿನಲ್ಲಿರುವ ಆರ್ಥಿಕ ಅಂಕಿಅಂಶಗಳು ಇದರಲ್ಲಿ ಇಲ್ಲ. ಐದನೆಯ ಕರಡು ಯೋಜನೆಯನ್ನು ಗಣನೆಗೆ ತೆಗೆದುಕೊಂಡಿದ್ದರೆ, ನಾಲ್ಕನೆಯ ಯೋಜನೆಯಲ್ಲಿ (1964–74) ವಿವಿಧ ಆರ್ಥಿಕ ಕ್ಷೇತ್ರಗಳಲ್ಲಿ ಆದ ಪ್ರಗತಿ ಮತ್ತು 1975–79ರ ಅವಧಿಯಲ್ಲಿ ನಿರೀಕ್ಷಿಸಲಾಗಿರುವ ಗುರಿಗಳನ್ನು ಪುಸ್ತಕದಲ್ಲಿ ಅಳವಡಿಸಬಹುದಾಗಿತ್ತು. ಅದೂ ಅಲ್ಲದೆ ಇತ್ತೀಚಿನ ಮುಖ್ಯ ಆರ್ಥಿಕ ಆಯೋಗಗಳ, ಉದಾಹರಣೆಗೆ, ರಾಷ್ಟ್ರೀಯ ಕಾರ್ಮಿಕ ಆಯೋಗ, ಬ್ಯಾಂಕಿಂಗ್ ಆಯೋಗ (National Labour Commission, Banking Commission)ಗಳ ಸಲಹೆಗಳನ್ನು ಪುಸ್ತಕದಲ್ಲಿ ನಿರೂಪಿಸಿಲ್ಲ.

ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಬರೆಯುವಾಗ ನಾವು ಆದಷ್ಟು ನಿಖರವಾಗಿ ಆವೇಶ ವಿಲ್ಲದೆ ಬರೆಯಬೇಕು. ಆದರೆ ಪುಸ್ತಕದಲ್ಲಿ ಆವೇಶದ ವಾಕ್ಯಗಳಿವೆ ಮತ್ತು ತಪ್ಪು ಅಭಿಪ್ರಾಯ ಕೊಡುವ ವಾಕ್ಯಗಳು ಇವೆ. ಉದಾಹರಣೆ: ಭಾರತವು ಜಾತೀಯವಾಗಿ ಹಿಂದುಳಿದ ರಾಷ್ಟ್ರ. (ಪುಟ 10). ಅದರಂತೆ ಮಾಲ್ಥಸ್ ಜನಸಂಖ್ಯೆಯನ್ನು 'Positive Checks' ಪ್ರತ್ಯಕ್ಷ ಪರಿಣಾಮಕಾರಿ ಕ್ರಮಗಳಿಂದ ಕುಂದಿಸಬೇಕೆಂದು ಅಭಿಪ್ರಾಯಪಟ್ಟಿರುವರು. (ಪುಟ 16); ಕೈಗಾರಿಕಾ ಕ್ಷೇತ್ರದಲ್ಲಿ ಸಾಧಿಸಲಾದ ಹಿರಿಮೆಯನ್ನು ಅಳೆಯುವ ಸಾಧನ ಉದ್ಯೋಗಸ್ಥಿತಿಯೊಂದೇ; ನಾಲ್ಕನೆಯ ಯೋಜನೆಯು ಪುಸ್ತಕ ರೂಪದಲ್ಲಿ ನಿಂತಿತೇ ಹೊರತು ಕಾರ್ಯಗತವಾಗಲೇ ಇಲ್ಲ. (ಪುಟ 91)–ಈ ವಾಕ್ಯಗಳೆಲ್ಲಾ ತಪ್ಪು ಅಭಿಪ್ರಾಯವನ್ನುಂಟುಮಾಡುತ್ತವೆ. ಭಾರತವು ಜಾತೀಯವಾಗಿ ಹಿಂದುಳಿದ ರಾಷ್ಟ್ರವೆಂದರೆ ಜಾತೀಯ ವಾಗಿ ಮುಂದುವರಿಯಬೇಕೆ? ಮಾಲ್ಥಸ್ ಜನಸಂಖ್ಯೆಯ ಅತೀವ ಬೆಳವಣಿಗೆಯನ್ನು ತಡೆಗಟ್ಟದಿದ್ದರೆ 'Positive Checks' ಪರಿಣಾಮವಾಗುತ್ತದೆ ಎಂದು ಮುನ್ನೆಚ್ಚರಿಕೆ ಕೊಟ್ಟರೇ ಹೊರತು, ಜನಸಂಖ್ಯೆಯನ್ನು ಅಧಿಕಗೊಳಿಸಿ Positive Checks ಮೂಲಕ ಕುಂದಿಸಬೇಕೆಂಬ ಅಭಿಪ್ರಾಯ ವನ್ನು ಕೊಟ್ಟಿಲ್ಲ. ಕೈಗಾರಿಕಾ ಕ್ಷೇತ್ರದ ಹಿರಿಮೆಯನ್ನು ಅಳೆಯುವ ಸಾಧನ ಉದ್ಯೋಗಸ್ಥಿತಿಯೊಂದೇ ಎನ್ನುವುದು ತಪ್ಪಾಗುತ್ತದೆ. ನಾಲ್ಕನೆಯ ಯೋಜನೆಯು ನಿರೀಕ್ಷಿದಷ್ಟು ಪ್ರಗತಿ ಸಾಧಿಸದೆ ಇರಬಹುದು. ಆದರೆ ನಾಲ್ಕನೆಯ ಯೋಜನೆಯು ಕಾರ್ಯಗತವಾಗಲೇ ಇಲ್ಲವೆನ್ನುವುದು ತಪ್ಪಾಗುತ್ತದೆ.

ನಿವಾರಣಾಕ್ರಮಗಳು ಸೊರಾಗಿವೆ. (ಪುಟ 121) ರಾಜಕೀಯಸ್ಥರು ಅವನನ್ನು (ಕಾರ್ಮಿಕನನ್ನು) ಕೊಂಡಿ ರಕ್ತವನ್ನೇ ಕುಡಿಯುತ್ತಾರೆ. ಅವನ ತಲೆಯನ್ನು ಚೆಂಡಾಡುತ್ತಾರೆ. (ಪುಟ 99). ಕಾರ್ಮಿಕ 'ಅರಾಷ್ಟ್ರೀಯ: ಅವನು ಸ್ವಾರ್ಥಿಯು' (ಪುಟ 98). ಈ ವಾಕ್ಯಗಳಲ್ಲಿ ಉತ್ಪ್ರೇಕ್ಷೆ ಮತ್ತು ಆವೇಶದಿಂದ ಕೂಡಿವೆ. ಅದೂ ಅಲ್ಲದೆ ಔದ್ಯೋಗಿಕ ಶ್ರಮವನ್ನು (Industrial Labour) ಕುರಿತ ಅಧ್ಯಾಯದಲ್ಲಿ ಕೈಗಾರಿಕಾ ಕಾರ್ಮಿಕ ಹಾಗೂ ಕೃಷಿಕಾರ್ಮಿಕ ಮತ್ತು ಇತರ ಕಾರ್ಮಿಕರ ನಡುವಣ ವ್ಯತ್ಯಾಸವನ್ನು ಮರೆತಂತಿದೆ. "ನಮ್ಮ ಅನ್ನವನ್ನು ಬೆಳೆಯುವರು ಕಾರ್ಮಿಕರು", "ನಮ್ಮ ಮನೆಯನ್ನು ಕಟ್ಟುವವರು ಅವರು" (ಪುಟ 98) ಈ ವಾಕ್ಯಗಳು ಔದ್ಯೋಗಿಕ ಶ್ರಮವನ್ನು ಕುರಿತು ಬರೆಯುವಾಗ ಅಸಂಗತವಾಗುತ್ತವೆ. ನೈಸರ್ಗಿಕ ಸಂಪನ್ಮೂಲಗಳ ಅಧ್ಯಾಯ ಅಪೂರ್ಣವಾಗಿದೆ. ಖನಿಜಸಂಪತ್ತು ಮತ್ತು ಶಕ್ತಿಮೂಲ ಖನಿಜಗಳನ್ನು ಪ್ರಸ್ತಾಪಿಸಿಲ್ಲ.

ಪಿ.ಯು.ಸಿ. ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಅನೇಕ ಜೂನಿಯರ್ ಕಾಲೇಜುಗಳಲ್ಲಿ ಇದ್ದಾರೆ. ಅಲ್ಲಿ ಅವರಿಗೆ ಸುವ್ಯವಸ್ಥಿತ ಪುಸ್ತಕ ಭಂಡಾರವಾಗಲೀ, ಇತ್ತೀಚಿನ ಅರ್ಥಿಕ ನಿಯತಕಾಲಿಕಗಳಾಗಲೀ ಸಿಗುವುದಿಲ್ಲ. ಸುಸಜ್ಜಿತ ಪುಸ್ತಕಭಂಡಾರ, ಅನೇಕ ನಿಯತಕಾಲಿಕಗಳು ಮುಂತಾದುವುಗಳ ಸೌಲಭ್ಯ ಪಡೆದಿರುವ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಪಠ್ಯಪುಸ್ತಕಗಳಲ್ಲಿ, ಮುಖ್ಯವಾಗಿ ಅರ್ಥಿಕ ಯೋಜನೆಯಲ್ಲಿ, ಇತ್ತೀಚೆಗೆ ಆಗಿರುವ ಪ್ರಗತಿಯನ್ನು ನಿರೂಪಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಪುಸ್ತಕದ ಮುಂದಿನ ಆವೃತ್ತಿಯಲ್ಲಿ ಮೇಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಲಾಗುವುದೆಂದು ಆಶಿಸಲಾಗಿದೆ.

—ಡಾ. ಎಸ್. ಎಂ. ವೀರರಾಘವಾಚಾರ್

ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ : ಲೇ. ಡಾ. ಎಸ್. ಎ. ಪಾಟೀಲ್

ಭಾರತೀಯ ಸ್ತ್ರೀಯ ಬದಲಾಗುತ್ತಿರುವ ಸ್ಥಾನಮಾನಗಳು : ಲೇ. ಶ್ರೀ ಆರ್. ಡಿ. ಮೊಖಾಸಿ.

ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ (೧೯೭೬) ಇವೆರಡೂ ಕರ್ನಾಟಕ ವಿಶ್ವವಿದ್ಯಾನಿಲಯದ ಉಪನ್ಯಾಸಗ್ರಂಥಮಾಲೆಯ 231 ಮತ್ತು 236ನೆಯ ಪ್ರಕಟಣೆಗಳು.

ಮೊದಲ ಪುಸ್ತಕದಲ್ಲಿ ಲೇಖಕರೇ "ನನ್ನ ಮಾತು" ಎಂಬ ವಿಭಾಗದಲ್ಲಿ ಹೇಳಿರುವಂತೆ ವಿಸ್ತಾರವಾದ ವಿಷಯವನ್ನು "ಆನೆಯನ್ನು ಕನ್ನಡಿಯಲ್ಲಿ ತೋರಿಸಿದಂತೆ" ಆಗಿದೆ. 'ರಾಷ್ಟ್ರೀಯತೆ ಎಂದರೇನು' ಎಂಬ ಅಧ್ಯಾಯದಲ್ಲಿ ರಾಷ್ಟ್ರೀಯ ಭಾವನೆಯ ಅರ್ಥವನ್ನು ಚೆನ್ನಾಗಿ ತಿಳಿಸಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಭಾರತದಲ್ಲಿ ಸಾಂಸ್ಕೃತಿಕ ಪುನರುಜ್ಜೀವನವು ಹೇಗೆ ರಾಷ್ಟ್ರೀಯ ಬೆಳವಣಿಗೆಗೆ ಆಧಾರವಾಯಿತೆಂದೂ, ಭಾರತೀಯರು ಪಾಶ್ಚಾತ್ಯ ಶಿಕ್ಷಣದಿಂದ ಹೇಗೆ ಕೆಲವು ಅನುಕೂಲಗಳನ್ನು ಪಡೆದುಕೊಂಡರೆಂದೂ ತಿಳಿಸಿ, ಆಮೇಲೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹೇಗೆ ಎ. ಓ. ಹ್ಯೂಮ್‌ರ ಪ್ರೇರಣೆಯಿಂದ ಸ್ಥಾಪಿತವಾಯಿತೆಂದೂ ತಿಳಿಸಿದ್ದಾರೆ. ಆದೇ ಸಂದರ್ಭದಲ್ಲಿ ಜನರನ್ನು ಜಾಗೃತಗೊಳಿಸಿದ ಭಾರತೀಯನ ಎಂದರೆ ಸುರೇಂದ್ರನಾಥ ಬ್ಯಾನರ್ಜಿಯ ವಿಷಯವನ್ನು ತಿಳಿಸಬಹುದಾಗಿತ್ತು.

ಕರ್ನಾಟಕದಲ್ಲಿ ನಡೆದುಬಂದ ಸ್ವಾತಂತ್ರ್ಯ ಹೋರಾಟ ತೀವ್ರತರವಾಗಿಯೇ ಇತ್ತು. ಅದರಲ್ಲಿ ಸ್ತ್ರೀಯರೂ ಪ್ರಶಂಸನೀಯ ಪಾತ್ರವನ್ನು ವಹಿಸಿದ್ದರು. ಆದ್ದರಿಂದ 6ನೆಯ "ಸ್ವಾತಂತ್ರ್ಯ ಯುದ್ಧದಲ್ಲಿ ಕರ್ನಾಟಕದ ಪಾತ್ರ" ಎಂಬ ಅಧ್ಯಾಯದಲ್ಲಿ ಅಂತಹವರ ಬಗ್ಗೆ ಉಲ್ಲೇಖಗಳನ್ನು ಕೊಡಬಹುದಾಗಿತ್ತು. ಸುರಪುರ, ನರಗುಂದ ಮತ್ತು ಹಲಗಲಿ–ಪ್ರದೇಶಗಳ ಬಗ್ಗೆ ವಿವರಗಳನ್ನು ಒದಗಿಸಿದ್ದಾರೆ. ಬೆಳಗಾಮಿನ ಹತ್ತಿರದ ಬೆಳವಡಿಯ ಮಲ್ಲಮ್ಮನ, ಕೆಳದಿ ಚೆನ್ನಮ್ಮಾಜಿಯ, ಕಿತ್ತೂರು ಚೆನ್ನಮ್ಮನ, ಸಂಗೊಳ್ಳಿ ರಾಯಣ್ಣನ ವಿಷಯಗಳನ್ನು ಸಂಗ್ರಹಿಸಿ ಕೊಡಬಹುದಿತ್ತು. ಮುಂಡರಗಿಯ ಭೀಮರಾಯನ ವಿಷಯ ತಿಳಿಸಬಹುದಿತ್ತು. ನಂತರದ ಅಧ್ಯಾಯಗಳು ಕ್ರಮವಾಗಿ ಭಾಷೆಯ ಚಳುವಳಿ, ಕರ್ನಾಟಕದ 'ಏಕೀಕರಣದ ಚಳುವಳಿಗಳ ವಿಚಾರಗಳನ್ನು ಒಳಗೊಂಡಿವೆ. ಇಂಗ್ಲೀಷ್ ಶಿಕ್ಷಣ ಹಾಗೂ ರಾಷ್ಟ್ರೀಯತೆಯ ಉದಯ

ಮತ್ತು ಪಾಶ್ಚಾತ್ಯ ಪಂಡಿತರ ಪಾತ್ರ ಎಂಬ 11–12ನೆಯ ಅಧ್ಯಾಯಗಳನ್ನು ಪ್ರಾರಂಭದಲ್ಲೇ ಜೋಡಿಸಿದ್ದಲ್ಲಿ ಓದುಗರು ರಾಷ್ಟ್ರೀಯ ಭಾವನೆ ಹೇಗೆ ಬಲಗೊಂಡಿತೆಂಬ ವಿಚಾರವನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಲು ಅವಕಾಶವಾಗುತ್ತಿತ್ತು.

ಒಂದೆರಡು ಕಡೆಗಳಲ್ಲಿ ವಾಕ್ಯಗಳು ನೇರವಾಗಿ ಅರ್ಥಕೊಡುವುದಿಲ್ಲ.

ಈ ಹೊತ್ತಿಗೆಯನ್ನು ಇನ್ನೂ ವಿಸ್ತರಿಸಿ ಬರೆದಿದ್ದಲ್ಲಿ ಲೇಖಕರು ತಿಳಿಸಿರುವ ಗುರಿ ಚೆನ್ನಾಗಿ ಸಾಧನೆಯಾಗುತ್ತಿತ್ತು.

ಮೊಟಾಸಿಯವರು ಭಾರತೀಯ ಸ್ತ್ರೀ ಈ ದೇಶದ ಇತಿಹಾಸದ ಮುಖ್ಯವಾದ ಯುಗಗಳಲ್ಲಿ ಎಂದರೆ ವೇದಕಾಲ, ರಾಮಾಯಣ–ಮಹಾಭಾರತದಕಾಲ, ಜೈನ ಹಾಗೂ ಬೌದ್ಧಮತಗಳ ಕಾಲ, ಮಧ್ಯಕಾಲ, ಬ್ರಿಟಿಷರ ಕಾಲ ಮತ್ತು ಸ್ವಾತಂತ್ರ್ಯದ ನಂತರದ ಕಾಲಗಳಲ್ಲಿ ಬೇರೆಬೇರೆ ಸನ್ನಿವೇಶಗಳಲ್ಲಿ, ಕೆಲವು ಸಮಯಗಳಲ್ಲಿ ಉತ್ತಮ ಸ್ಥಿತಿಯನ್ನು ಮತ್ತೆ ಕೆಲವು ಸಮಯಗಳಲ್ಲಿ ತೀರಾ ಅನಾದರಣೆಯನ್ನೂ ಕೂಡ ಕಂಡಳೆಂಬುದನ್ನು ಚೆನ್ನಾಗಿ ತಿಳಿಸಿದ್ದಾರೆ. ಸ್ತ್ರೀಯನ್ನು ಪುರುಷನು ದೇವತೆಯಂತೆ ಕಾಣುತ್ತಿದ್ದನೆಂಬುದಕ್ಕೆ ವೇದಕಾಲ, ಶೃತಿ, ಸ್ಮೃತಿ–ಮಹಾಕಾವ್ಯಗಳ ಕಾಲದಲ್ಲಿನ ಆಧಾರಗಳನು ತೋರಿಸಿದ್ದಾರೆ. ಆ ಆಧಾರಗಳನ್ನು ಉಲ್ಲೇಖಿಸಿದ್ದರೆ ಚೆನ್ನಾಗಿರುತ್ತಿತ್ತು. ಅಂತಹ ಹೇಳಿಕೆಗಳು ಬರಿಯ ಮಾತಲ್ಲ, ಆಧಾರ ಸಹಿತವಾದ ಹೇಳಿಕೆಗಳು ಎಂಬುದು ತಿಳಿಯಬರುತ್ತಿತ್ತು. ಹಾಗೆಯೇ ಹೆಚ್ಚಿನ ಅಧ್ಯಯನಕ್ಕೆ ಮಾರ್ಗ ದರ್ಶನ ಮಾಡಿದಂತಾಗುತ್ತಿತ್ತು.

ಈ ಪುಸ್ತಕವನ್ನು ಓದುವಾಗ ಯಾವ ಯಾವ ಹಂತದಲ್ಲಿ ಪುರುಷನು, ಸ್ತ್ರೀಗೆ ಒಳ್ಳೆಯ ಗುಣಗಳನ್ನು ಆರೋಪಿಸಿ ಉದಾಹರಿಸಲು ಮಾತ್ರ ಅವಕಾಶಕೊಟ್ಟು, ನಿಜಜೀವನದಲ್ಲಿ ಅವಳನ್ನು ತನ್ನ ಮನಸ್ಸಿಗೆ ಬಂದ ರೀತಿ ಉಪಯೋಗಿಸಿಕೊಳ್ಳುವ ಕುಶಲತೆಯನ್ನು ತೋರಿಸುತ್ತಿರುವನೆಂದೂ ಕೂಡ ಭಾಸವಾಗುತ್ತದೆ. ಹಾಗೆ ಯೋಚಿಸಲು ಲೇಖಕರು ಕೆಲವು ಆಧಾರಯುತವಾದ ಹೇಳಿಕೆಗಳನ್ನು ಕೊಟ್ಟಿದ್ದಾರೆ. ವೇದಕಾಲದಲ್ಲಿದ್ದಷ್ಟು ಸ್ವಾತಂತ್ರ್ಯ ಮುಂದಿನ ದಿನಗಳಲ್ಲಿ ಇರಲಿಲ್ಲವೆಂಬುದು ಈ ಪುಸ್ತಕದ ಮೂಲಕ ಚೆನ್ನಾಗಿ ತಿಳಿದುಬರುತ್ತದೆ. ಇನ್ನೂ ಕೂಡ ಮನೆಗಳಲ್ಲಿ ಹೆಣ್ಣುಮಕ್ಕಳು ಸ್ವತಂತ್ರವಾಗಿ ಆಲೋಚನೆ ಮಾಡುವುದು, ಸ್ವತಂತ್ರ ಗುರಿಯೊಂದನ್ನು ಹೊಂದುವುದು ನಮ್ಮ ನಾಡಿನಲ್ಲಿ ಸರ್ವತ್ರ ಒಪ್ಪಿಗೆಯಾದಂತಿಲ್ಲ. "ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಹೀಗಿರಲಿಲ್ಲ" ಎಂಬ ಮಾತು ಕೇಳಿಬರುತ್ತದೆ. ಹಾಗೆ ತಿಳಿದಿರುವವರಂತೂ ಈ ಪುಸ್ತಕವನ್ನು ಓದಲೇಬೇಕು.

ಆದರೆ 8ನೆಯ ಅಧ್ಯಾಯದಲ್ಲಿ–"ಸ್ವತಂತ್ರ ಭಾರತದ ಸ್ತ್ರೀ" ಎಂಬುದರಲ್ಲಿ ಅವರು ಉಲ್ಲೇಖಿಸಿರುವ ಕಾನೂನುಗಳ ಬಗ್ಗೆ ಪರಿಚಯ ಸಂಕ್ಷಿಪ್ತವಾಗಿದೆ. ಅವುಗಳನ್ನು ಕುರಿತು ಮತ್ತೆ ಕೆಲವು ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಲೇಖಕರು ರೀತಿ 9 ಮತ್ತು 10ನೆಯ ಅಧ್ಯಾಯಗಳಲ್ಲಿ ತಿಳಿಸಿರುವ "ಸ್ತ್ರೀ ವಿಮೋಚನಾ ಚಳುವಳಿ"ಯ ಬಗ್ಗೆ ಇರುವ ವಿಚಾರಗಳು ನಮ್ಮ ವಿವೇಚನಾ ಶಕ್ತಿಯನ್ನು ಹೊಡೆದೆಬ್ಬಿಸುತ್ತವೆ. ಈ ಚಳುವಳಿ ಉತ್ತಮ ಪರಿಸ್ಥಿತಿಗೆ ದಾರಿಮಾಡಿಕೊಡಬೇಕಾದರೆ ಯಾವ ಮಾರ್ಗಕ್ಕೆ ತಿರುಗಬೇಕೆಂದೂ, ಇಲ್ಲದಿದ್ದಲ್ಲಿ ಏನು ನಷ್ಟವಾಗುವುದೆಂದು ಹೇಳಿದ್ದಾರೆ. ಅವು ಉತ್ತಮ ಅಭಿಪ್ರಾಯಗಳಾಗಿವೆ.

"ಯಾವ ಮತ್ಸರವಿಲ್ಲದೇ ಭಾರತೀಯ ಮಹಿಳೆ ಪುರುಷನ ಶ್ರೇಷ್ಠತೆಯನ್ನು ಹಾಗೂ ತಮ್ಮ ಸೇವಾ ಮನೋಭಾವನೆಯನ್ನು ಒಪ್ಪಿಕೊಂಡರೆ ಆಶ್ಚರ್ಯವೇನಿಲ್ಲ "ಈ ವಾಕ್ಯನಲ್ಲಿ ಇನ್ನೂ ಸಂಪ್ರದಾಯ ಬದ್ಧತೆಯ ಛಾಯೆ ಉಳಿದಿದೆ. ಏಕೆಂದರೆ ಸ್ತ್ರೀಯಾಗಲೀ, ಪುರುಷನೇ ಆಗಲಿ ಯಾರು ತಮ್ಮ ಕೆಲಸದಲ್ಲಿ ಅಸಾಧಾರಣ ಶಕ್ತಿಯನ್ನು ತೋರಿಸುವರೋ ಅವರು ತಾನೆ ಶ್ರೇಷ್ಠರು. ಅಂದಮೇಲೆ ಪುರುಷನ ಶ್ರೇಷ್ಠತೆ ಎಂಬ ಭಾವನೆ ಆಧಾರವಿಲ್ಲದ್ದು. ಒಟ್ಟಿನಲ್ಲಿ ಇದು ವಿಚಾರವನ್ನು ಪ್ರಚೋದಿಸುವ ಪುಸ್ತಕವಾಗಿದೆ ಎಂಬುದು ನಿಸ್ಸಂಶಯ.

—ಕೆ. ಪದ್ಮಾವತಮ್ಮ

ಕಲಿಸುವ ಸಾಮಾನ್ಯ ಪದ್ಧತಿಗಳು : ಲೇ : ಪ್ರಿ. ಜಿ. ಮಾಲೀಪಾಳ : ಪ್ರ : ಪಠ್ಯಪುಸ್ತಕ ನಿರ್ದೇಶನಾಲಯ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ (pp XIX + 438)

ಕಲಿಸುವ ಸಾಮಾನ್ಯ ಪದ್ಧತಿಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಮೊಟ್ಟಮೊದಲಬಾರಿಗೆ ಪ್ರಕಟವಾದ ಈ ಗ್ರಂಥವು ಬಹುಮಟ್ಟಿಗೆ ನಮ್ಮ ಶಾಲೆಗಳಲ್ಲಿ "ಕಲಿಸುವ ಸಾಮಾನ್ಯ ವಿಧಾನಗಳ ಎಲ್ಲ ವಿಷಯಗಳನ್ನೂ ಒಳಗೊಂಡಿದೆ ಮತ್ತು ಶಿಕ್ಷಕವೃತ್ತಿಗಾಗಿ ಸಿದ್ಧರಾಗುತ್ತಿರುವ ನಮ್ಮ ಶಿಕ್ಷಕರಿಗೆ ನೆರವು ನೀಡಲು ಹಾಗೂ ಮಾರ್ಗದರ್ಶನವನ್ನೊದಗಿಸಲು ಪ್ರಯತ್ನಿಸುತ್ತದೆ.

ಈ ಗ್ರಂಥವನ್ನು ಎಂಟು ಘಟಕಗಳನ್ನಾಗಿ ವಿಭಾಗಿಸಲಾಗಿದೆ. ಇದರ ಮೊದಲ ಐದು ಘಟಕಗಳಲ್ಲಿ ಕಲಿಸುವ ತತ್ತ್ವಗಳನ್ನು ವಿಶದವಾಗಿ ತಿಳಿಸಿ ವಿವಿಧ ರೀತಿಯ ಪಾಠಯೋಜನೆಗಳನ್ನು, ಹಲವು ಬಗೆಯ ಕಲಿಸುವ ತಂತ್ರಗಳನ್ನು ವಿವರಿಸಲಾಗಿದೆ. ತರಗತಿಯಲ್ಲಿ ಶಿಕ್ಷಕ ಹಾಗೂ ಅವನ ಕಾರ್ಯನಿರ್ವಹಣೆಯನ್ನು ಕುರಿತ ವಿವರಪೂರ್ಣವಾದ ಮಾಹಿತಿಯನ್ನು ಇಲ್ಲಿ ನೀಡಿದೆ. ಅನಂತರ ಶಿಕ್ಷಣದಲ್ಲಿನ ಹೊಸಹೊಸ ಪ್ರವೃತ್ತಿಗಳು ಮುಂತಾದುವುಗಳನ್ನು ವಿವರಿಸಲಾಗಿದೆ. ಜೊತೆಗೆ ಈ ಲೇಖಕರು ತಾವು ಭಾವಿಸಿಕೊಂಡಿರುವ ಪ್ರಕಾರ ಸಾಮೂಹಿಕ ಗುಂಪುಗಳ ಮೂಲಕ ಕಲಿಸುವುದೇ ಹೊಸ ಶಿಕ್ಷಣದ ಪರಮಕಲ್ಪನೆಯೆಂಬ ಬಗ್ಗೆ ವಿವರಣಾತ್ಮಕವಾದ ಅಧ್ಯಾಯವೊಂದನ್ನು ಸೇರಿಸಿದ್ದಾರೆ.

ಲೇಖಕರು ವಸ್ತುವಿಷಯವನ್ನು ಪರಿಗಣಿಸುವಾಗ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ವಿಶೇಷ ಕ್ರಮವಹಿಸಿ ಆಯಾ ಅಧ್ಯಾಯದ ಮುಖ್ಯಸಾರಾಂಶವನ್ನು ಕೊಟ್ಟಿದ್ದಾರೆ. ಮತ್ತು ಮೊದಲು ಚರ್ಚಿಸಲಾಗಿರುವ ವಿಷಯವನ್ನಾಧರಿಸಿ ಅಭ್ಯಾಸಕ್ಕಾಗಿ ಕೆಲವು ಪ್ರಶ್ನೆಗಳನ್ನು ನೀಡಿದ್ದಾರೆ. ಪ್ರತಿಯೊಂದು ಅಧ್ಯಾಯದಲ್ಲಿ ಸಾಕಷ್ಟು ದೀರ್ಘವಾದ ಆಧಾರಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಒಬ್ಬ ಶಿಕ್ಷಕನಾಗಿ ಉದ್ಯೋಗ ನಿರ್ವಹಿಸುವವನಿಗೆ ಈ ವಿಷಯಗಳು ನಿಯಮಿತವಾಗಿಯೂ ಸ್ವಲ್ಪಮಟ್ಟಿಗೆ ನೆರವಾಗುವುದರಲ್ಲಿ ಸಂದೇಹವಿಲ್ಲ.

ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಣಕಾಲೇಜಿನಲ್ಲಿ ಸಾಕಷ್ಟು ದೀರ್ಘಕಾಲದ ಬೋಧನೆಯ ಅನುಭವವನ್ನು ಪಡೆದಂತಹ ಲೇಖಕರು ಈ ಗ್ರಂಥವು ಅನೇಕ ರೀತಿಗಳಲ್ಲಿ ಉಪಯುಕ್ತವಾಗುವಂತೆ ಮತ್ತು ಹೆಚ್ಚು ವ್ಯಾಪಕ ವಿಷಯಗಳನ್ನೊಳಗೊಂಡಿರುವಂತೆ ಶ್ರಮಿಸಿದ್ದಾರೆ: ಪ್ರಜ್ಞಾಪೂರ್ವಕವಾಗಿ ದುಡಿದಿದ್ದಾರೆ. ಮುಖ್ಯವಾಗಿ ಶಿಕ್ಷಕರಿಗೆ ಬೋಧಿಸುವಂತಹ ತಮ್ಮ ಶಿಕ್ಷಕವೃತ್ತಿಯ ಅವಧಿಯಲ್ಲಿ ಅವರು ಗಳಿಸಿದ್ದಂತಹ ಅಪಾರವಾದ ಅನುಭವವನ್ನಾಧರಿಸಿ ಕಲಿಸುವಿಕೆಯಲ್ಲಿನ ಸಮಸ್ಯೆಗಳಿಗೆ ಸ್ವಲ್ಪಮಟ್ಟಿಗೆ ವೈಯಕ್ತಿಕ ಉಪಾಗಮನವನ್ನೀಯಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಈ ಗ್ರಂಥವು ಕನ್ನಡ ಮಾಧ್ಯಮದ ಮೂಲಕ ವ್ಯಾಸಂಗಮಾಡಿ ಪರೀಕ್ಷೆಯಲ್ಲಿ ಉತ್ತರಿಸಬಯಸುವ ವಿದ್ಯಾರ್ಥಿಸಮುದಾಯದ ಅಗತ್ಯಗಳನ್ನು ಸ್ವಲ್ಪಮಟ್ಟಿಗೆ ಪೂರೈಸುತ್ತದೆ. ಏಕೆಂದರೆ ಅವನು ತನಗೆ ಗೊತ್ತಿರುವಂತಹ ಭಾಷೆಯಲ್ಲಿ ಕಲಿಸುವ ವಿಧಾನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒಂದೇ ಗ್ರಂಥದೊಳಗೆ ಸಂಕಲಿಸಿರುವುದನ್ನು ಇದರಲ್ಲಿ ಕಾಣಬಹುದು. ಇಂತಹದೊಂದು ಗ್ರಂಥವಿಲ್ಲದಿದ್ದರೆ ಕನ್ನಡ ಮಾಧ್ಯಮದಲ್ಲಿ ಉತ್ತರಿಸಲಪೇಕ್ಷಿಸುವ ವಿದ್ಯಾರ್ಥಿಗಳು ಪರೀಕ್ಷಾಭವನದಲ್ಲಿ ಬರೆಯುವ ಮುಂಚೆ ಅದನ್ನು ಕನ್ನಡದಲ್ಲಿ ಭಾಷಾಂತರಿಸಬೇಕಾಗುತ್ತಿತ್ತು ಮತ್ತು ಅದಕ್ಕಿಂತ ಮುಂಚೆ ಪರಭಾಷೆಯ ಅಂದರೆ ಇಂಗ್ಲೀಷ್ ಪುಸ್ತಕಗಳಿಂದ ವಿಷಯಗಳನ್ನು ಸಂಗ್ರಹಿಸಿ, ಅದನ್ನು ಓದಿ, ಅರ್ಥಮಾಡಿಕೊಂಡು ಅರಗಿಸಿಕೊಳ್ಳಬೇಕಾಗುತ್ತಿತ್ತು. ಹೀಗೆ ಅವರು ವಿಷಯ ಸಂಗ್ರಹಣೆ, ನಿರೂಪಣೆಗಳಿಗಾಗಿ ಪರದಾಡಬೇಕಾಗುತ್ತಿತ್ತು.

ಆದರೆ, ಇಂತಹದೊಂದು ಗ್ರಂಥವು ಕಾಲೋಚಿತವಾದ ಕಲಿಸುವ ವಿಧಾನಗಳನ್ನೊಳಗೊಂಡಿರಬೇಕೆಂದೂ, ಶಿಕ್ಷಣಕ್ಷೇತ್ರದಲ್ಲಿನ ತೀರ ಇತ್ತೀಚಿನ ಆಲೋಚನಾಪ್ರಣಾಲಿಯನ್ನು ಬಿಂಬಿಸುವಂತಿರಬೇಕೆಂದೂ ನಿರೀಕ್ಷಿಸಿದರೆ ತಪ್ಪೇನಿಲ್ಲ. ಆದರೆ ದುರದೃಷ್ಟದ ಸಂಗತಿಯೇನೆಂದರೆ ಲೇಖಕರು ಪಾಠರಚನೆಯ ಮೌಲ್ಯಮಾಪನ–ಉಪಾಗಮನದ ಕಡೆಗೆ ಗಮನವನ್ನೇ ನೀಡಿಲ್ಲ. ಅಥವಾ ರಾಜ್ಯದ ಇತರ ಸೋದರ ವಿಶ್ವವಿದ್ಯಾನಿಲಯಗಳಲ್ಲಿನ ಶಿಕ್ಷಣಕಾಲೇಜುಗಳು ಅನುಸರಿಸುತ್ತಿರುವ ಬೋಧನೆ-ವ್ಯಾಸಂಗ ಪ್ರಕ್ರಿಯೆಯಲ್ಲಿನ ಈಚಿನ ಪ್ರವೃತ್ತಿಗಳೇನೆಂಬುದರ ಬಗೆಗೆ ಗಮನವೇ ಹರಿಸಿಲ್ಲ.

ವಿವಿಧ ಅಧ್ಯಾಯಗಳಲ್ಲಿ ವಿಷಯಗಳನ್ನು ವ್ಯವಸ್ಥೆಗೊಳಿಸುವುದರಲ್ಲಿ ವಸ್ತುವನ್ನು ಸುಬದ್ಧವಾದ ರೀತಿಯಲ್ಲಿ ಮತ್ತು ವಿವೇಚನಾಯುತವಾಗಿ ವ್ಯವಸ್ಥೆಗೊಳಿಸುವ ಬಗ್ಗೆ ಗಂಭೀರ ಚಿಂತನೆಯನ್ನೇ ಮಾಡಿಲ್ಲ ಎಂಬುದನ್ನು ನೋಡಬಹುದು. ಶ್ರೇಷ್ಠದರ್ಜೆಯ ಲೇಖಕರ ಹೇಳಿಕೆಗಳನ್ನು ಮಾತ್ರ ಸಂಕಲಿಸಿ ಈ ಗ್ರಂಥವನು ಪ್ರಕಟಿಸಿದ್ದಾರೆಯೇ ಹೊರತು ಭಾರತೀಯ ಪರಿಸ್ಥಿತಿಗಳಿಗನುಗುಣವಾಗಿ ವಿಮರ್ಶಾತ್ಮಕ ಮೌಲ್ಯಮಾಪನಕ್ಕೆ ಒಳಪಡಿಸಿಲ್ಲವೆಂಬುದು ಯಾರಿಗಾದರೂ ತಿಳಿಯುವ ಸಂಗತಿಯೇ ಆಗಿದೆ. ವಾಸ್ತವವಾಗಿ ಕೆಲವಾರು ಅಧ್ಯಾಯಗಳನ್ನಂತೂ ತೀರ ಜಾಳುಜಾಳಾಗಿ ವ್ಯವಸ್ಥೆಗೊಳಿಸಲಾಗಿದೆ. ಮತ್ತು ಅವುಗಳಲ್ಲಿ ತಾರ್ಕಿಕ ಬೆಳವಣಿಗೆಯೇ ಕಂಡುಬರುವುದಿಲ್ಲ. ಪಠ್ಯಗ್ರಂಥದಲ್ಲಿನ ಪ್ಯಾರಾಗಳ ಉಪವಿಭಾಗಗಳಲ್ಲಿ ಕೆಲವು ಅಂಶಗಳನ್ನು ಲೇಖಕರು ನೀಡಿದ್ದಾರೆ. ಇದು ಲೇಖಕರು ವಿದ್ಯಾರ್ಥಿಗಳಿಗೆ ಒಳ್ಳೆಯ "ಮಾರ್ಗದರ್ಶಿ-ಗ್ರಂಥವೊಂದನ್ನು ಒದಗಿಸುವಲ್ಲಿ ಆತುರರಾಗಿದ್ದಾರೆ ಎಂಬ ಅಭಿಪ್ರಾಯವನ್ನು ಓದುಗರಿಗೆ ಮೂಡಿಸುತ್ತದೆ!

ಈ ಗ್ರಂಥವು ಸುಚಿತ್ರಾತ್ಮಕವಾದ ಮತ್ತು ಶಾಬ್ದಿಕವಾದ ಅನೇಕ ದೃಷ್ಟಾಂತಗಳನ್ನೊದಗಿಸುತ್ತದೆ. ಅನೇಕ ಶಾಬ್ದಿಕ ಉದಾಹರಣೆಗಳನ್ನು ಪುನರಾವರ್ತಿಸಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲೂ ಚಿತ್ರಾತ್ಮಕವಾದ ದೃಷ್ಟಾಂತಗಳನ್ನು ಹೆಚ್ಚಾಗಿ ಮುದ್ರಿಸಲಾಗಿದೆ. ಅನೇಕ ಪ್ರಸಂಗಗಳಲ್ಲಿ ಈ ದೃಷ್ಟಾಂತಗಳು, ಇಂತಹ ದೃಷ್ಟಾಂತಗಳನ್ನು ಸೇರಿಸುವುದರ ನಿಜವಾದ ಉದ್ದೇಶವೇನೆಂಬುದನ್ನು ಸ್ಪಷ್ಟವಾಗಿ ಸೂಚಿಸುವುದಿಲ್ಲ! ಕೆಲವಾರು ಪ್ರಸಂಗಗಳಲ್ಲಿಯಂತೂ ಗ್ರಂಥದಲ್ಲಿ ಕೆಲವಾರು ದೃಷ್ಟಾಂತಗಳನ್ನು ಸೇರಿಸಲೇಬೇಕು ಎಂಬ ಹಟದಿಂದ ದೃಷ್ಟಾಂತಗಳನ್ನು ಸೇರಿಸಲಾಗಿದೆ ಎಂದು ತೋರುತ್ತದೆ. ಮತ್ತು ಸಣ್ಣದೊಂದು 'ಪದಪುಂಜ'ದ ಮೂಲಕ ಮಾತ್ರ ವಿವರಿಸಲಾಗಿರುವ ಮತ್ತು ದೃಷ್ಟಾಂತಕ್ಕಿಂತ ತೀರ ಭಿನ್ನವಾದ ಅಲ ಅಭಿಪ್ರಾಯದ ಮೇಲೆಯೇ ಆಧರಿಸಿ ಇದನ್ನು ಬರೆಯಲಾಗಿದೆ. (ಪುಟ 60 ಮತ್ತು ಪುಟ 68 ರಲ್ಲಿನ ಪದಪುಂಜದಲ್ಲಿನ ದೃಷ್ಟಾಂತವನ್ನು ನೋಡಿ)

ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ನೀಡಲಾಗಿರುವ ಪ್ರಶ್ನೆಗಳಂತೂ ತೀರ ಸಾಮಾನ್ಯ ರೀತಿಯವುಗಳಾಗಿವೆ ಮತ್ತು ಈ ಗ್ರಂಥವನ್ನೇ ಪಠ್ಯಪುಸಕವನ್ನಾಗಿ ಓದಬೇಕಾಗಿರುವ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಲು ಅವು ನೆರವಾಗುವುದಿಲ್ಲ! ಪಠ್ಯಗ್ರಂಥದಲ್ಲಿನ ಪ್ಯಾರಾಗಳನ್ನು ಆಧರಿಸಿ ಲೇಖಕರು ಪ್ರಶ್ನೆಗಳ ಪಟ್ಟಿಯನ್ನು ನೀಡಿರುವುದು ನಿಜಕ್ಕೂ ದುರದೃಷ್ಟಕರ! ಇಂತಹ ಪ್ರಶ್ನೆಗಳು ನೈಜವಾದ ಯಾವುದೇ ಉದ್ದೇಶವನ್ನಾದರೂ ಸಾಧಿಸುತ್ತದೆಯೇ ಎಂಬುದು ಸಂದೇಹಾಸ್ಪದ. ಕೆಲವಾರು ಪ್ರಶ್ನೆಗಳಂತೂ ಪಠ್ಯಗ್ರಂಥದಲ್ಲಿ ವಿವರಿಸಲಾಗಿರುವ ಅಭಿಪ್ರಾಯಗಳಿಗೆ ಯಾವರೀತಿಯಲ್ಲೂ ಸಂಗತವಾಗಿರುವುದಿಲ್ಲ! ಉತ್ತರ ಕರ್ನಾಟಕದವರಾದ ಲೇಖಕರು ತಮ್ಮ ಆ ಪ್ರದೇಶದ ಆಡುಭಾಷೆಯಿಂದ ವಿಶೇಷವಾಗಿ ಪ್ರಭಾವಿತರಾಗಿದ್ದಾರೆ. ಈ ಪಠ್ಯಪುಸ್ತಕದ ಉದ್ದಕ್ಕೂ ಉಪಯೋಗಿಸದಂತಹ ಇತರ ಸೋದರ ಭಾಷೆಗಳ ಅಗ್ರಾಹ್ಯ ಪದಗಳಿಗೆ ಬದಲಾಗಿ ಕನ್ನಡ ಪದಗಳನ್ನು ಬಳಸಿದ್ದ ಪಕ್ಷದಲ್ಲಿ ಈ ಗ್ರಂಥದ ಉಪಯುಕ್ತತೆ ಹೆಚ್ಚಬಹುದಿತ್ತು. ಈ ಪಠ್ಯಗ್ರಂಥದ ಉದ್ದಕ್ಕೂ ಪದಗಳ ಬಳಕೆಯಲ್ಲಿ ಏಕರೂಪತೆಯಿರುವಂತೆ ನೋಡಿಕೊಳ್ಳುವುದೂ ಕೂಡಾ ಅವಶ್ಯಕವಾಗಿತ್ತು. ಲೇಖಕರು ತಾವು ಬಳಸಿದ ವಿವಿಧ ಪದಗಳಿಗೆ ವಿವರಣೆಯನ್ನು ನೀಡಿದ್ದಾರೆ ಆದರೆ ಕನ್ನಡ ಭಾಷೆಯಲ್ಲಿ ಸಮಾನಪದಗಳು ದೊರೆಯುವಾಗ ಅವುಗಳನ್ನೇ ಬಳಸುವುದು ಖಂಡಿತವಾಗಿಯೂ ಪ್ರಯೋಜನಕರವಾಗಿದೆ. ಎಂಬ ಮಾತನ್ನೂ ಹೇಳಲೇಬೇಕು

ಇಷ್ಟೆಲ್ಲ ವಿಷಯಗಳನ್ನು ಹೇಳಿದರೂ. ಈ ಬಗೆಯ ಗ್ರಂಥವೊಂದನ್ನು ಹೊರತರುವಲ್ಲಿ ಲೇಖಕರು ವಹಿಸಿದಂತಹ ಮಾರ್ಗದರ್ಶಕ ಸಾಧನೆಯ ಬಗೆಗೆ ಯಾರಾದರೂ ಖಂಡಿತವಾಗಿಯೂ ಮೆಚ್ಚುಗೆ ತೋರಿಸುವರು. ಸೂಕ್ತವಾದ ಮಾರ್ಗದರ್ಶನದ ನೆರವಿನಿಂದ ಈ ಗ್ರಂಥವನ್ನು ಓದಿದಾಗ, ಅದು ವಿದ್ಯಾರ್ಥಿಗೆ ಆತನ ಅಧ್ಯಯನಗಳಿಗೆ ಪ್ರಯೋಜನವಾಗುವುದು.

ಆದರೆ, ವಿಮರ್ಶಕರ ದೃಷ್ಟಿಯಿಂದ ಪರಿಶೀಲಿಸಿದರೆ, ಈ ಗ್ರಂಥಕ್ಕೆ ಅನೇಕ ಪರಿಮಿತಿಗಳಿವೆ. ಲೇಖಕರು ಈ ಗ್ರಂಥವನ್ನು ಮರುಮುದ್ರಣಕ್ಕೆ ಕಳುಹಿಸು ಮುನ್ನ ಹೆಚ್ಚು ಗಂಭೀರವಾಗಿ ಕುಳಿತು ವಿಷಯವು ಕಾಲೋಚಿತವಾಗಿರುವಂತೆ, ಅದನ್ನು ಪುನರ್‌ವ್ಯವಸ್ಥೆಗೊಳಿಸಲು ಪ್ರಯತ್ನಿಸುವುದು ಆವಶ್ಯಕ.

ರಾಮು ಕುಲಕರ್ಣಿ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ
★ ಪ್ರಬುದ್ಧ ಕರ್ಣಾಟಕ
★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು–೫೭೦೦೧೨